ಪ್ರಜಾವಾಣಿ ಭಾನುವಾರ • ಮಾರ್ಚ್ 30, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಟೆಲಿಕಾಂ ಎಂಪ್ಲಾಯೀಸ್ ಅಂಡ್ ಅದರ್ಸ್ ಹೌಸಿಂಗ್ ವೆಲ್ಫೇರ್ ಟ್ರಸ್ಟ್ (ರಿ.)

TELECOM EMPLOYEES AND OTHERS HOUSING WELFARE TRUST [R]

TELECOM EMPLOYEES AND OTHERS HOUSING WELFARE TRUST [R] ESTD - 2017

Reg No. GAN-400021-2017-18 C.D. No. GAND287 TELECOMEMPHOUSINGTRUST.COM

LOOKING FOR INVESTMENT PURPOSE?

Happy Ugadi

EASY 4 INSTALMENTS

BOOKING OPEN FOR EMPLOYEES & GENERAL PUBLIC

May this Ugadi bring you new hopes, new dreams, and new opportunities!

N. NARASIMHA MURTHY
PRESIDENT

DEVANAHALLI



Devanahalli

TUMKUR

Basavapattana, Kyathsandra

TUMKUR



BM Palya, Mydala Road (K.Palya)

NELAMANGALA

OBLAPURA, NELAMANGALA

MYSORE

Doora Main Road, Murudagalli

HEJJALA

Hejjala Main Road, Doddery

DEVANAHALLI

Budigere Road

KUNIGAL

KRS Agrahara, Kunigal Town

DODDBALLAPURA

Shivapura Konagatta Road

Mob : +91 7353 45 65 75 /+91 9480109111

LTG LET'S TOGETHER GROW

ಯುಗಾದಿ ಉತ್ಸವ

LTG AISHWARYA INDRAPRASTHA

Off Mysuru Road

ಈ ಯುಗಾದಿಯಂದು,
ನಿಮ್ಮ ಉಜ್ವಲ ಭವಿಷ್ಯಕ್ಕೆ
ಹೂಡಿಕೆ ಮಾಡಿ!

ಸ್ಮಾರ್ಟ್ ರಿಯಲ್ ಎಸ್ಟೇಟ್ ಹೂಡಿಕೆಯೊಂದಿಗೆ ಹೊಸ ಆರಂಭವನ್ನು ಆಚರಿಸಿ.

₹42 L* ದಿಂದ ಪ್ರಾರಂಭ
ಇತರ ಶುಲ್ಕಗಳನ್ನು ಹೊರತುಪಡಿಸಿ

ಮೌಲ್ಯ ಹೆಚ್ಚುವಿಕೆ

RERA- ಅನುಮೋದಿತ ಪ್ಲಾಟ್‌ಗಳು

ಪ್ರಧಾನ ಸ್ಥಳಗಳು

*ನಿಯಮ ಮತ್ತು ಷರತ್ತು ಅನ್ವಯ

ಬಿಡದಿ, ಮೈಸೂರು ರಸ್ತೆ

89040 13344

www.ltgindia.com
www.ltgindraprastha.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE for Sale, Residential and Prime Commercial, Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

Bannerghatta Road

FOR SALE .north facing site in a private layout 50x75.. B khatha with shed rental 30k. Basvanapura. Bannerghatta road Price 5000 rs/ sqft .Slightly negotiable. Contact 9242444999 Brokers excuse..



Basaweshwaranagar

***BASAVESHWARANAGAR* PAVITHRA** Paradise Circle Commercial 40x60,Judges Colony Residencial E/F 40x60 Site sale. Contact:-9945079777

Girinagar

CORNER SITE in GIRINAGAR 4th phase Measuring 2600 Square feet for SALE. 5.1 Crores. Genuine buyers contact: 9611843935.

Jayanagar

BDA SITE for Sale, Residential and Prime Commercial, Jayanagara, JP Nagara, BMT Layout, HSR Layout, Koramangala 30x40, 40x60, 50x80. 9916592400

J P Nagar

JPNAGAR 1ST Phase, 2,040 SqFt. BDA Approved, SE Corner Site, Navodaya Layout, beside Banashankari Metro and behind Sobha Dewflower Apartment 16,500/ SqFt. 9900955337

JPNAGAR PHASE 5 BDA Approved 2400Sft Land with G + 1 Floor Building. Agents Excuse: 9341273990

Kanakapura Road

BDA SITE for Sale, Residential and Commercial, Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road, 30x40, 40x60, 50x80. 9916592400

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

FOR SALE BDA allotted and BDA auction @ Kempegowda Layout Near to Chalagatta metro station Mysore road. 30x40, 40x60, 50x80 and 15000 sqft Corner plot available. 9916592400

KEMPEGOWDA LAYOUT Site Sale 4th Block #4160 40X60, 7th Block #2792 30X40 Call: 9900444944/ 9844262220

Mysore Road

"25X40 CORNER Near`Hejjala Railway Station BMRDA Approved 3000/- P.Sft, 30x40 BigBanyan Tree ₹19 Lakhs. 9845178335"

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Outer Ring Road

ORR (MAGADI RD- TUMKUR RD)facing Corner A&E Site 2,800Sft in Chowdeshwarinagar @Rs.24,000/Sft Call:9980555558

Out-Station

KHB SITE 60x40 East Facing, Housing Board colony (Kempegowda layout) Near citizen public school Nanjanagudu. Owner: 8310030380

Sanjaynagar

FOR SALE SITE/House 56X40 near Sanjaynagar main road; facing south; Genuine Buyers contact owner 9986023257

Vishweshwariah Layout

40X60 NORTH_FACE HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site_Sale Reasonable_Price Call:9945191143 9945694783.

"VISHVESWARAIAH LAYOUT 6th Block near KLE Law College 40x60 North 100%`Vastu, 90%`White. 7022218837

VISHWESHWARAIA LAYOUT 40x60 BDA SITE Sale 3rd Block East Facing 40 Feet Road. Excellent Location. Contact: 9035470616

"VISHVESWARAIAH 1ST-BLOCK 30x40 South/ West facing Site Sale Near 100`ft Road Genuine Buyers only: 9845268611"

Srirampura

SALE 30X100, Plot, 1st cross, North facing, 2 mins metro, single owner, 17000/sqft. Ph. 9739732433

House

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

Banashankari

30X52 E/S_CORNER VILLA_4BHK HOUSE SALE, Banashankari 6th`Stage. 10th.Block. Attached. Gated Community 2.5Cr. Full_Cheque Payment 9799099699 9740075563.

Banaswadi

INDEPENDENT HOUSE_SALE Constructed on`BDA Site_30x40 (2700.sft) (G+2)2BHK each`floor, OMBR_Layout, near_Palloti Church. Call: 9480618382.

J P Nagar

SALE JPNAGAR 2nd Phase Corner Property 30x40 Duplex-House 3BHK_1700sqft Granite-flooring Price 4cr_Classic Estates 9845302589

Kanakapura Road

SALE 30X40 Residential Rental Income Property Excellent Location Near Vajarhalli Metro Station Kanakapura Road Ct 9066399102

Vidyaranyapura

60'X40' INDEPENDENT 4 BHK duplex, well, prime Area, S/F- 15500/- sqft, BEL IInd blk: 9844264852

Commerical

Banashankari

"BANASHANKARI 3RD-STAGE 40x50 Demolition House, Banashankari 2nd Stage 40x62.5. for more details Call: 9845286505"

Banaswadi

FOR RENT SHOWROOM SPACE GROUND FLOOR 5000+1500=6,500 Sqft NEAR BANASWADI MAIN ROAD. CALL 9845350609

J C Road

✓ **PRIME COMMERCIAL** site 45'x38' on JC Road for Sale @ sub reg value. Clear title. GN Properties: 9845044179, 9845036855.

Flat

Banashankari

GURURAJA LAYOUT Near Devegowda Petrol Bunk, New Luxury 4 BHK FLATS Sale, Ready to move. Call: 9449353535.

Padmanabha Nagar

BHARAT HOUSING_SOCIETY Near Padmanabhanagar New Luxury 3 BHK FLAT 2200`Sqft. Sale, Ready to Move, Call: 9449353535.

Vijayanagar

3-BHK, A-KHATA East Facing Flat For Sale Area 1750.00 Sqft RATE Rs.12000/- Per Sq.ft AT KHB Layout, SLV Royal Shelters Vijayanagar Ward No-104 Bengaluru-560040. Contact-9945678222/ 9341256517

Industrial & Factory

Tumkur Road

SALE/ BUILT to Suit, 10 Acres Industrial Land Suitable for Warehouse Industry Opposite KIADB. 9141326819

Joint Development

Begur

BEGUR MICO LAYOUT 43 Guntas SALE Occupied Land, Quoting 33% Less than Market Price. 9481801053

REAL ESTATE BUYING

Joint Development

General

WANTED RESIDENTIAL Converted Land 1 to 50 Acres for JD/ SALE BBMP Limits Apts. Above 40ft Road Property Champions: 9845950996

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BDA-SITE WANTED @_Banashankari 6th Stage any Block 30x40, 40x60, 50x80 Immediate Settlement Contact: 98455-55666

Basaveshwaranagar

"WANTED SITES/DEMOLITION House Basaveshwarnagar, Vijayanagar`in Good location`30x40, 30x50,40x60 for genuine buyers "Sri.Ganesh Estate"- 9845286505"

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

MORE **Classifieds** IN MAIN ISSUE

RENTAL PROPERTIES

Accommodation Available

Commercial

AVAILABLE FOR-RENT on 1st, 2nd and 3rd floor 3300 sft each floor on 100 feet ring road Banashankari 3rd stage. Contact: 9886080699, 7795058346

LONG TERM Office Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

16000SQFT_G+3 floors commercial space for`rent suitable_for Hospital, Diagnostics, Software, e-commerce, Hotels 4th`Block HBR`Layout facing Ring`Road. call- Dr.Syed Inayathulla 8861817913.

RG PARADIES UNLIMITED BIRYANI AC Restaurant Running Very Well with all Fecilites Interior Partyhall Mysore Road opposite Metropole Number 484 Contact: 9448483403

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

JIGANI SURROUNDING Warehouses For Rent 12000, 30000, 35000, 56000 Sqft, (Brokers Excuse) Asset Manager. 9481801053

Flats

3 BHK SEMI Furnished Flat for Rent in Byrappa Layout, Whitefield. Call:-8861817913

BUILDERS ESSENTIAL

Contractors

SN ENTERPRISES
GOVT. LICENSED Super grade Electrical Contractors & Engineers since 2011. Experts in electrical turnkey projects for Industrial, Commercial, Residential & Layouts. Specializing in LT, HT & EHT.
Call: 8861575757 Email: sn.getbuilt@gmail.com

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಭಾನುವಾರ, ಮಾರ್ಚ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 89 | ಪುಟ 28

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಧಾನ ಮಂತ್ರಿ ಫಸಲ್ ಬಿಮಾ

77.08 ಕೋಟಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಾಯಿತ ರೈತರು

₹1.74 ಲಕ್ಷ ಕೋಟಿ 2016ರಿಂದ ಇಲ್ಲಿಯವರೆಗೆ ಅನ್ನದಾತರಿಗೆ ವಿತರಿಸಿರುವ ಬೆಳೆ ವಿಮೆ ಪರಿಹಾರ ಮೊತ್ತ

₹32 ಸಾವಿರ ಕೋಟಿ ರೈತರು ಪಾವತಿಸಿರುವ ವಿಮಾ ಕಂತಿನ ಮೊತ್ತ

(ರಾಜ್ಯಸಭೆಗೆ ಕೇಂದ್ರ ಸರ್ಕಾರ ನೀಡಿರುವ ಮಾಹಿತಿ)

ಭೂಕಂಪ: ಸಹಾಯ ಕೋರಿದ ಮ್ಯಾನ್ಮಾರ್
1,600 ದಾಟಿದ ಸಾವಿನ ಸಂಖ್ಯೆ 4F

18 ಮಂದಿ ನಕ್ಸಲರು ಸಾವು 4D

‘ರಮೇಶ ಹನಿಟ್ರ್ಯಾಪ್ ರೂವಾರಿ ಬಿವೈವಿ, ಡಿಕೆಶಿ’ 4C

ಯುಗಾದಿಯ ಶುಭಾಶಯಗಳು

ಯುಗಾದಿ ಎಂದರೆ ಹೊಸತನದ ಸಂಭ್ರಮ; ಎಲ್ಲೆಲ್ಲೂ ಹಸಿರನ್ನು ಕಾಣುವ ಸಮಯ; ಸಿಹಿ–ಕಹಿ ಸಮನಾಗಿ ಸ್ವೀಕರಿಸುವ ಕ್ಷಣ. ವಿಶ್ವಾವಸು ಸಂವತ್ಸರ ಎಲ್ಲರ ಬಾಳನ್ನೂ ಬೆಳಗಲಿ, ಸಂತಸ ತರಲಿ...

ಹಬ್ಬದ ಪ್ರಯುಕ್ತ ಕಚೇರಿಗೆ ಭಾನುವಾರ ಬಿಡುವು. ಹೀಗಾಗಿ ಸೋಮವಾರದ ಸಂಚಿಕೆ ಪ್ರಕಟವಾಗುವುದಿಲ್ಲ... -ಸಂ

ಕ್ಷಣ ಕ್ಷಣದ ಸುದ್ದಿಗಳಿಗಾಗಿ prajavani.net ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬೆಂಗಳೂರು ಪ್ರಗತಿಗೆ 5 ವರ್ಷದಲ್ಲಿ ₹73 ಸಾವಿರ ಕೋಟಿ ವಿನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಗತಿಯ ದಿಕ್ಕನ್ನೇ ಬದಲಿಸುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ವಿಶೇಷ ಉದ್ದೇಶಿತ ಘಟಕ (ಎಸ್‌ಪಿವಿ) ಸೃಜಿಸಲು ಮುಂದಾಗಿರುವ ಬಿಬಿಎಂಪಿ, ಇದಕ್ಕಾಗಿ, ₹73,600 ಕೋಟಿ ವಿನಿಯೋಗ ಮಾಡುವುದಾಗಿ ಪ್ರಸ್ತಾಪಿಸಿದೆ.

‘ಬಿಬಿಎಂಪಿಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಇಷ್ಟೊಂದು ದೊಡ್ಡ ಮೊತ್ತದ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಶನಿವಾರ ಮಂಡಿಸಿದ 2025–26ನೇ ಸಾಲಿನ ಬಜೆಟ್‌ನಲ್ಲಿ ಹೇಳಲಾಗಿದೆ. ಈ ಸಂಕೀರ್ಣ ಯೋಜನೆಗಳ ರಚನೆ, ಅನುಷ್ಠಾನ, ಬಾಹ್ಯ ಹಣಕಾಸು ನೆರವು, ಬಿಡ್ ದಸ್ತಾವೇಜುಗಳ ತಯಾರಿಗೆ ಎಸ್‌ಪಿವಿಗೆ ವಹಿಸಲಾಗುತ್ತದೆ. ಎಸ್‌ಪಿವಿ ಸ್ಥಾಪಿಸಿ ಬೃಹತ್ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಬಜೆಟ್‌ನಲ್ಲಿ ತಿಳಿಸಲಾಗಿತ್ತು. ಅದನ್ನು ಅನುಷ್ಠಾನ ಮಾಡಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ಆಡಳಿತಾಧಿಕಾರಿ ಎಸ್. ಆರ್. ಉಮಾಶಂಕರ್ ಅನುಮೋದಿಸಿದ ಬಜೆಟ್ ಅನ್ನು ಹಣಕಾಸು ವಿಭಾಗದ ವಿಶೇಷ ಆಯುಕ್ತ ಕೆ. ಹರೀಶ್ ಕುಮಾರ್ ಅವರು ಶನಿವಾರ ಪುರಭವನದಲ್ಲಿ ಮಂಡಿಸಿದರು.

‘ಬ್ರ್ಯಾಂಡ್ ಬೆಂಗಳೂರು– ಸುಗಮ ಸಂಚಾರ ಬೆಂಗಳೂರು’ ಪರಿಕಲ್ಪನೆಯಲ್ಲಿ ಸಂಚಾರ ದಟ್ಟಣೆ ಪರಿಹರಿಸಿ ಸುಸ್ಥಿರ ಪರಿಹಾರ ಒದಗಿಸಲು ‘ಸಮಗ್ರ ಸಂಚಾರ ನಿರ್ವಹಣಾ ಯೋಜನೆ’ ಸಿದ್ಧಪಡಿಸಲಾಗಿದ್ದು, ಅದಕ್ಕಾಗಿ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದೆ.

2ನೇ ಪುಟ ನೋಡಿ

ಬಿಬಿಎಂಪಿ ಬಜೆಟ್ 2025-26 (ಕೋಟಿಗಳಲ್ಲಿ)

₹19,930.64 ಒಟ್ಟಾರೆ ಸ್ವೀಕೃತಿ

₹19,927.08 ಒಟ್ಟಾರೆ ವೆಚ್ಚ

₹3.56 ಉಳಿತಾಯ

ಎಸ್‌ಪಿವಿ ನಿರ್ವಹಿಸುವ ಯೋಜನೆಗಳು

₹17,780 ಕೋಟಿ	ಹೆಬ್ಬಾಳದಿಂದ ಹೊಸೂರು ರಸ್ತೆ– ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆ
₹13,200 ಕೋಟಿ	ಹೊರವರ್ತುಲ, ಒಳವರ್ತುಲಗಳಲ್ಲಿ ಹೈಡೆನ್ಸಿಟಿ/ ಎಲಿವೇಟೆಡ್ ಕಾರಿಡಾರ್, ಮೇಲ್ಸೇತುವೆ
₹9,000 ಕೋಟಿ	ನಮ್ಮ ಮೆಟ್ರೊ ಮಾರ್ಗದಲ್ಲಿ 40 ಕಿ.ಮೀ ಡಬಲ್ ಡೆಕರ್
₹3,000 ಕೋಟಿ	ರಾಜಕಾಲುವೆಗಳ ಬದಿಯಲ್ಲಿ 300 ಕಿ.ಮೀ ರಸ್ತೆ
₹6,000 ಕೋಟಿ	ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್

ತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕ ಎಷ್ಟು?

ಕಟ್ಟಡ ವಿಸ್ತೀರ್ಣ	ಶುಲ್ಕ (ಮಾಸಿಕ)
600 ಚದರಡಿವರೆಗೆ	₹10
600 ಚದರಡಿಯಿಂದ 1000 ಚದರಡಿ	₹50
1000 ಚದರಡಿಯಿಂದ 2000 ಚದರಡಿ	₹100
2000 ಚದರಡಿಯಿಂದ 3000 ಚದರಡಿ	₹150
3000 ಚದರಡಿಯಿಂದ 4000 ಚದರಡಿ	₹200
4000 ಚದರಡಿಗಿಂತ ಹೆಚ್ಚು	₹400

ಅನ್ನದ ಬಟ್ಟಲಿಗೆ ಕನ್ನ...

ಒಳನೋಟ

● ಕೆ.ಜೆ. ಮರಿಯಪ್ಪ

ತುಮಕೂರು: ‘ನಮ್ಮಿಂದ ಜಮೀನು ಕಿತ್ತುಕೊಂಡ ಮೇಲೆ ಅದನ್ನು ಬಳಕೆ ಮಾಡಬೇಕಲ್ಲವೇ? ನಮಗೂ ಉಪಯೋಗವಿಲ್ಲ, ಅವರೂ ಏನೂ ಮಾಡುತ್ತಿಲ್ಲ. ಸುಮ್ಮನೆ ಇಟ್ಟುಕೊಂಡರೆ ಯಾರಿಗೆ ಏನು ಪ್ರಯೋಜನ?’...

‘ಹೊಟ್ಟೆ ತುಂಬುವಷ್ಟು ಅನ್ನವನ್ನು ತಟ್ಟೆಗೆ ಹಾಕಿಸಿಕೊಂಡು ಊಟ ಮಾಡಬೇಕು. ಹೊಟ್ಟೆ ಹಿಡಿಸದಿದ್ದರೂ, ತಟ್ಟೆಗೆ ಅನ್ನ ಬಡಿಸಿಕೊಳ್ಳುತ್ತಲೇ ಇದ್ದು, ಕೊನೆಗೆ ಉಣ್ಣಲಾಗದೆ ತಟ್ಟೆಯಲ್ಲೇ ಬಿಟ್ಟರೆ ಏನು ಮಾಡಬೇಕು?’...

‘ನಮ್ಮ ಮಕ್ಕಳು ಬೀದಿಗೆ ಬೀಳೋದು ಇಷ್ಟವಿಲ್ಲ. ಕೋಟಿ–ಕೋಟಿ ಪರಿಹಾರ ಸಿಗಬಹುದು. ಅದರಿಂದ ಏನು ಮಾಡುವುದು? ನಮಗೆ ಬದುಕೇ ಇಲ್ಲವಾಗುತ್ತದೆ. ಪಾಳು, ಬಂಜರು ಭೂಮಿ ಬಿಟ್ಟು, ಬಂಗಾರದಂತಹ ಫಲವತ್ತಾದ ಭೂಮಿ ಮೇಲೆ ಏಕೆ ಕಣ್ಣು? ಗದ್ದುಗೆ ಮೇಲೆ ಕೂತವರು ಹೊಟ್ಟೆಗೆ ಏನು ತಿನ್ನುತ್ತಾರೆ? ಕಣ್ಣು ಕಾಣುವುದಿಲ್ಲವೇ?

4ನೇ ಪುಟ ನೋಡಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳುವ ಸರ್ಕಾರದ ನಿರ್ಧಾರ ವಿರೋಧಿಸಿ ಪ್ರತಿಭಟನೆ ನಡೆಸಿದ ರೈತರೊಬ್ಬರನ್ನು ಪೊಲೀಸರು ಹೊತ್ತೊಯ್ದ ಕ್ಷಣ (ಸಂಗ್ರಹ ಚಿತ್ರ)

ಕೆಐಎಡಿಬಿ ಜನತೆಯ ಹಿತ ಕಾಯುವ ಸಂಸ್ಥೆಯಾಗಿ ಉಳಿದಿಲ್ಲ. ಭೂ ಮಾಫಿಯಾಗಳ ದಲ್ಲಾಳಿ ಸಂಸ್ಥೆಯಾಗಿ ಮಾರ್ಪಟ್ಟಿದೆ. ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಹೆಸರಿನಲ್ಲಿ ಬೇಕಾಬಿಟ್ಟಿ ಭೂ ಸ್ವಾಧೀನ ನಡೆಸುತ್ತಿದೆ

ಟಿ.ಯಶವಂತ
ರಾಜ್ಯ ಪ್ರಧಾನ ಕಾರ್ಯದರ್ಶಿ, ಕೆಪಿಆರ್‌ಎಸ್

ಕೆಐಎಡಿಬಿಯು ವ್ಯವಹಾರಕ್ಕಾಗಿ ನಿಂತಿದೆ. ಕಡಿಮೆ ಬೆಲೆಗೆ ಕೊಂಡುಕೊಂಡು ಉದ್ಯಮಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದೆ. ಇದೊಂದು ರೀತಿಯ ರಿಯಲ್ ಎಸ್ಟೇಟ್ ದಂಧೆಯಾಗಿದೆ

ಹೋಳಿಗೆ ಸಿದ್ದಪ್ಪ
ಬಳ್ಳಾರಿ ಜಿಲ್ಲೆ

ಬಿಬಿಎಂಪಿ ಬಜೆಟ್ ಅಭಿಪ್ರಾಯಗಳು

ಸತತ 5ನೇ ವರ್ಷ ಅಧಿಕಾರಿಗಳಿಂದ ಬಜೆಟ್: ದುರಂತ

ಬಿಬಿಎಂಪಿಗೆ ಚುನಾಯಿತ ಸದಸ್ಯರಿಲ್ಲದೇ, ಮೇಯರ್ ಬದಲಿಗೆ ಅಧಿಕಾರಿಗಳು ಸತತ ಐದನೇ ವರ್ಷ ಬಜೆಟ್ ಮಂಡಿಸುತ್ತಿರುವುದು ದುರಂತ. ಇದು ಬೆಂಗಳೂರಿನ ನಾಗರಿಕರ ಸಾಂವಿಧಾನಿಕ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಕಾನೂನಿನ ಸರಿಯಾದ ಪ್ರಕ್ರಿಯೆಯನ್ನು ಅನುಸರಿಸದೆ 'ಬ್ರ್ಯಾಂಡ್ ಬೆಂಗಳೂರು' ಹೆಸರಲ್ಲಿ ಸುರಂಗ ರಸ್ತೆಗಳು, ಎಕ್ಸ್‌ಪ್ರೆಸ್ ರಸ್ತೆಗಳು, ಡಬಲ್ ಡೆಕರ್ ಮೇಲ್ಸೇತುವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಮೆಟ್ರೊಪಾಲಿಟನ್ ಯೋಜನಾ ಸಮಿತಿಯ (ಎಂಪಿಸಿ) ಅನುಮೋದನೆ ಇಲ್ಲ. ನಗರಕ್ಕೆ ಮಾಸ್ಟರ್ ಪ್ಲಾನ್ ಇಲ್ಲ. ಬಿಎಂಎಲ್‌ಟಿಎ ಅನುಮೋದಿಸಿದ ಸಮಗ್ರ ಚಲನಶೀಲ ಯೋಜನೆ (ಸಿಎಂಪಿ) ಇಲ್ಲ.

ನಗರಪಾಲಿಕೆ ಕಾಯ್ದೆಯಲ್ಲಿ ಕಡ್ಡಾಯಗೊಳಿಸಲಾದ ಎಂಪಿಸಿ 'ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಯೋಜನೆ' ಆಗಿದ್ದರೆ, ಖಾಸಗಿ ವಾಹನಗಳಿಗೆ ಮಾತ್ರ ಅನುಕೂಲಕರವಾದ ಇಂತಹ ತಿರುಚಿದ ಯೋಜನೆ ಸಾಧ್ಯವಾಗುತ್ತಿರಲಿಲ್ಲ. ಬಜೆಟ್‌ನ ಶೇ 65ರಷ್ಟನ್ನು ಮೂಲ ಸೌಕರ್ಯ ಕಾಮಗಾರಿಗಳಿಗೆ ಮೀಸಲಿಡಲಾಗಿದೆ. ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣಕ್ಕೆ ಶೇ 4 ಮಾತ್ರ ಅನುದಾನ ಒದಗಿಸಲಾಗಿದೆ. ಇದು ಒಳಗೊಳ್ಳುವ ಅಭಿವೃದ್ಧಿಯಲ್ಲ.

ಅನುಮತಿ ನೀಡಿದ್ದಕ್ಕಿಂತ ಹೆಚ್ಚಿನ ಮಹಡಿ ನಿರ್ಮಿಸಲು ಅವಕಾಶ ನೀಡುವ 'ಪ್ರೀಮಿಯಂ ಫೇರ್' ಬಡವರಿಗೆ ವಸತಿ ಒದಗಿಸುವುದಿಲ್ಲ.

ಕಾತ್ಯಾಯಿನಿ ಚಾಮರಾಜ್
ಸಿವಿಕ್– ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ

ಪ್ರಜಾಪ್ರಭುತ್ವದ ಕೊಲೆ ಮಾಡಿದ ಬಜೆಟ್

ಬಿಬಿಎಂಪಿ ಬಜೆಟ್ ಬಗ್ಗೆ ನಾವು ಕೇಳ ಬಯಸುವ ಮೂಲಭೂತ ಪ್ರಶ್ನೆಯೆಂದರೆ ಅದರ ನ್ಯಾಯಸಮ್ಮತತೆ. ಮೂಲಭೂತ ಅಂಶಗಳು ಮುರಿದುಹೋಗಿವೆ. ಸತತ 5ನೇ ವರ್ಷವೂ ಚುನಾಯಿತ ಪ್ರತಿನಿಧಿಗಳಿಲ್ಲ. ಬಜೆಟ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಲಹೆ ಪಡೆದಿಲ್ಲ. ಇದು ಪ್ರಜಾಪ್ರಭುತ್ವದ ಕೊಲೆ. ನಮ್ಮ ಸಂವಿಧಾನದ ಅಣಕ.

ಸ್ವಾರ್ಥಿಗಳು ಮತ್ತು ಗುತ್ತಿಗೆದಾರರ ಲಾಬಿಗಳಿಗೆ ಅನುಕೂಲ ಮಾಡಿಕೊಡುವ ಬಜೆಟ್ ಇದು. ಬಿಳಿ ಆನೆ ಯೋಜನೆಗಳಿಗೆ ದೊಡ್ಡ ಮೊತ್ತದ ಅನುದಾನ ಹಂಚಿಕೆ ಮಾಡಲಾಗಿದೆ. ಜನರಿಗೆ ಅಗತ್ಯ ಇರುವ ಮೂಲ ಸೌಕರ್ಯ ಒದಗಿಸುವುದನ್ನು ನಿರ್ಲಕ್ಷಿಸಲಾಗಿದೆ. ನಿಯಮಿತವಾಗಿ ಗುಂಡಿಗಳ ದುರಸ್ತಿಗೆ, ರಸ್ತೆ ದುರಸ್ತಿಗೆ ನಿಧಿ ಇಲ್ಲ. ಅಕ್ರಮ ಕಟ್ಟಡ ಕೆಡವಲು ಅನುದಾನವಿಲ್ಲ. ಜಾರಿ ಪೊಲೀಸ್ ಪಡೆ ಸ್ಥಾಪಿಸಲು ನಿಧಿ ವಿನಿಯೋಗವಿಲ್ಲ. ನಗರದ ಯಾವುದೇ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಯೋಚಿಸಿಲ್ಲ. ಎಲ್ಲ ಯೋಜನೆಗಳನ್ನು ರದ್ದುಗೊಳಿಸಬೇಕು. ಶ್ರದ್ಧೆಯಿಂದ ಸರಿಯಾಗಿ ಯೋಜನೆಗಳನ್ನು ರೂಪಿಸಬೇಕು. ಬಿಬಿಎಂಪಿಯ ಬಜೆಟ್ ವ್ಯರ್ಥ ಆಗುವುದನ್ನು ತಡೆಯಬೇಕು.

ಸಂದೀಪ್ ಅನಿರುದ್ಧನ್,
ಸಂಚಾಲಕ, ಬೆಂಗಳೂರು ನಾಗರಿಕರ ಕಾರ್ಯಸೂಚಿ

ವಿಕೋಪ ನಿರ್ವಹಣೆಗೆ ಯೋಜನೆ ಸಾಲದು

ಸುಮಾರು 98 ಲಕ್ಷ ಟನ್ ತ್ಯಾಜ್ಯವನ್ನು ನಿರ್ವಹಿಸಲು ಬಿಬಿಎಂಪಿ ಮಾಡಿದ ಪ್ರಯತ್ನಗಳು ಶ್ಲಾಘನೀಯ. ಆದರೆ, ಹೊಸ ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡಲು ಮತ್ತು ನಿರ್ವಹಿಸಲು ಬೇಕಾದ ಕಾರ್ಯಕ್ರಮಗಳು ಕಾಣುತ್ತಿಲ್ಲ. ಮಳೆಗಾಲದಲ್ಲಿ ನಗರದಲ್ಲಿ ಉಂಟಾಗುವ ಪ್ರವಾಹಕ್ಕೆ ಪರಿಹಾರವೇನು? ಬೇಸಿಗೆಯಲ್ಲಿ ಉಂಟಾಗುವ ನೀರಿನ ಕೊರತೆ ನೀಗಿಸುವುದು ಹೇಗೆ? ನಗರದ ಬಿಸಿ ಅಲೆಯನ್ನು ತಡೆಯುವುದು ಹೇಗೆ? ಎಂಬುದಕ್ಕೆ ದೀರ್ಘಾವಧಿಯ ಯೋಜನೆಗಳು ಕಾಣುತ್ತಿಲ್ಲ. ವಿಶ್ವಬ್ಯಾಂಕ್ ನಿಧಿಯ ಅಡಿಯಲ್ಲಿ ಪ್ರಸ್ತಾಪಿಸಲಾದ ಕಾಲುವೆ ತಡೆಗಳಂತಹ ಕೆಲವು ಯೋಜನೆಗಳು ತಾತ್ಕಾಲಿಕ 'ನೋವು ನಿವಾರಕ' ಪರಿಹಾರಗಳಾಗಬಹುದು.

ಅಪುಲಾ ಸಿಂಗ್
ಜನಾಗ್ರಹ, ಸಾರ್ವಜನಿಕ ಹಣಕಾಸು ನಿರ್ವಹಣೆಯ ವ್ಯವಸ್ಥಾಪಕಿ

ಉತ್ತಮ ಬಜೆಟ್



ಉತ್ತಮ ಆಶಯ ಇಟ್ಟುಕೊಂಡು ತಯಾರಿಸಲಾದ ಬಜೆಟ್ ಇದಾಗಿದೆ. ಆದರೂ ಕೆಲವೊಂದು ಕಾರ್ಯಗಳಿಗೆ ಆದ್ಯತೆ ನೀಡಬೇಕಿತ್ತು. ತ್ಯಾಜ್ಯ ವಿಂಗಡಣೆ ಮತ್ತು ವಾಹನ ಚಾಲಕ ಆಧಾರಿತ ಉಪಕ್ರಮಗಳ ಮೇಲೆ ಗಮನಹರಿಸಿಲ್ಲ. ಎಸ್‌ಪಿವಿ ಸೇರಿದಂತೆ ವ್ಯವಸ್ಥೆಯಲ್ಲಿ ಗುಣಮಟ್ಟದೊಂದಿಗೆ ಸಕಾಲಿಕ, ದೊಡ್ಡ ಪ್ರಮಾಣದ ಯೋಜನೆಗಳನ್ನು ಕೈಗೊಳ್ಳುವ ಸಾಮರ್ಥ್ಯದ ಕೊರತೆ ಕಾಣುತ್ತಿದೆ.

ವಿ. ರವಿಚಂದರ್, ನಗರ ತಜ್ಞ

ಸಮಸ್ಯೆ ಪರಿಹರಿಸಲು ವಿಫಲ

ಬೆಂಗಳೂರಿನ ಪ್ರಮುಖ ಮೂಲಸೌಕರ್ಯ ಸಮಸ್ಯೆಗಳನ್ನು ಪರಿಹರಿಸಲು ಬಿಬಿಎಂಪಿಯ ಬಜೆಟ್ ಹಂಚಿಕೆ ವಿಫಲವಾಗಿದೆ. ರಸ್ತೆಗಳು, ಪಾದಚಾರಿ ಮಾರ್ಗಗಳು, ನೀರು, ವಿದ್ಯುತ್ ಮತ್ತು ಬೀದಿ ದೀಪಗಳನ್ನು ನಿರ್ಲಕ್ಷಿಸಲಾಗಿದೆ. ವಾಸಯೋಗ್ಯ ನಗರಕ್ಕೆ ಧಕ್ಕೆ ಉಂಟಾಗಿದೆ. ಆಕಾಶ ಗೋಪುರ, ಸುರಂಗ ರಸ್ತೆಗಳಂತಹ ಯೋಜನೆಗಳಿಗೆ ಒತ್ತು ನೀಡುವುದರಿಂದ ಮೂಲ ಅವಶ್ಯಕತೆಗಳು ದುರ್ಬಲಗೊಳ್ಳುತ್ತವೆ. ಕೆರೆ, ಉದ್ಯಾನ ಮತ್ತು ಆಟದ ಮೈದಾನಗಳಂತಹ ಹಸಿರು ಸ್ಥಳಗಳ ಮೇಲೆ ಗಮನಹರಿಸದಿರುವುದು ಪರಿಸರ ಸುಸ್ಥಿರತೆಗೆ ಅಡ್ಡಿಯಾಗಲಿದೆ.

ಮೂಲಸೌಕರ್ಯಗಳ ಕಳಪೆ ನಿರ್ವಹಣೆ, ಅಸಮರ್ಪಕ ತ್ಯಾಜ್ಯ ನಿರ್ವಹಣೆ ಮತ್ತು ಕೊಳಕು ನಗರವು ಬೆಂಗಳೂರಿನ ಪ್ರತಿಷ್ಠೆಯನ್ನು ಹಾಳು ಮಾಡುತ್ತಿದೆ. ಅಭಿವೃದ್ಧಿಗೆ ಸಮಗ್ರ ಮಾಸ್ಟರ್ ಪ್ಲಾನ್ ಇಲ್ಲದಿರುವುದು ಮತ್ತು ಬಿಬಿಎಂಪಿ ಚುನಾವಣೆ ವಿಳಂಬವಾಗುತ್ತಿರುವುದು ನಗರ ಸವಾಲುಗಳನ್ನು ಇನ್ನಷ್ಟು ಹೆಚ್ಚಿಸುತ್ತಿದೆ.

ವಿನೋದ್ ಜಾಕೋಬ್,
ಬೆಂಗಳೂರು ಪ್ರತಿಷ್ಠಾನದ ಮುಖ್ಯಸ್ಥ

ಮೂಲಸೌಕರ್ಯಗಳಿಗೆ ಬೇಕಿತ್ತು ಇನ್ನಷ್ಟು ಒತ್ತು

ಕಳೆದ ವರ್ಷಕ್ಕೆ ಹೋಲಿಸಿದರೆ ಆಸ್ತಿ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಮತ್ತು ರಾಜ್ಯ ಸರ್ಕಾರದಿಂದ ಬಂದ ಅನುದಾನಗಳು ದುಪ್ಪಟ್ಟಾಗಿರುವುದರಿಂದ ಬಿಬಿಎಂಪಿಯ ಆರ್ಥಿಕ ಸ್ಥಿತಿ ಗಮನಾರ್ಹವಾಗಿ ಸುಧಾರಿಸಿದೆ. ಆದರೂ ಈ ಹಣವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬೇಕಾದ ಬದ್ಧತೆ ಮತ್ತು ಸಿಬ್ಬಂದಿ ಬಿಬಿಎಂಪಿಗೆ ಇದ್ದಂತೆ ಕಾಣುತ್ತಿಲ್ಲ. ರಸ್ತೆ, ಪಾದಚಾರಿ ಮಾರ್ಗ ಮತ್ತು ಬಸ್ ನಿಲ್ದಾಣಗಳಂತಹ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕು.

ಹವಾಮಾನ ಕ್ರಮಕ್ಕಾಗಿ 28 ವಾರ್ಡ್‌ಗಳಿಗೆ ತಲಾ ₹1 ಕೋಟಿ ಹಂಚಿಕೆಯಾಗಿರುವುದು ಮಹತ್ವದ ಬೆಳವಣಿಗೆ. ಇದು ವಾರ್ಡ್ ಮಟ್ಟದಲ್ಲಿ ಬೆಂಗಳೂರಿನ ಹವಾಮಾನ ಕ್ರಿಯಾ ಯೋಜನೆಯನ್ನು ವಿಕೇಂದ್ರೀಕರಿಸುವತ್ತ ಇಟ್ಟ ಹೆಜ್ಜೆಯಾಗಿದೆ. ಶಾಲೆಗಳು ಮತ್ತು ಸರ್ಕಾರಿ ಕಟ್ಟಡಗಳ ಚಾವಣಿಯಲ್ಲಿ ಸೌರವಿದ್ಯುತ್ ಯೋಜನೆ ಸ್ಥಾಪಿಸಲು ಮುಂದಾಗಿರುವುದು ಉತ್ತಮ ಚಿಂತನೆಯಾಗಿದೆ.

ರಸ್ತೆ ವಿಸ್ತರಿಸಲು ಆದ್ಯತೆ ನೀಡಲಾಗಿದೆ. ಆದರೆ, ಬಸ್‌ಗೆ ಪ್ರತ್ಯೇಕ ಪಥ, ಸೈಕ್ಲಿಂಗ್‌ಗೆ ಆದ್ಯತೆ ನೀಡಿಲ್ಲ. ಸಂಚಾರದಟ್ಟಣೆಯ ದೀರ್ಘ ಪರಿಹಾರಕ್ಕೆ ಸುಸ್ಥಿರ ಯೋಜನೆಗಳು ಇಲ್ಲದಿರುವುದು ಕಳವಳ ಉಂಟು ಮಾಡಿದೆ.

ಶ್ರೀನಿವಾಸ ಅಲವಿಲ್ಲಿ, ನಾಗರಿಕ ಕಾರ್ಯಕರ್ತ

ಕೇಂದ್ರದ ನಿಯಮದಂತೆ ಕಸ ಶುಲ್ಕ

ಸ್ವಚ್ಛ ಭಾರತ ಯೋಜನೆಯಡಿ ಕೇಂದ್ರ ಸರ್ಕಾರ ನಿಯಮ ರೂಪಿಸಿದ್ದು, ಅದರಂತೆ ಕಸ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಲು ಬಿಬಿಎಂಪಿ ಮುಂದಾಗಿದೆ. ಏ.1ರಿಂದಲೇ ಈ ಯೋಜನೆ ಜಾರಿಗೊಳ್ಳಲಿದೆ. ಬೆಂಗಳೂರಿನಲ್ಲಿ ಯಾವುದೂ ಸುಲಭವಾಗಿ ದೊರೆಯುವುದಿಲ್ಲ. ಪ್ರತಿ ಮನೆಗೆ ತೆರಳಿ ಕಸ ಸಂಗ್ರಹದ ಶುಲ್ಕ ಸಂಗ್ರಹಿಸಲು ಸಾಧ್ಯವಿಲ್ಲ. ಅದಕ್ಕಾಗಿ ತೆರಿಗೆ ರೂಪದಲ್ಲಿ ಸಂಗ್ರಹಿಸಲಾಗುವುದು. ಬ್ರ್ಯಾಂಡ್ ಬೆಂಗಳೂರು ಎಂಬ ಉತ್ತಮ ಕಲ್ಪನೆ ಈಗ ಸಾಕಾರಗೊಳ್ಳುವ ಹಂತಕ್ಕೆ ಬಂದಿದೆ. ಎರಡು ವರ್ಷದಲ್ಲಿ ಪೂರ್ಣಗೊಳ್ಳಲಿದೆ.

ಎಸ್.ಆರ್. ಉಮಾಶಂಕರ್, ಬಿಬಿಎಂಪಿ ಆಡಳಿತಾಧಿಕಾರಿ



ಬ್ರ್ಯಾಂಡ್ ಬೆಂಗಳೂರು ಪ್ರತ್ಯೇಕವಲ್ಲ

ಬ್ರ್ಯಾಂಡ್ ಬೆಂಗಳೂರು ಎಂಬುದು ಪ್ರತ್ಯೇಕ ಯೋಜನೆಯಲ್ಲ. ಆರೋಗ್ಯ, ಶಿಕ್ಷಣ, ಮೂಲಸೌಕರ್ಯಕ್ಕೆ ಮಾಡುವ ವೆಚ್ಚಗಳೆಲ್ಲ ಬ್ರ್ಯಾಂಡ್ ಬೆಂಗಳೂರಿಗಾಗಿಯೇ ಮಾಡುವುದಾಗಿದೆ. ಬ್ರ್ಯಾಂಡ್ ಬೆಂಗಳೂರು ಅನ್ನು ವಿಶೇಷ ಕಾರ್ಯಕ್ರಮಗಳಾಗಿ ಎಂಟು ವಿಭಾಗಗಳಾಗಿ ಮಾಡಲಾಗಿದೆ. ಕಾಮಗಾರಿ ಕೈಗೊಳ್ಳುವಾಗ ಬಿಬಿಎಂಪಿಯಲ್ಲಿ ದುಡ್ಡಿಲ್ಲ ಎಂಬ ಆರೋಪ ಬರಬಾರದು ಎಂಬ ಕಾರಣಕ್ಕೆ ಸ್ಕ್ರೊ ಖಾತೆಯಲ್ಲಿ ಇಡಲಾಗಿದೆ. ₹1,828 ಕೋಟಿ ವೆಚ್ಚದಲ್ಲಿ ಹೊಸ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ತುಷಾರ್ ಗಿರಿನಾಥ್
ಬಿಬಿಎಂಪಿಯ ಮುಖ್ಯ ಆಯುಕ್ತ



FARNAZ

5 ವರ್ಷದಲ್ಲಿ ₹73 ಸಾವಿರ ಕೋಟಿ ವಿನಿಯೋಗ

ಒಂದನೇ ಪುಟದಿಂದ...

₹73,600 ಕೋಟಿ ವೆಚ್ಚದಲ್ಲಿ ಸಂಕೀರ್ಣ ಯೋಜನೆಗಳ ರಚನೆ, ಅನುಷ್ಠಾನ, ಬಾಹ್ಯ ಹಣಕಾಸು ನೆರವು, ಪರಿಣತಿಯಲ್ಲಿ ಐದು ವರ್ಷಗಳ ಅವಧಿಯಲ್ಲಿ ಮೆಗಾ ಯೋಜನೆಗಳನ್ನು ಅನುಷ್ಠಾನ ಮಾಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ, ನಗರ ಯೋಜಕರು, ತಜ್ಞ ಎಂಜಿನಿಯರ್ ಮತ್ತು ಆಡಳಿತಗಾರರನ್ನು ಒಳಗೊಂಡ ವಿಶೇಷ ಉದ್ದೇಶಿತ ಘಟಕ (ಎಸ್‌ಪಿವಿ) ರಚಿಸಲಾಗುತ್ತದೆ. ಪ್ರೀಮಿಯಂ ಎಫ್‌ಎಆರ್ ಶುಲ್ಕ ಮತ್ತು ಜಾಹೀರಾತಿನ ಶುಲ್ಕದಿಂದ ಬರುವ ಆದಾಯವನ್ನು ಎಸ್‌ಪಿವಿಗೆ ವರ್ಗಾಯಿಸಿ, ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್, ಡಬಲ್ ಡೆಕರ್, ರಾಜಕಾಲುವೆ ಪಕ್ಕದಲ್ಲಿ ರಸ್ತೆಗಳು, ವೈಟ್‌ಟಾಪಿಂಗ್, ಆಕಾಶ ಗೋಪುರ (ಸ್ಕೈಡೆಕ್), ರಸ್ತೆಗಳ ವಿಸ್ತರಣೆ ಯೋಜನೆಗಳ ಅನುಷ್ಠಾನದ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ₹42 ಸಾವಿರ ಕೋಟಿಯನ್ನು ಎರಡು ಸುರಂಗ ರಸ್ತೆಗಳಿಗೆ ನಿಗದಿಪಡಿಸಲಾಗಿದೆ. 2025–26ರಲ್ಲಿ ಒಂದು ಸುರಂಗ ರಸ್ತೆ ಮಾತ್ರ ಅನುಷ್ಠಾನವಾಗಲಿದ್ದು, ಒಟ್ಟು ₹31,600 ಕೋಟಿ ಮೊತ್ತದ ಯೋಜನೆಗಳನ್ನು ಎಸ್‌ಪಿವಿ ನಿರ್ವಹಿಸಲಿದೆ.

ಘನತ್ಯಾಜ್ಯ ನಿರ್ವಹಣೆ ಯೋಜನೆಗಳಿಗೆ ಹೆಚ್ಚು ಅನುದಾನ ನೀಡುವ ಉದ್ದೇಶದಿಂದ ತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕವನ್ನು ಆಸ್ತಿ ತೆರಿಗೆಯಲ್ಲಿಯೇ ಏಪ್ರಿಲ್ 1ರಿಂದ ಸಂಗ್ರಹಿಸಲು ನಿರ್ಧರಿಸಲಾಗಿದೆ.

'ದಕ್ಷಿಣಕ್ಕೆ ಅನ್ಯಾಯ'

ಬೆಂಗಳೂರು: 'ಕೇಂದ್ರ ಸರ್ಕಾರವು ಜನಸಂಖ್ಯೆಯನ್ನು ಮಾತ್ರ ಆಧಾರವಾಗಿರಿಸಿಕೊಂಡು ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೆ ಮುಂದಾಗಿದೆ. ಇದರಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ' ಎಂದು ತೆಲಂಗಾಣದ ಮಾಜಿ ಸಚಿವ ಶ್ರೀನಿವಾಸ್ ಗೌಡ್ ಹೇಳಿದರು.

'ದಕ್ಷಿಣದ ರಾಜ್ಯಗಳು ಜನಸಂಖ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿವೆ. ಇದರಿಂದಾಗಿ ಇಲ್ಲಿ ಜನಸಂಖ್ಯೆ ಕುಸಿತವಾದರೆ, ಉತ್ತರದ ರಾಜ್ಯಗಳಲ್ಲಿ ಏರಿಕೆ ಕಂಡಿದೆ. ಜನಸಂಖ್ಯಾ ನಿಯಂತ್ರಣವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ದಕ್ಷಿಣದ ಎಲ್ಲ ರಾಜ್ಯಗಳು ಗಣನೀಯ ಸಂಖ್ಯೆಯಲ್ಲಿ ಸ್ಥಾನಗಳನ್ನು ಕಳೆದುಕೊಳ್ಳಲಿವೆ. ಆದ್ದರಿಂದ ಜನಸಂಖ್ಯಾ ಮಾನದಂಡವನ್ನು ಕೈಬಿಡಬೇಕು' ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಿ'

ಪ್ರಜಾವಾಣಿ ವಾರ್ತೆ

ದಲಿತ ಸಂಘರ್ಷ ಸಮಿತಿ(ಕೆಂಪುಸೇನೆ)ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಎದುರು ಮೌನಪ್ರತಿಭಟನೆ ನಡೆಸಿದರು

ಯಲಹಂಕ: ಮಿನಿ ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಅಂಬೇಡ್ಕರ್‌ರವರ ಪ್ರತಿಮೆಯನ್ನು ಕೂಡಲೇ ಅನಾವರಣಗೊಳಿಸಬೇಕು. ಅಕ್ರಮ ಸಕ್ರಮದಡಿ ಕಾಯಂ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ, ದಲಿತ ಸಂಘರ್ಷ ಸಮಿತಿ(ಕೆಂಪುಸೇನೆ) ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಎದುರು ಮೌನ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಸಂಘಟನೆಯ ರಾಜ್ಯಕಾರ್ಯದರ್ಶಿ ಡಿ.ವಿ. ವೀರಭದ್ರೇಗೌಡ, ಮಿನಿ ವಿಧಾನಸೌಧದ ಮುಂಭಾಗದಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪಿಸಿ, ಎರಡು ವರ್ಷಗಳಾಗಿವೆ. ಸರ್ಕಾರ ಪ್ರತಿಮೆ ಅನಾವರಣಗೊಳಿಸಲು ಮೀನಮೇಷ ಎಣಿಸುತ್ತಿದೆ. ಈ ವಿಚಾರದಲ್ಲಿ ಯಾವುದೇ ರಾಜಕಾರಣ ಮಾಡದೆ, ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯಂದು ಪ್ರತಿಮೆ ಅನಾವರಣ ಮಾಡಬೇಕು ಎಂದು ಒತ್ತಾಯಿಸಿದರು.

ಯಲಹಂಕ ಉಪನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಭಾಂಗಣವನ್ನು ದಲಿತ ಸಂಘಟನೆಗಳಿಗೆ ಉಚಿತವಾಗಿ ನೀಡಬೇಕು. ಹಿಂದುಳಿದ ಕುಟುಂಬಗಳಿಗೆ ಶುಭಸಮಾರಂಭ ನಡೆಸಲು ಸಭಾಂಗಣದ ವೆಚ್ಚವನ್ನು ₹ 10 ಸಾವಿರಕ್ಕೆ ನಿಗದಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಪ್ರಧಾನ ಕಾರ್ಯದರ್ಶಿ ಮಾವಳಿಪುರ ಬಿ.ಶ್ರೀನಿವಾಸ್, 'ತಾಲ್ಲೂಕಿನ ಎಲ್.ಬಿ.ಎಸ್ ನಗರ, ಜೆಪಿಎನ್ ಕಾಲೊನಿ ಸೇರಿದಂತೆ ಹಲವು ಗ್ರಾಮಗಳ ಸರ್ಕಾರಿ ಜಾಗದಲ್ಲಿ ಬಡವರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವರಲ್ಲಿ ಕೆಲವರಿಗೆ ತಾತ್ಕಾಲಿಕ ಹಕ್ಕುಪತ್ರ ನೀಡಿ, ಮತ್ತೆ ಕೆಲವರಿಗೆ ನೀಡಿಲ್ಲ. ಕೆಲವೆಡೆ ನೋಂದಣಿ ಮಾಡಿಲ್ಲ' ಎಂದು ಅವರು ದೂರಿದರು. ಫಲಾನುಭವಿಗಳಿಗೆ ಕೂಡಲೆ ತಾತ್ಕಾಲಿಕ ಹಕ್ಕುಪತ್ರಗಳನ್ನು ನೋಂದಣಿಮಾಡಿ, ಶಾಶ್ವತ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ವಿಶೇಷ ತಹಶೀಲ್ದಾರ್ ಮುನಿಸ್ವಾಮಿ ರೆಡ್ಡಿ ಹಾಗೂ ಬಿಬಿಎಂಪಿ ಎಇಇ ಸುಂದರೇಶ್‌ಗೆ ಪ್ರತಿಭಟನಕಾರರು ಮನವಿಪತ್ರ ಸಲ್ಲಿಸಿದರು.

ಸಮಿತಿಯ ರಾಜ್ಯಘಟಕದ ಅಧ್ಯಕ್ಷ ರಾಜಣ್ಣ, ಕಾರ್ಯಾಧ್ಯಕ್ಷ ಜಿ.ಗುರುಸ್ವಾಮಿ, ಉಪಾಧ್ಯಕ್ಷರಾದ ಸುಬ್ಬಣ್ಣ, ಸಿ.ಕೆ. ರವೀಂದ್ರನಾಥ್, ಜಿಲ್ಲಾಧ್ಯಕ್ಷ ಕೆ.ಎಂ. ಮುರಳಿ ಮತ್ತಿತರರು ಉಪಸ್ಥಿತರಿದ್ದರು.

ಡಿಎಸ್–ಮ್ಯಾಕ್ಸ್ ಪ್ರಾಪರ್ಟೀಸ್

DS MAX® JOY OF LIVING

Dr K V SATISH
CHAIRMAN, DS-MAX GROUP

Yuga & Adi

A New Beginning

Ugadi marks the beginning of a new era, where life's flavors beautifully blend into a meaningful journey. The sweetness of jaggery symbolizes the joy and happiness of new beginnings, while the pungent taste of raw mango reflect life's unexpected surprises. The bitterness of neem reminds us of the challenges that shape us, and the sourness of tamarind reflects the occasional twist and turns.

Just like Ugadi teaches us to embrace every flavor of life, step into your dream DS-MAX home and transform every emotion into lasting happiness.

Happy Ugadi

2, 3 & 4-BHK APARTMENTS FOR SALE IN VARIOUS LOCATIONS

RERA No.	Location	Floors	Landmark	Price
PRM/KA/RERA/1250/304/PR/251024/007179	WHITEFIELD	G+14	15 MINS. HOPEFARM METRO	₹ 60.84 L - 1.14 Cr*
PRM/KA/RERA/1251/310/PR/150223/005721	MYSORE ROAD	G+14	NEAR RR DENTAL COLLEGE	₹ 56.25 - 79.66 Lakhs*
PRM/KA/RERA/1251/310/PR/210324/006724	SILKBOARD	G+14	NEAR SINGASANDRA METRO	₹ 73.02 L - 1.20 Cr*
PRM/KA/RERA/1250/301/PR/251024/007178	YELAHANKA	G+14	5 MINS. RAJANUKUNTE	₹ 47.17 - 85.06 Lakhs*
PRM/KA/RERA/1251/308/PR/160824/006973	BANNERGHATTA RD	G+14	NEAR KOPPA GATE	₹ 45.96 - 80.66 Lakhs*
PRM/KA/RERA/1251/472/PR/250225/007524	AIRPORT ROAD	G+14	NAVARATHNA AGRAHARA	₹ 63.36 L - 1.03 Cr*
PRM/KA/RERA/1251/309/PR/030524/006841	HENNUR ROAD	G+4	NEAR HENNUR DECATHLON	₹ 76.50 - 95.70 Lakhs*
PRM/KA/RERA/1251/308/PR/160824/006972	ELECTRONIC CITY	G+4	NEAR HOSA ROAD METRO	₹ 56.60 L - 1.15 Cr*
PRM/KA/RERA/1251/310/PR/151223/006489	BANASHANKARI	G+3	OPP. NPS SCHOOL (3 & 4-BHK)	₹ 98.00 L - 2.17 Cr*
PRM/KA/RERA/1251/308/PR/290122/004660	SARJAPURA	G+4	SARJAPUR – ATTIBELE RD	₹ 38.72 - 43.44 Lakhs*
PRM/KA/RERA/1251/308/PR/280222/004739	CHANDAPURA	G+3	10 MINS. BOMMASANDRA METRO	₹ 37.60 - 49.60 Lakhs*
PRM/KA/RERA/1251/309/PR/060923/006244	TUMKUR ROAD	G+9	10 MINS. MADAVARA METRO	₹ 52.00 - 79.80 Lakhs*

ಡಿಎಸ್ ಮ್ಯಾಕ್ಸ್ FOR PROJECT SPECIFIC INFORMATION 7022 791 222 www.dsmaxproperties.com

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in *T & C Apply CREDAI BENGALURU

ಕಾವೇರಿ ನೀರು: ಕಾರ್ಯಾಗಾರ, ವಿಚಾರಸಂಕಿರಣ ಏಪ್ರಿಲ್ 5ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿ ರಕ್ಷಣಾ ಸಮಿತಿಯು ಏಪ್ರಿಲ್ 5ರಂದು ಬೆಳಿಗ್ಗೆ 10 ಗಂಟೆಗೆ ಕೆ.ಆರ್. ರಸ್ತೆಯಲ್ಲಿರುವ ಕುವೆಂಪು ಕಲಾಕ್ಷೇತ್ರದಲ್ಲಿ 'ನ್ಯಾಯಯುತ ನೀರಿನ ಹಕ್ಕಿಗಾಗಿ' ಶೀರ್ಷಿಕೆಯಡಿ ಒಂದು ದಿನದ ಕಾರ್ಯಾಗಾರ ಹಾಗೂ ವಿಚಾರಸಂಕಿರಣ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಎಚ್.ಕೆ. ರಾಮು, '100 ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ರಚಿಸಲಾದ ಆದೇಶದ ಆಧಾರದಲ್ಲಿ ಕಾವೇರಿ ನೀರು ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ಸಂಕಷ್ಟ ಸೂತ್ರಗಳನ್ನು ರಚಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಮಠಾಧೀಶರು, ರಾಜಕೀಯ ಮುಖಂಡರ ಸಲಹೆ ಪಡೆದು, ಅಗತ್ಯ ಕ್ರಮ ಕೈಗೊಳ್ಳಲು ಸಮಿತಿ ಮುಂದಾಗಿದೆ' ಎಂದು ಹೇಳಿದರು.

'ಸಭಾ ಕಾರ್ಯಕ್ರಮವನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಲಿದ್ದು, ಸಿದ್ಧಗಂಗಾ ಮಠದ ಪೀಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಸಂಸದರಾದ ಡಾ.ಸಿ.ಎನ್. ಮಂಜುನಾಥ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ಭಾಗವಹಿಸಲಿದ್ದಾರೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಎ.ಜೆ. ಸದಾಶಿವ, ಚಂದ್ರಶೇಖರಯ್ಯ ಉಪಸ್ಥಿತರಿರುತ್ತಾರೆ' ಎಂದರು.

'ಬೆಳಿಗ್ಗೆ 11.30ಕ್ಕೆ ಕಾರ್ಯಾಗಾರ ಹಾಗೂ ವಿಚಾರ ಸಂಕಿರಣವು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಾಗಿನೆಲೆ ಮಠದ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುತ್ತಾರೆ. ಸಚಿವರಾದ ಎನ್. ಚಲುವರಾಯಸ್ವಾಮಿ, ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಸಂಸದ ಸುನೀಲ್ ಬೋಸ್ ಭಾಗವಹಿಸುತ್ತಾರೆ' ಎಂದು ತಿಳಿಸಿದರು.

ಹೊಸ ನೇಮಕಾತಿಗೆ ಅವಕಾಶ ಇಲ್ಲ: ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ಹೊಸತಾಗಿ ನೇಮಕಾತಿಗೆ ಅಧಿಸೂಚನೆ ಹೊರಡಿಸದಂತೆ 2024ರ ನವೆಂಬರ್ 25ರಂದು ಸುತ್ತೋಲೆ ಹೊರಡಿಸಿದ್ದರೂ ಕೆಲವು ನೇಮಕಾತಿ ಪ್ರಾಧಿಕಾರಗಳು ಈ ಸೂಚನೆಯನ್ನು ಉಲ್ಲಂಘಿಸುತ್ತಿವೆ. ಹೀಗೆ, ಉಲ್ಲಂಘಿಸಿ ಹೊಸ ಅಧಿಸೂಚನೆ ಹೊರಡಿಸುವ ನೇಮಕಾತಿ ಪ್ರಾಧಿಕಾರಗಳ ವಿರುದ್ಧ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳು ಶಿಸ್ತು ಕ್ರಮ ತೆಗೆದುಕೊಳ್ಳಬೇಕು' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸೂಚನೆ ನೀಡಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಬರುವವರೆಗೆ ಯಾವುದೇ ಹೊಸ ನೇಮಕಾತಿ ನಡೆಸದಿರಲು ರಾಜ್ಯ ಸಚಿವ ಸಂಪುಟ ನಿರ್ಣಯ ತೆಗೆದುಕೊಂಡಿತ್ತು. ಅದರ ಅನ್ವಯ, ನವೆಂಬರ್ 25ರಂದು ಸುತ್ತೋಲೆ ಹೊರಡಿಸಿದ್ದ ಡಿಪಿಎಆರ್, ರಾಜ್ಯ ನಾಗರಿಕ ಸೇವೆಗಳ ಹುದ್ದೆಗಳಿಗೆ ನೇಮಕಾತಿಗೆ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಹೊರಡಿಸಬಾರದೆಂದು ಸೂಚನೆ ನೀಡಿತ್ತು.

'ಸುತ್ತೋಲೆಯನ್ನು ಉಲ್ಲಂಘಿಸಿ ಕೆಲವು ನೇಮಕಾತಿ ಪ್ರಾಧಿಕಾರಗಳು ಅಧಿಸೂಚನೆ ಹೊರಡಿಸಿರುವುದು ಗಮನಕ್ಕೆ ಬಂದಿದೆ. ಈ ರೀತಿ ಅಧಿಸೂಚನೆಗಳನ್ನು ಹೊರಡಿಸಿದ್ದರೆ ತಕ್ಷಣ ರದ್ದುಪಡಿಸಬೇಕು. ಸುತ್ತೋಲೆಯಲ್ಲಿರುವ ಸೂಚನೆಯನ್ನು ಎಲ್ಲ ನೇಮಕಾತಿ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಡಿಪಿಎಆರ್ ಉಪ ಕಾರ್ಯದರ್ಶಿ ನಿರ್ದೇಶನ ನೀಡಿದ್ದಾರೆ.

ಸಿಎಸ್ ಭೇಟಿ: ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿದ ಮಾಜಿ ಸಚಿವ ಎಚ್. ಆಂಜನೇಯ, ದಲಿತ ಹೋರಾಟಗಾರ ಬಿ.ಆರ್. ಭಾಸ್ಕರ್ ಪ್ರಸಾದ್ ಈ ಬಗ್ಗೆ ಅವರ ಗಮನಕ್ಕೆ ತಂದರು.



ರಜಾ ದಿನವೂ ಕೆಲಸ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ 2024-25ನೇ ಸಾಲಿನ ಆರ್ಥಿಕ ವರ್ಷ ಎರಡು ದಿನಗಳಲ್ಲಿ ಪೂರ್ಣಗೊಳ್ಳುತ್ತಿರುವ ಕಾರಣ ಮಾರ್ಚ್ 30 ಹಾಗೂ 31 ರಂದು ಸರ್ಕಾರಿ ರಜೆ ಇದ್ದರೂ ಆ ದಿನಗಳಲ್ಲಿ ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸಲು ಆದೇಶ ಹೊರಡಿಸಲಾಗಿದೆ.

ಸರ್ಕಾರದ ಅಧಿಸೂಚನೆಯಂತೆ ಏಪ್ರಿಲ್ 1ರಿಂದ ಬಾಕಿ ಆಸ್ತಿ ತೆರಿಗೆ ಮೇಲೆ ದಂಡ ವಿಧಿಸಲಾಗುತ್ತಿದೆ. ತೆರಿಗೆ ಸುಸ್ತಿದಾರರು ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸಲು ಪಾಲಿಕೆಯ ಕಚೇರಿಗಳಿಗೆ ಭೇಟಿ ನೀಡಲಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಟ್ಟಡಗಳಿಂದ ಪಾವತಿಸಬೇಕಾದ ಆಸ್ತಿ ತೆರಿಗೆ ಮತ್ತು ಸೇವಾ ಶುಲ್ಕವನ್ನು ಮಾರ್ಚ್ 31ರ ಒಳಗೆ ಪಾವತಿಸಿದರೆ ಅದರ ಬಡ್ಡಿ ಮೊತ್ತವನ್ನು ಮನ್ನಾ ಮಾಡುವ ಒಂದು



ಬಾರಿ ಪರಿಹಾರ ಯೋಜನೆ (ಒಟಿಎಸ್) ಜಾರಿಯಲ್ಲಿದೆ. ಬಾಕಿ ಇರುವ ಆಸ್ತಿ ತೆರಿಗೆ ಹಾಗೂ ಸೇವಾಶುಲ್ಕವನ್ನು ವಸೂಲಾತಿ ಮಾಡಬೇಕಾಗಿದೆ.

ಅದಕ್ಕಾಗಿ ಪಾಲಿಕೆಯ ಕಂದಾಯ ವಿಭಾಗದ ಎಲ್ಲ ಸಿಬ್ಬಂದಿ ಉಪವಿಭಾಗ ಮತ್ತು ವಾರ್ಡ್ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕು. ಬಾಕಿ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮ ವಹಿಸಬೇಕು ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಅಧಿಕಾರಿ ಮುನೀಶ್ ಮೌದ್ಗಿಲ್ ಹೊರಡಿಸಿರುವ ಕಚೇರಿ ಆದೇಶದಲ್ಲಿ ತಿಳಿಸಿದ್ದಾರೆ.

ಸಂಚಾರ ಪೊಲೀಸರಿಗೆ ಪ್ರಥಮ ಚಿಕಿತ್ಸೆ ಬಗ್ಗೆ ಕಾರ್ಯಾಗಾರ

ಮಿದುಳಿನ ಗಾಯದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತ ಪ್ರಕರಣಗಳಲ್ಲಿ ಮಿದುಳು ಗಾಯ ಗುರುತಿಸುವಿಕೆ ಹಾಗೂ ಪ್ರಥಮ ಚಿಕಿತ್ಸೆ ಬಗ್ಗೆ ಸಂಚಾರ ಪೊಲೀಸರಿಗೆ ಇಲ್ಲಿನ ಚಿನ್ಮಯ ಆಸ್ಪತ್ರೆಯ ವೈದ್ಯರು ನಗರದಲ್ಲಿ ಶನಿವಾರ ತರಬೇತಿ ನೀಡಿದರು.

ಮಿದುಳು ಗಾಯ ಜಾಗೃತಿ ಮಾಸದ ಪ್ರಯುಕ್ತ ಪ್ರಥಮ ಚಿಕಿತ್ಸೆ ಬಗ್ಗೆ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ರಸ್ತೆ ಅಪಘಾತ ಪ್ರಕರಣಗಳ ನಿರ್ವಹಣೆ ಬಗ್ಗೆ ವೈದ್ಯರು ತಿಳಿಸಿದರು. ಬೆನ್ನುಮೂಳೆಯ ಸ್ಥಿರೀಕರಣ, ರಕ್ತಸ್ರಾವ ನಿಯಂತ್ರಣ, ಹೃದಯ, ಶ್ವಾಸಕೋಶ ಕಾಯಿಲೆಯ ಪ್ರಾಥಮಿಕ ಚಿಕಿತ್ಸೆಯ (ಸಿಪಿಆರ್) ಪ್ರಾತ್ಯಕ್ಷಿಕೆ ಹಾಗೂ ರೋಗಿಗಳ ಸ್ಥಳಾಂತರದ ವೇಳೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಚಾರ ಪೊಲೀಸರು ತರಬೇತಿ ಪಡೆದರು.

'ರಸ್ತೆ ಅಪಘಾತ ಮರಣ ಪ್ರಕರಣಗಳು ದೇಶದಲ್ಲಿ ಶೇ10 ರಷ್ಟಿದೆ. ಬೆಂಗಳೂರಿನಲ್ಲಿ ಇತ್ತೀಚೆಗೆ ರಸ್ತೆ ಅಪಘಾತ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ಪಾದಚಾರಿಗಳೂ

ರಸ್ತೆ ಅಪಘಾತ ಪ್ರಕರಣಗಳ ನಿರ್ವಹಣೆ ಬಗ್ಗೆ ಸಂಚಾರ ಪೊಲೀಸರಿಗೆ ವೈದ್ಯರು ತರಬೇತಿ ನೀಡಿದರು

ಗಾಯಗೊಳ್ಳುತ್ತಿದ್ದಾರೆ. ರಸ್ತೆ ಅಪಘಾತದಿಂದ ಸಂಭವಿಸುತ್ತಿರುವ ಗಾಯಗಳು ಮಿದುಳಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಹೆಚ್ಚಿನ ಗಾಯಗಳು ಮಿದುಳಿನ ಊತಕ್ಕೆ ಕಾರಣವಾಗುತ್ತವೆ. ರಕ್ತಸ್ರಾವದಿಂದ ಮೃತಪಡುವ ಸಾಧ್ಯತೆಯೂ ಇರುತ್ತದೆ' ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದರು.

ಆಸ್ಪತ್ರೆಯ ನರಶಸ್ತ್ರಚಿಕಿತ್ಸಕ ಮತ್ತು ನರವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಕಿರಣ್ ಎಂ., 'ರಸ್ತೆ ಅಪಘಾತ ಪ್ರಕರಣಗಳಲ್ಲಿ ಸಕಾಲಕ್ಕೆ ಪ್ರಥಮ ಚಿಕಿತ್ಸೆ ನೀಡಿದಲ್ಲಿ ರೋಗಿ ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ವೃತ್ತಿಪರ ವೈದ್ಯಕೀಯ ತಂಡಗಳು ಚಿಕಿತ್ಸೆ ಪ್ರಾರಂಭಿಸುವ ಮೊದಲು, ಅಪಘಾತ ನಡೆದ ಸ್ಥಳದಲ್ಲಿ ಇರುವ ಸಂಚಾರ ಪೊಲೀಸರಿಗೆ ತರಬೇತಿ ಅಗತ್ಯ' ಎಂದು ತಿಳಿಸಿದರು.

ಸಂಚಾರ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ, 'ಸೀಟ್ ಬೆಲ್ಟ್ ಹಾಕದಿರುವುದು, ಅತಿಯಾದ ವೇಗದಲ್ಲಿ ಚಾಲನೆ, ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಕೆ, ಗುಣಮಟ್ಟದ ಹೆಲ್ಮೆಟ್ ಧರಿಸದೆ ಇರುವುದು, ಸರಿಯಾದ ರೀತಿಯಲ್ಲಿ ಹೆಲ್ಮೆಟ್ ಹಾಕಿಕೊಳ್ಳದೆ ಇರುವುದು ಸೇರಿ ವಿವಿಧ ಕಾರಣಗಳಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಅಪಘಾತ ಪ್ರಕರಣಗಳ ನಿಯಂತ್ರಣಕ್ಕೆ ರಸ್ತೆ ಸುರಕ್ಷತಾ ನಿಯಮಗಳ ಪಾಲನೆಗೆ ಆದ್ಯತೆ ನೀಡಬೇಕು' ಎಂದು ಹೇಳಿದರು.

₹18 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡಿದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರ ಬಗೆ ಎರಡು ಒಳ್ಳೆಯ ಮಾತನಾಡಿರುವುದನ್ನು ಹೊರತುಪಡಿಸಿ, ಎಲ್ಲಿಯೂ ಬಿಜೆಪಿ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಸುಂಕದಕಟ್ಟೆಯಿಂದ ಬ್ಯಾಡರಹಳ್ಳಿ, ನೈಸ್ ರಸ್ತೆವರೆಗೆ ₹18 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಯಶವಂತಪುರ ವಿಧಾನಸಭಾ ಕ್ಷೇತ್ರ ಬಹಳ ವಿಸ್ತಾರವಾಗಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರ ನೂರಾರು ಕೋಟಿ ರೂಪಾಯಿ ಅನುದಾನ ನೀಡಿದೆ. ಕಾವೇರಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿದೆ. ಗ್ರಾಮೀಣ ಭಾಗದಲ್ಲಿ ಮನೆಮನೆಗೆ ನೀರು ಪೂರೈಸಲಾಗುತ್ತಿದೆ. ಹೀಗಿರುವಾಗ ಕಾಂಗ್ರೆಸ್‌ನವರ ಬಗ್ಗೆ ಒಳ್ಳೆಯ ಮಾತನಾಡಬಾರದೇ' ಎಂದು ಪ್ರಶ್ನಿಸಿದರು.

ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಶ್ರೀಧರ್, ಪ್ರವಾಸೋದ್ಯಮ ನಿಗಮದ ಮಾಜಿ ನಿರ್ದೇಶಕ ಎಂ.ಸತೀಶ್, ತಾ.ಪಂ.ಮಾಜಿ ಸದಸ್ಯ ವಿ.ರಘು, ಎಂ.ಗಂಗರಾಜು, ರಮೇಶ್ ಆದಿತ್ಯ, ಕುಮಾರ್, ಪ್ರಕಾಶ್, ರಮೇಶ್, ಲೋಕೇಶ್, ಸುಮ ಜನಾರ್ದನ್, ರೋಹಿಣಿ ಇದ್ದರು.



ನಗರಸಭಾ ಕಾರ್ಯಾಲಯ, ಮುಳಬಾಗಿಲು, CITY MUNICIPAL COUNCIL MULBAGAL, KOLAR DISTRICT-563131

Phone No:08159-242044, Email:ka.mulbagilu.cmc@gmail.com,
website:www.mulbagalcity.mrc.gov.in

ಸಂಖ್ಯೆ:ನಸಮು/ತಾಂತ್ರಿಕ/ಸಿಆರ್/22/2024-25 ದಿನಾಂಕ:28.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ.)

ಮುಳಬಾಗಿಲು ನಗರಸಭೆ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆ, ನಗರಸಭೆ ನಿಧಿ, ಎಸ್ಎಫ್‌ಸಿ ಮುಕ್ತನಿಧಿ ಮತ್ತು ಎಸ್.ಎಫ್‌ಸಿ ಕುಡಿಯುವ ನೀರು ಅನುದಾನದಡಿಯಲ್ಲಿ ವಿವಿಧ ಕಾಮಗಾರಿಗಳು ಹಾಗೂ ವಾಹನ, ಯಂತ್ರೋಪಕರಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧ್ಯಾದೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ **https://kppp.karnataka.gov.in.** ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸರಬರಾಜು/ ಗುತ್ತಿಗೆದಾರರು/ ಏಜನ್ಸಿದಾರರಿಂದ ಐಟಂವಾರು ದರದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2024-25/WS/WORK INDENT31818/CALL-3	42.67
2	DMA/2024-25/WS/WORK INDENT31819/CALL-3	44.38
3	DMA/2024-25/IND3715/CALL-3	3.95
4	DMA/2024-25/SE3271/CALL-4	5.00
5	DMA/2024-25/WS/WORK INDENT38133	3.36
6	DMA/2024-25/WS/WORK INDENT38134	2.36
7	DMA/2024-25/OW/WORK INDENT38135	12.00
8	DMA/2024-25/OW/WORK INDENT38136	15.00

(1) ಇ-ಪ್ರಕ್ಯೂರ್ಮೆಂಟ್ ಮೂಲಕ ಬಿಡ್ ಸಲ್ಲಿಸುವ ಕೊನೆಯ ದಿನಾಂಕವನ್ನು ಇ-ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ.
(2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ-ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ.
(3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ-ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ.

ಸಹಿ/- ಪೌರಾಯುಕ್ತರು, ನಗರ ಸಭೆ, ಮುಳಬಾಗಿಲು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:554/ಕೆಎಸ್ಎಂಸಿಎ/2024-25

ವಕ್ಫ್ ಮಸೂದೆ ವಿರೋಧಿಸಿ ಪ್ರತಿಭಟನೆ

ಪೀಣ್ಯ ದಾಸರಹಳ್ಳಿ: ಕೇಂದ್ರ ಸರ್ಕಾರ ಪ್ರಸ್ತಾಪಿಸುತ್ತಿರುವ 'ವಕ್ಫ್ ತಿದ್ದುಪಡಿ ಮಸೂದೆ 2025' ಅನ್ನು ವಿರೋಧಿಸಿ ಚಿಕ್ಕಬಾಣಾವರ ವ್ಯಾಪ್ತಿಯ ಮುಸ್ಲಿಂ ಸಮುದಾಯದವರು ಕೈಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

TENDER NOTICE

DoubleTree by Hilton Bengaluru Whitefield (Unit of Kalyani Hospitality Services Private Limited) invites sealed tenders from reliable and established manufacturers and vendors from Bengaluru and around Bengaluru city area on rate contract basis for 12 months commencing from **1st JUNE 2025 to 31st MAY 2026** for the supply of following:

Sl. No.	Food & Beverage General Items & Services
1	Fresh Vegetables Local
2	English Vegetables
3	Fruits Local & Imported
4	Fresh Milk & Milk Dairy Products
5	Cheeses Local and Imported
6	Frozen Green Peas, Corn & Frozen Veg.
7	Ice Cream
8	Sweets, Savouries, Bread and Pastries Items
9	Local Groceries, Pulses, Spices, Tins & Bottled Items
10	Imp. Groceries and Bakery Ingredients
11	Dry Fruits & Nuts
12	Poultry & Eggs
13	Yogurt, Noodles, Chapati & Other food items.
14	Mutton and Meat Items
15	Fresh Fish & Sea Food
16	Cold Cuts, Frozen Meat & Frozen Sea Food
17	Office Stationery
18	Printing Stationery & Flex printing
19	Cleaning Supplies and Tissue Paper Products

Tender Forms and other particulars can be obtained on payment of **Rs.500/-** each and are available with the Purchase Manager at the hotel **between 10 am to 5 pm.** The last date of submitting the tenders is **15th April 2025.** The tender is subject to:
1. The rates finalized for twelve months will not change under any circumstances.
2. The rates must be inclusive of delivery charges till our receiving premises; GST should be shown separately on the invoices, if applicable.
3. The hotel reserves the right to reject any or all tenders without any reasons whatsoever and no representation shall be entertained on this account.

Sealed tenders must be clearly mentioning on the Envelope the item/Services and be addressed to the Attention of:

Purchase Manager,
DoubleTree by Hilton Bengaluru Whitefield,
Kalyani Platina Tech Park, EPIP Zone, ITPL Main Road, Whitefield, Bengaluru 560037.
Contact details: **Mr. Sathish Reddy** – Purchase Manager
Mobile: +91 6366435028

ಕಸ ಸಾಗಿಸುವ ಲಾರಿ – ದ್ವಿಚಕ್ರ ವಾಹನ ನಡುವೆ ಡಿಕ್ಕಿ

ಬಾಲಕ ಸಾವು: ಲಾರಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರದ ರೈಲು ಹಳಿಯ ಬಳಿ ಶನಿವಾರ ಮಧ್ಯಾಹ್ನ ಬಿಬಿಎಂಪಿಯ ಕಸ ಸಾಗಣೆ ಲಾರಿ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಬಾಲಕ ಐಮಾನ್ (10) ಮೃತಪಟ್ಟಿದ್ದಾನೆ.

ಅಪಘಾತದ ಬಳಿಕ ಆಕ್ರೋಶಗೊಂಡ ಸ್ಥಳೀಯರು ಲಾರಿಗೆ ಬೆಂಕಿ ಹಚ್ಚಿದರು. ಲಾರಿ ಬಹುತೇಕ ಸುಟ್ಟಿದೆ.

ಹೆಗಡೆನಗರದಲ್ಲಿ ಇರುವ ಮದರಾಸಕ್ಕೆ ಸೇರಲು ಐಮಾನ್, ತಂದೆ ಜೊತೆಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ. ಥಣಿಸಂದ್ರದ ರೈಲು ಹಳಿ ಬಳಿ ಕಸದ ಲಾರಿಯೊಂದು ವೇಗವಾಗಿ ಬಂದು ಸ್ಕೂಟರ್‌ಗೆ ಡಿಕ್ಕಿಯಾಗಿದೆ. ಪರಿಣಾಮ ನೆಲಕ್ಕೆ ಬಿದ್ದ ಐಮಾನ್‌ನ ತಲೆ ಮೇಲೆ ಲಾರಿಯ ಚಕ್ರ ಹರಿದಿದ್ದು, ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ಉತ್ತರ ಸಂಚಾರ ವಿಭಾಗದ ಡಿಸಿಪಿ ಡಿ.ಆರ್. ಸಿರಿಗೌರಿ ತಿಳಿಸಿದ್ದಾರೆ. ಅಪಘಾತದಲ್ಲಿ ಐಮಾನ್ ತಂದೆಗೂ ಗಾಯವಾಗಿದ್ದು, ಅಂಬೇಡ್ಕರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಲಾರಿ ಚಾಲಕ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ ಎಂಬ ಆರೋಪವಿದೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಆಕ್ರೋಶಗೊಂಡ ಸ್ಥಳೀಯರು ಲಾರಿಗೆ ಬೆಂಕಿ ಹಚ್ಚಿರುವುದು

ಸ್ಥಳೀಯರಿಂದ ಪ್ರತಿಭಟನೆ: ಅಪಘಾತ ನಡೆಸಿದ ಚಾಲಕನ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು. ನಂತರ ಪೆಟ್ರೋಲ್ ಸುರಿದು ಲಾರಿಗೆ ಬೆಂಕಿ ಹಚ್ಚಿದರು. ಲಾರಿ ಚಾಲಕ ಕೆಳಕ್ಕೆ ಇಳಿದು ಪ್ರಾಣ ಉಳಿಸಿಕೊಂಡಿದ್ದಾನೆ. ಲಾರಿ ಬಹುತೇಕ ಸುಟ್ಟಿದೆ. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

'ಥಣಿಸಂದ್ರ ಭಾಗದಲ್ಲಿ ಬಿಬಿಎಂಪಿ ಕಸದ ಲಾರಿಗೆ ನಾಲ್ಕನೇ ಬಲಿಯಾಗಿದೆ. 3 ತಿಂಗಳ ಹಿಂದೆ ಕಸದ ಲಾರಿ ಹರಿದು ಇಬ್ಬರು ಮಹಿಳೆಯರು ಮೃತಪಟ್ಟಿದ್ದರು. ಈಗ ಮತ್ತೊಂದು ಘಟನೆ ನಡೆದಿದೆ' ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದರು.

'ಕಾರ್ಪೊರೇಟರ್‌ಗಳ ಸ್ವಾತಂತ್ರ್ಯಕ್ಕೆ ಅಡ್ಡಿ'

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಯಿಂದ ಸಂವಿಧಾನದ 243ಡಬ್ಲ್ಯು ಅನುಚ್ಛೇದ ಉಲ್ಲಂಘನೆಯಾಗಿದ್ದು, ಇದನ್ನು ಜಾರಿ ಮಾಡಬಾರದು' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ (ಅಠವಳೆ) ಬೆಂಗಳೂರು ನಗರ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

'ಮಸೂದೆ ರಾಜಕೀಯ ಪ್ರೇರಿತವಾಗಿದ್ದು, ಶಾಸಕರು ತಮಗೆ ಬೇಕಾದವರನ್ನು ವಾರ್ಡ್ ಪ್ರತಿನಿಧಿಯಾಗಿ ನೇಮಕ ಮಾಡಿಕೊಳ್ಳಬಹುದು. ಮತದಾರರ ದನಿಯನ್ನು ದಮನಿಸುವ ಹುನ್ನಾರವೂ ಅಡಗಿದೆ' ಎಂದು ಘಟಕದ ಸದಸ್ಯರು ದೂರಿದರು.

ಆರ್‌ಪಿಐನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ. ವೆಂಕಟಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸತೀಶ್, ಖಜಾಂಚಿ ಚಂದ್ರಶೇಖರ್ ಭಾಗವಹಿಸಿದ್ದರು.

ಬಿಎಂಆರ್‌ಸಿಎಲ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರು ಕಟ್ಟಡಗಳಿಗೆ ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ನೀಡುವ ಪ್ಲಾಟಿನಮ್ ರೇಟಿಂಗ್ ಪ್ರಶಸ್ತಿಗೆ ಬಿಎಂಆರ್‌ಸಿಎಲ್‌ನ ಕೋಣನಕುಂಟೆ ಕ್ರಾಸ್, ದೊಡ್ಡಕಲ್ಲಸಂದ್ರ, ತಲಘಟ್ಟಪುರ ಮತ್ತು ರೇಷ್ಮೆ ಸಂಸ್ಥೆಯ ಮೆಟ್ರೊ ನಿಲ್ದಾಣಗಳು ಆಯ್ಕೆಯಾಗಿವೆ.

ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ಸಂಸ್ಥೆಯು ಹಸಿರು ಕಟ್ಟಡಗಳಿಗೆ ನೀಡುವ ಪ್ರಮುಖ ಪ್ರಮಾಣೀಕರಣ ಸಂಸ್ಥೆಯಾಗಿದೆ. ವಿವಿಧ ನಿಯತಾಂಕಗಳಲ್ಲಿ ಸುಸ್ಥಿರ ಮತ್ತು ಪರಿಸರ ಸ್ನೇಹಿ ನಿಯಮಗಳನ್ನು ಅನುಸರಿಸುವ ಕಟ್ಟಡಗಳು ಮತ್ತು ಮೂಲಸೌಕರ್ಯ ಯೋಜನೆಗಳಾದ ಇಂಧನ ದಕ್ಷತೆ, ನೀರಿನ ಸಂರಕ್ಷಣೆ, ಸುಸ್ಥಿರ ನಿರ್ಮಾಣ ಸಾಮಗ್ರಿ, ನವೀಕರಿಸಬಹುದಾದ ಶಕ್ತಿಯ ಬಳಕೆ ಮತ್ತು ಸುಧಾರಿತ ಒಳಾಂಗಣ ಪರಿಸರ ಗುಣಮಟ್ಟವನ್ನು ಪ್ರಮಾಣೀಕರಿಸುತ್ತದೆ.

ದಕ್ಷತೆಯಿಂದ ಇಂಧನ ಬಳಕೆ ಮತ್ತು ಹವಾನಿಯಂತ್ರಣ ವ್ಯವಸ್ಥೆ, ನಿಲ್ದಾಣ ಕಾರ್ಯಾಚರಣೆಗಳಿಗೆ ಸೌರಶಕ್ತಿಯ ಬಳಕೆ, ಮಳೆನೀರು ಸಂಗ್ರಹ ಮತ್ತು ನೀರಿನ ಮರುಬಳಕೆ ವ್ಯವಸ್ಥೆ, ಪರಿಸರ ಸ್ನೇಹಿ ನಿರ್ಮಾಣ ಸಾಮಗ್ರಿಗಳ ಸಂಯೋಜನೆಗಳನ್ನು ಬಿಎಂಆರ್‌ಸಿಎಲ್ ಅಳವಡಿಸಿಕೊಂಡಿರುವುದನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ವ್ಹೀಲಿ: ಕಠಿಣ ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ಮಾಡದಂತೆ ಸೂಚಿಸಲಾಗುವುದು. ಜತೆಗೆ, ದ್ವಿಚಕ್ರ ವಾಹನಗಳಲ್ಲಿ ವ್ಹೀಲಿ ಮಾಡುವವರ ವಿರುದ್ದ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ನಗರದ ಥಣಿಸಂದ್ರದ ಮೀಸೆ ತಿಮ್ಮಯ್ಯ ಸಭಾಂಗಣದಲ್ಲಿ ಶನಿವಾರ ನಡೆದ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಸಂಚಾರ ದಟ್ಟಣೆಯ ಜತೆಗೆ, ರಸ್ತೆಯ ಎರಡು ಬದಿಗಳಲ್ಲೂ ವಾಹನಗಳ ನಿಲುಗಡೆಗೆ ಅವಕಾಶ ನೀಡಲಾಗಿದೆ. ಇದರಿಂದ ಸಂಚಾರ ದಟ್ಟಣೆ ಹೆಚ್ಚಾಗಿದೆ. ಚಾಲಕರು ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಕಿರಿಕಿರಿ ಮಾಡುತ್ತಿದ್ದಾರೆ. ವ್ಹೀಲಿ, ಪಾದಚಾರಿ ಮಾರ್ಗ ಒತ್ತುವರಿ ಮಾಡಿರುವುದರಿಂದಲೇ ಸಂಚಾರ ದಟ್ಟಣೆ ಹೆಚ್ಚಾಗಿದೆ ಎಂದು ಸಭೆಯಲ್ಲಿ ಸಾರ್ವಜನಿಕರು ಗಮನ ಸೆಳೆದರು.

ಬಿ.ದಯಾನಂದ

'ಸೈಲೆನ್ಸರ್ ಮಾರ್ಪಾಡು ಮಾಡಿಕೊಂಡು ಕರ್ಕಶ ಶಬ್ದ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಪಾದಚಾರಿ ಮಾರ್ಗ ಒತ್ತುವರಿ ಮಾಡಿರುವ ಕುರಿತು ಬಿಬಿಎಂಪಿ ಅಧಿಕಾರಿಗಳ ಜತೆ ಚರ್ಚಿಸಿ ಕ್ರಮ ಕೈಗೊಳ್ಳಲಾವುದು' ಎಂದು ಕಮಿಷನರ್ ಭರವಸೆ ನೀಡಿದರು.

ಉತ್ತರ ಸಂಚಾರ ವಿಭಾಗದ ಡಿಸಿಪಿ ಸಿರಿಗೌರಿ, ಈಶಾನ್ಯ ವಿಭಾಗ ಡಿಸಿಪಿ ಸಜೀತ್ ಹಾಜರಿದ್ದರು.

ವಿನಯ್, ರಜತ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಕಿರುತೆರೆಯ ನಟರಾದ ವಿನಯ್‌ಗೌಡ ಹಾಗೂ ರಜತ್ ಕಿಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಶನಿವಾರ ಬಿಡುಗಡೆಯಾದರು.

ನಗರದ 24ನೇ ಎಸಿಜೆಎಂ ನ್ಯಾಯಾಲಯವು ಶುಕ್ರವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಜೈಲಿನ ಅಧಿಕಾರಿಗಳಿಗೆ ಶನಿವಾರ ಬೆಳಿಗ್ಗೆ ಆರೋಪಿಗಳ ಪರವಾಗಿ ವಾದ ಮಂಡಿಸಿದ್ದ ವಕೀಲರು ಜಾಮೀನು ಆದೇಶವನ್ನು ಹಸ್ತಾಂತರಿಸಿದರು. ಬಳಿಕ ಜೈಲಿನಿಂದ ಇಬ್ಬರೂ ಹೊರಬಂದರು.

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿ ಅದನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಖಾತೆಯಲ್ಲಿ ಹಾಕಿದ್ದರು. ಅದನ್ನು ಗಮನಿಸಿದ ಬಸವೇಶ್ವರ ನಗರ ಠಾಣೆಯ ಪೊಲೀಸರು, ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಫೈಬರ್ ಮಚ್ಚನ್ನು ಪೊಲೀಸರಿಗೆ ಹಸ್ತಾಂತರಿಸಿದ್ದು ಪತ್ತೆಯಾಗಿತ್ತು. ಬಳಿಕ ಸಾಕ್ಷ್ಯ ನಾಶಪಡಿಸಿದ್ದ ಆರೋಪದಡಿ ಇಬ್ಬರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ವಿನಯ್ ಹಾಗೂ ರಜತ್

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/26/2024-25 ದಿನಾಂಕ: 29-03-2025

ಟೆಂಡರ್ ಪ್ರಕಟಣೆ

(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ಮತ್ತು 2021-22, 2022-23, 2023-24, 2024-25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಗೂ ನೊಂದಾಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: **INDENT-37064/Call-2, INDENT-37065/Call-2, INDENT -30494/Call-3, INDENT-4516/Call-2, INDENT-4577.**

1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **11.04.2025 ಸಂಜೆ 4.30 ಗಂಟೆಯವರೆಗೆ.** 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **15.04.2025 ಸಂಜೆ 5.00 ರ ವರೆಗೆ.** 3) ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **16.04.2025 ಸಂಜೆ 5.15 ಗಂಟೆಗೆ.** 4) ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **19.04.2025 ಬೆಳಿಗ್ಗೆ 11.00 ಗಂಟೆಗೆ.** 5) ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ/ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in** ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/- ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/5968/ಸ್ಕ್ಯಾನ್/2024-25

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟಗಳ ಸಂಯುಕ್ತ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಪಿಂಚಣಿ ಪರಿಷ್ಕರಣೆಗೆ ಒತ್ತಾಯಿಸಿ ಪ್ರತಿಭಟನೆ

ಬೆಂಗಳೂರು: ಪಿಂಚಣಿ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟಗಳ ಸಂಯುಕ್ತ ವೇದಿಕೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿತು.

1995ರಿಂದ ಬಾಕಿ ಇರುವ ಪಿಂಚಣಿ ಪರಿಷ್ಕರಣೆ ಮಾಡಬೇಕು, ವಿಶೇಷ ಭತ್ಯೆಗಳ ಮೇಲೆ ಪಿಂಚಣಿ ನೀಡಬೇಕು. ಈ ಬಗ್ಗೆ ದಶಕಗಳಿಂದ ಹೋರಾಟ ಮಾಡಲಾಗುತ್ತಿದೆ. ಈಗಲಾದರೂ ಬೇಡಿಕೆ ಈಡೇರಿಸಬೇಕು. ಖಾಸಗಿ ಬ್ಯಾಂಕ್ ನಿವೃತ್ತರಿಗೂ ಎಕ್ಸ್‌ಗ್ರೇಶಿಯಾ ಕೊಡಬೇಕು ಎಂದು ಒತ್ತಾಯಿಸಿದರು.

ವಾಣಿಜ್ಯ ಬ್ಯಾಂಕ್‌ಗಳ ಪಿಂಚಣಿದಾರರಿಗೆ ಆಗುತ್ತಿರುವ ತಾರತಮ್ಯ ತಪ್ಪಿಸಬೇಕು, ಉದ್ಯೋಗಕ್ಕೆ ರಾಜೀನಾಮೆ ನೀಡಿದವರಿಗೂ ಬೇಗ ಪಿಂಚಣಿ ಸಿಗುತ್ತಿಲ್ಲ. ಪಿಂಚಣಿ ನೀಡುವಲ್ಲಿ ಆಗುತ್ತಿರುವ ತೊಂದರೆ ಬಗೆಹರಿಸಲು ತಕ್ಷಣ ಅಧಿಕಾರಿಗಳ ಜತೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

‘ಬೇಡಿಕೆಗಳ ಬಗ್ಗೆ ಚರ್ಚಿಸಲು ಬ್ಯಾಂಕ್ ನಿವೃತ್ತರ ಸಂಘಟನೆಗಳ ನಾಯಕರನ್ನು ಕರೆದು ಭಾರತೀಯ ಬ್ಯಾಂಕ್‌ಗಳ ಸಂಘವು ಮಾತುಕತೆ ನಡೆಸಬೇಕು. ಆರೋಗ್ಯ ವಿಮೆಯಲ್ಲಿ ಸುಧಾರಣೆ ತರಬೇಕು ಮತ್ತು ವಿಮೆಯ ಮೇಲಿನ ಜಿಎಸ್‌ಟಿಯಿಂದ ಸಂಪೂರ್ಣ ವಿನಾಯಿತಿ ನೀಡಬೇಕು. ಬೇಡಿಕೆ ಈಡೇರಿಕೆ ಸಂಬಂಧ ಹಲವು ಬಾರಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದರೂ ಈಡೇರಿಲ್ಲ’ ಎಂದು ಒಕ್ಕೂಟದ ಜಂಟಿ ಪ್ರಧಾನ ಕಾರ್ಯದರ್ಶಿ ಕೆ.ವಿಶ್ವನಾಥ ನಾಯ್ಕ್ ಹೇಳಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಸಂಚಾಲಕರಾದ ಎಸ್.ಸಿ.ಜೈನ್, ಗಿರಿರಾಜ್ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ತರಬೇತಿ

ಬೆಂಗಳೂರು: ಮಕ್ಕಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಪಠ್ಯ ಕಾರ್ಯಕ್ರಮವನ್ನು ನಗರದ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆಯು ಆರಂಭಿಸಿದೆ.

ನ್ಯಾಷನಲ್ ಎಜುಕೇಶನ್ ಫೌಂಡೇಶನ್ (ಎನ್‌ಇಎಫ್) ಮತ್ತು ಬೋವರ್ ಸ್ಕೂಲ್ ಆಫ್ ಎಂಟರ್‌ಪ್ರಿನರ್‌ಶಿಪ್ ಸಹಯೋಗದಲ್ಲಿ ರೂಪಿಸಲಾಗಿರುವ ಈ ಪಠ್ಯಕ್ರಮವನ್ನು ‘ಯಂಗ್ ವ್ಯಾಲ್ಯೂ ಕ್ರಿಯೇಟರ್ಸ್ ಸರ್ಕಲ್’ ಎಂದು ಕರೆಯಲಾಗಿದೆ. ಎನ್‌ಇಎಫ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಅದಕ್ಕೆ ಚಾಲನೆ ನೀಡಲಾಯಿತು.

ವಿದ್ಯಾರ್ಥಿಗಳಲ್ಲಿ ಸಮಸ್ಯೆ ನಿವಾರಣೆ ಕೌಶಲ, ಕ್ರಿಯಾಶೀಲತೆ ಮತ್ತು ಅನ್ವೇಷಣಾ ಮನೋಭಾವಗಳನ್ನು ಉತ್ತೇಜಿಸಲಾಗುತ್ತದೆ. ಶಾಲೆಯ ಸಿಬಿಎಸ್‌ಸಿಯ 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮವನ್ನು ಪರಿಚಯಿಸಲಾಗಿದೆ. ಎನ್‌ಇಎಫ್ ಟ್ರಸ್ಟಿ ಐಶ್ವರ್ಯ ಡಿಕೆಎಸ್ ಹೆಗ್ಡೆ, ‘ಪಠ್ಯದಲ್ಲಿ ಕಲಿತಿದ್ದನ್ನು ಹೊರಜಗತ್ತಿನಲ್ಲಿ ಹೇಗೆ ಅಳವಡಿಸಿಕೊಳ್ಳಲಾಗುತ್ತದೆ ಎಂಬುದು ಉದ್ಯಮಿಯ ಸಫಲತೆಯನ್ನು ನಿರ್ಧರಿಸುತ್ತದೆ. ಅಂತಹ ಕೌಶಲಗಳನ್ನು ಇದರಲ್ಲಿ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ’ ಎಂದರು.

SAMSEN PAPERS PRIVATE LIMITED

DISTRIBUTORS / DEALERS / CONSUMERS WANTED

SAMSEN Papers Private Limited is specializing in the production of top-quality MG Kraft Paper, Committed to excellence that meet the highest industry standards, catering to diverse packaging and industrial needs. Samsen Papers aims to become a trusted name in the market through innovation, sustainability, and a customer centric approach.

Products Ranges	GSM
MG Plain Kraft 18/20/22/24 BF	40-90
MG Plain / Ribbed Kraft	33-90
MG Ribbed Kraft (Super Deluxe)	45-65
MG Ribbed Kraft Super fine	44-90
MG Plain Kraft (Golden Yellow)	60-90
MG Green Leaf Poster	38-75
MG White Deluxe Calendar Poster	18-58
MG White Regular Calendar Poster	27-28
MG White Poster (Deluxe)	18-58
MG Hard Tissue	17-18
& Many More Varieties	

CONTACT NOW G.M. MARKETING
Mob: 90809-69485, 98429-49981
marketing@samsenpapers.com & md@samsenpapers.com
371, Sankaramanallur Village (North), Madathur, Madathukulam TK, Tiruppur (Dt) - 642204. Ph : 0422-6193555

DH DECCAN HERALD | ಪ್ರಜಾವಾಣಿ

ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರಾಯೋಜಕರು: AD6 advertising — ಮೊಬಿಲಿಟಿ ಪಾಲುದಾರರು: SUZUKI

ಬೆಂಗಳೂರು: 12-13 ಏಪ್ರಿಲ್ 2025, ತ್ರಿಪುರವಾಸಿನಿ, ಅರಮನೆ ಮೈದಾನ | ಹುಬ್ಬಳ್ಳಿ: 19-20 ಏಪ್ರಿಲ್, 2025, ನೆಹರು ಕ್ರೀಡಾಂಗಣ, ಜೆ.ಸಿ. ನಗರ

ವಿವಿಧ ಸಾಧ್ಯತೆಗಳನ್ನು ಅನ್ವೇಷಿಸಿ, ಸರಿಯಾದ ಆಯ್ಕೆ ಮಾಡಿ!

ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!

ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಎಜುಕೇಶನ್ ಎಕ್ಸ್ಪೋ – ಎಡ್ಯುವರ್ಸ್’ನಲ್ಲಿ ಪಾಲ್ಗೊಳ್ಳಿರಿ ಮತ್ತು ಅಸೀಮಿತ ಸಾಧ್ಯತೆಗಳ ಬಾಗಿಲುಗಳು ತೆರೆದಿರುವ ಅನುಭವ ನಿಮ್ಮದಾಗಿಸಿಕೊಳ್ಳಿ. ಅಸಂಖ್ಯಾತ ವಿಭಿನ್ನ ಕೋರ್ಸ್‌ಗಳ ಶ್ರೇಣಿಗಳ ಬಗ್ಗೆ ತಿಳಿಯಿರಿ ಮತ್ತು ಉನ್ನತ ದರ್ಜೆಯ ಸಂಸ್ಥೆಗಳು ನೀಡುತ್ತಿರುವ ವೈವಿಧ್ಯಮಯ ಆಯ್ಕೆಗಳಲ್ಲಿನ ನಿಮ್ಮ ನೆಚ್ಚಿನ ಕೋರ್ಸ್ ಆಯ್ಕೆ ಮಾಡಿಕೊಳ್ಳಿ. ನೀವು ಇಂಜಿನಿಯರ್, ಡಾಕ್ಟರ್, ಡಿಸೈನರ್ ಅಥವಾ ನೀವು ಪರ್ಯಾಯ ವೃತ್ತಿ ಆಯ್ಕೆಯನ್ನು ಆರಿಸಿಕೊಂಡು ಉದ್ಯಮಿಯಾಗಲು ಬಯಸುತ್ತೀದ್ದರೂ ಸರಿ, ಈ ನಮ್ಮ ಎಕ್ಸ್ಪೋ’ದಲ್ಲಿ ಅತ್ಯುತ್ತ ಶೈಕ್ಷಣಿಕ ಸಂಸ್ಥೆಗಳು ನಿಮಗೆ ಒಟ್ಟಾಗಿ ಲಭಿಸುತ್ತವೆ ಮತ್ತು ನಿಮ್ಮನ್ನು ಯಶಸ್ಸಿನೆಡೆಗೆ ಮುನ್ನಡೆಸಲು ಮಾರ್ಗದರ್ಶನ ನೀಡಲು ಸಿದ್ಧವಾಗಿರುತ್ತವೆ.

ಸಿಇಟಿ ಮತ್ತು ಕಾಮೆಡ್– ಕೆ ಸಿಬ್ಬಂದಿಗಳಿಂದ ಉಚಿತ ಸಮಾಲೋಚನಾ ಉಪನ್ಯಾಸಗಳನ್ನು ಪಡೆಯಿರಿ

ಪ್ರವೇಶ ಉಚಿತ
CET ಮತ್ತು NEET ಮಾಕ್ ಪರೀಕ್ಷೆಗಾಗಿ ಈಗಲೇ ನೋಂದಾಯಿಸಿ. ಸ್ಮಾರ್ಟ್ ವಾಚ್‌ಗಳು, ಇಯರ್‌ಪಾಡ್‌ಗಳು ಮತ್ತು ಇನ್ನೂ ಹೆಚ್ಚಿನ ವಿಶೇಷ ಬಹುಮಾನಗಳನ್ನುಗೆಲ್ಲಿರಿ...
ಕೋಡ್ ಸ್ಕ್ಯಾನ್ ಮಾಡಿ

University Pavilion Sponsors
CHANAKYA UNIVERSITY, CMR UNIVERSITY, DAYANANDA SAGAR UNIVERSITY, GARDEN CITY UNIVERSITY, GITAM, ICFAI UNIVERSITY, MANIPAL ACADEMY of HIGHER EDUCATION BENGALURU CAMPUS, Parul University, PRESIDENCY UNIVERSITY, RAMAIAH UNIVERSITY OF APPLIED SCIENCES, REVA UNIVERSITY, SAPTHAGIRI NPS UNIVERSITY, SRM UNIVERSITY AP

Gold Sponsors
AMC, CAMBRIDGE INSTITUTE OF TECHNOLOGY, EAST POINT GROUP OF INSTITUTIONS, KLE, NAGARJUNA, THE Oxford EDUCATIONAL INSTITUTIONS

Silver Sponsors
EAST WEST GROUP OF INSTITUTIONS, MS ENGINEERING COLLEGE, RAJARAJESWARI COLLEGE OF ENGINEERING, SAMBHRAM INSTITUTIONS

Exhibitors
ACS COLLEGE OF ENGINEERING, AKASH, AMITY UNIVERSITY, AIMS INSTITUTES, AMRITA VISHWA VIDYAPEETHAM, ATRIA INSTITUTE OF TECHNOLOGY, ATRIA UNIVERSITY, GULF MEDICAL UNIVERSITY, DON BOSCO INSTITUTE OF TECHNOLOGY, Dr. S.R. Chandrasekhar Institute of Speech and Hearing, HARSHA, MIT WORLD PEACE UNIVERSITY, PES UNIVERSITY, RV UNIVERSITY, SOUNDARYA GROUP OF INSTITUTIONS, S.E.A, SHRI DHARMASTHALA MANJUNATHESHWARA EDUCATIONAL SOCIETY, SAI VIDYA INSTITUTE OF TECHNOLOGY, UNIVERSAL GROUP OF INSTITUTIONS, VISIONIAS

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ - 9986006598 | ಬೆಂಗಳೂರು

ಅಮುಲ್
ಯುಗಾದಿ ಹಬ್ಬದ ಹಾರ್ದಿಕ ಶುಭಾಷಯಗಳು
Amul CURD
₹50* 1Kg
₹25* 500g
CREAMY AND TASTY

ಕೆಎಂಎಫ್ ನಂದಿನಿ

ನಂದಿನಿ ಹಾಲಿನ ದರ ದೇಶದಲ್ಲಿಯೇ* ಅತ್ಯಂತ ಕಡಿಮೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

- ಅತ್ಯಂತ ಸ್ಪರ್ಧಾತ್ಮಕ ಬೆಲೆಯಲ್ಲಿ ಕೆ.ಎಂ.ಎಫ್. ತನ್ನ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಲುಪಿಸಲು ಬದ್ಧವಾಗಿದೆ.
- ನಮ್ಮ ಸಂಸ್ಥೆಯು ಕರ್ನಾಟಕ ರಾಜ್ಯದ 26.84 ಲಕ್ಷ ಹೈನುಗಾರ ಕುಟುಂಬಗಳ ಆರ್ಥಿಕತೆಯನ್ನು ಕಟ್ಟಿ ಬೆಳೆಸುತ್ತಿದೆ.
- ಹೊರ ರಾಜ್ಯಗಳಿಗೆ ಹೋಲಿಸಿದರೆ ನಂದಿನಿ ಹಾಲಿನ ಮಾರಾಟ ದರ ಈಗಲೂ ಕಡಿಮೆ.*

ಹಾಲಿನ ದರ ಪ್ರತಿ ಲೀಟರ್ ಗೆ

ಆಂಧ್ರಪ್ರದೇಶ	ಹರಿಯಾಣ	ದೆಹಲಿ	ಗುಜರಾತ್	ಮಹಾರಾಷ್ಟ್ರ	ಕೇರಳ	ಮಧ್ಯಪ್ರದೇಶ	ಕರ್ನಾಟಕ– ‘ನಂದಿನಿ’
60	56	55	53	52	52	52	46

- ರೈತರ ಹಿತರಕ್ಷಣೆಗಾಗಿ ಸರ್ಕಾರವು ಪ್ರತಿ ಲೀಟರ್ ಹಾಲಿಗೆ ರೂ. 5 ಅನ್ನು ಪ್ರೋತ್ಸಾಹಧನವಾಗಿ ನೀಡುತ್ತಿದ್ದು, ಇದಕ್ಕಾಗಿಯೇ ರೂ. 1500 ಕೋಟಿಗಳನ್ನು ಪ್ರತಿ ವರ್ಷ ನೀಡಲಾಗುತ್ತಿದೆ.
- ನಗರಗಳಲ್ಲಿರುವ ಬಹುತೇಕರು, ಹಳ್ಳಿಗಾಡಿನ ರೈತರ ಜೊತೆ ಒಡನಾಟ ಹೊಂದಿದವರು. ರೈತರ ನೆಮ್ಮದಿ, ನಾಡಿನ ನೆಮ್ಮದಿಯ ಮೂಲಮಂತ್ರವಾಗಿದ್ದು, ಗ್ರಾಹಕರು ಎಂದಿನಂತೆಯೇ ಸಹಕರಿಸಲು ಕೋರಿದೆ.

ದಿನಾಂಕ: 01.04.2025ರಿಂದ ಅನ್ವಯವಾಗುವಂತೆ ಹಾಲು ಮತ್ತು ಮೊಸರಿನ ದರಗಳು

ನಂದಿನಿ ಹಾಲಿನ ಮಾದರಿಗಳು	ಪ್ರಸ್ತುತ ದರ (ರೂ.) ಕೆಜಿ/ಲೀ.ಗೆ	ಪರಿಷ್ಕೃತ ದರ (ರೂ.) ಕೆಜಿ/ಲೀ.ಗೆ
ಟೋನ್ಡ್ ಹಾಲು	42/-	46/-
ಸ್ಪೆಷಲ್ ಟೋನ್ಡ್ ಹಾಲು	48/-	52/-
ಶುಭಂ ಹಾಲು	48/-	52/-
ಮೊಸರು	50/-	54/-

ನಾಡಿನ ಸಮಸ್ತ ರೈತರು, ಹಾಲು ಉತ್ಪಾದಕರು, ನಂದಿನಿ ಗ್ರಾಹಕರು ಹಾಗೂ ನಂದಿನಿ ಬಳಗದ ಎಲ್ಲರಿಗೂ
‘ಯುಗಾದಿ’ ಹಬ್ಬ ಮತ್ತು ‘ರಂಜಾನ್’ ಹಬ್ಬದ ಶುಭಾಶಯಗಳು

ಅಧ್ಯಕ್ಷರು ಹಾಗೂ ಆಡಳಿತ ಮಂಡಲಿ ನಿರ್ದೇಶಕರುಗಳು | ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ



ಮಂಗಳೂರು ತಾಲೂಕಿನ ಬಳ್ಕುಂಜೆಯ ಉದ್ದೇಶಿತ ಭೂಸ್ವಾಧೀನ ಪ್ರದೇಶ ಪ್ರಜಾವಾಣಿ ಚಿತ್ರ

ಸಾವಿರಾರು ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿರುವ ಸರ್ಕಾರದ ನಿರ್ಧಾರ ವಿರೋಧಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದಲ್ಲಿ 500ಕ್ಕೂ ಹೆಚ್ಚು ದಿನದಿಂದ ಪ್ರತಿಭಟನೆ ನಡೆಸುತ್ತಿರುವ ರೈತರು (ಪ್ರಜಾವಾಣಿ ಸಂಗ್ರಹ ಚಿತ್ರ)

215	86,850 ಎಕರೆ	24,215	30,000 ಎಕರೆ	13,308 ಎಕರೆ	8,312 ಎಕರೆ
ಒಟ್ಟು ಕೈಗಾರಿಕಾ ಪ್ರದೇಶಗಳು	ಪ್ರದೇಶ ಅಭಿವೃದ್ಧಿ	ಕೈಗಾರಿಕೆಗಳಿಗೆ ಭೂಮಿ ಮಂಜೂರು	12 ವಿಶೇಷ ಹೂಡಿಕೆ ವಲಯ	ಬೆಂಗಳೂರು ಗ್ರಾಮಾಂತರ ಜಿಲ್ಲೆ (ರಾಜ್ಯದಲ್ಲಿ ಅತಿ ಹೆಚ್ಚು ಪ್ರದೇಶ ಅಭಿವೃದ್ಧಿ)	ತುಮಕೂರು ಕೈಗಾರಿಕಾ ಪ್ರದೇಶ

ಅನ್ನದ ಬಟ್ಟಲಿಗೆ ಕನ್ನ...

ಒಂದನೇ ಪುಟದಿಂದ...

ಇವರಿಗೆ ಮನಸ್ಸಿಲ್ಲವೇ? ಕಲ್ಲು ಹೃದಯವೇ?'....

ಇದು ರಾಜ್ಯದ ಉದ್ದಗಲಕ್ಕೂ ಅನ್ನ ಕೊಡುವ ಭೂಮಿಯನ್ನು ಕಳೆದುಕೊಂಡ ಅನ್ನದಾತರ ಆಕ್ರೋಶದ ನುಡಿಗಳು. ಜೀವನಕ್ಕೆ ಆಧಾರವಾಗಿದ್ದ, ತಲೆತಲಾಂತರದಿಂದ ಬೇಸಾಯ ಮಾಡಿ ಜೀವನ ಸಾಗಿಸುತ್ತಿದ್ದ ಭೂಮಿಗೆ ಪರಿಹಾರದ ನೆಪದಲ್ಲಿ ಹಣಕೊಟ್ಟು ಕಿತ್ತುಕೊಳ್ಳುತ್ತಿರುವುದಕ್ಕೆ ರೈತರು ನಿಗಿನಿಗಿ ಕೆಂಡವಾಗಿದ್ದಾರೆ. ಭೂಮಿಯೊಳಗಿನ ಜ್ವಾಲಾಗ್ನಿ ಹೊರಬಂದು ಆರ್ಭಟಿಸುವಂತೆ ಕೃಷಿಕರ ಕೋಪ ಕಟ್ಟೆಯೊಡೆದಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಉದ್ಯಮಿಗಳಿಗೆ ಕೈಗಾರಿಕೆ ಆರಂಭಿಸಲು ಒಂದೆಡೆ ಸ್ಥಳಾವಕಾಶ ಕಲ್ಪಿಸುವ ಸಲುವಾಗಿ ರಾಜ್ಯದ ವಿವಿಧೆಡೆಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುತ್ತಾ ಬಂದಿದೆ. 'ಭೂ ಬ್ಯಾಂಕ್' ಮಾದರಿಯಲ್ಲಿ ಕೆಲಸ ಮಾಡುತ್ತಿದೆ. ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಅಭಿವೃದ್ಧಿಪಡಿಸಿ, ನಂತರ ಉದ್ಯಮ ಸ್ಥಾಪಿಸಲು ಮುಂದೆ ಬಂದವರಿಗೆ ಹಂಚಿಕೆ ಮಾಡುತ್ತಿದೆ. ಆದರೆ ಕೈಗಾರಿಕೆ ಉದ್ದೇಶಕ್ಕೆ ಸೀಮಿತವಾಗಿ, ಬೇಡಿಕೆಗೆ ಅನುಗುಣವಾಗಿ ಜಮೀನು ವಶಪಡಿಸಿಕೊಳ್ಳುವುದಕ್ಕೆ ರೈತರಿಂದ ವಿರೋಧ ವ್ಯಕ್ತವಾಗುತ್ತಿಲ್ಲ. ಅಗತ್ಯಕ್ಕಿಂತ ಹೆಚ್ಚು ಭೂ ಸ್ವಾಧೀನ, ಪಡೆದುಕೊಂಡ ಜಾಗವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡದಿರುವುದು, ಸಮರ್ಪಕವಾಗಿ ಪರಿಹಾರ ನೀಡದಿರುವುದು ಸಿಟ್ಟಿಗೆ ಕಾರಣವಾಗಿದೆ.

ಮೊದಲ ಹಂತ, ಎರಡನೇ ಹಂತ... ಹೀಗೆ ಹಲವು ಹಂತಗಳಲ್ಲಿ ಭೂ ಸ್ವಾಧೀನ ಮುಂದುವರಿಯುತ್ತಲೇ ಇರುತ್ತದೆ. ತುಮಕೂರು ಹೊರವಲಯದ ವಸಂತನರಸಾಪುರ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಎರಡೂವರೆ ದಶಕಗಳ ಹಿಂದೆಯೇ ಚಾಲನೆ ನೀಡಲಾಗಿದ್ದು, ದೇಶದಲ್ಲೇ ಅತಿ ದೊಡ್ಡ ಕೈಗಾರಿಕಾ ಪಾರ್ಕ್ ನಿರ್ಮಾಣದ ಗುರಿ ಹೊಂದಲಾಗಿದೆ. ಈಗಾಗಲೇ ಮೂರು ಹಂತದ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು (ಒಟ್ಟು 8,312 ಎಕರೆ), ನಾಲ್ಕನೇ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಐದನೇ ಹಂತದ ಭೂ ಸ್ವಾಧೀನಕ್ಕೆ ನೋಟಿಸ್ ಜಾರಿ ಮಾಡಲಾಗಿದೆ. ಒಟ್ಟು 12 ಸಾವಿರ ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ನಾಲ್ಕನೇ ಹಂತದ ಅಭಿವೃದ್ಧಿಗೆ ಕೆಐಎಡಿಬಿ ಕೈ ಹಾಕಿದ್ದರೂ ಮೊದಲ ಎರಡು ಹಂತದಲ್ಲಿ ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಕೈಗಾರಿಕೆಗಳು ನೆಲೆಯೂರಿಲ್ಲ. ಇನ್ನೂ ಅರ್ಧಕ್ಕೂ ಹೆಚ್ಚಿನ ಸಂಖ್ಯೆಯ ನಿವೇಶನಗಳು ಖಾಲಿ ಉಳಿದಿವೆ. ಜಪಾನ್ ಇಂಡಸ್ಟ್ರಿಯಲ್ ಟೌನ್‌ಶಿಪ್, ಮಷಿನ್ ಟೂಲ್ ಪಾರ್ಕ್ ಎಂದು ಪ್ರತ್ಯೇಕವಾಗಿ ವಿಂಗಡಿಸಿ ಅಭಿವೃದ್ಧಿ ಪಡಿಸಲಾಗಿದೆ. ಜಪಾನ್ ಟೌನ್‌ಶಿಪ್‌ನಲ್ಲಿ ಈವರೆಗೆ ಕೇವಲ ಒಂದು ಕೈಗಾರಿಕೆಯಷ್ಟೇ ಆರಂಭವಾಗಿದೆ. ದಶಕಗಳ ಹಿಂದೆಯೇ ತುಮಕೂರಿಗೆ ಹೊಂದಿಕೊಂಡಿರುವ ಅಂತರಸನಹಳ್ಳಿ, ಸತ್ಯಮಂಗಲ, ಹಿರೇಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಿದ್ದು, ಈವರೆಗೆ ಅಲ್ಲೂ ಪೂರ್ಣ ಪ್ರಮಾಣದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿಲ್ಲ.

ವಸಂತನರಸಾಪುರ ಕೈಗಾರಿಕಾ ಪ್ರದೇಶವು ಬೆಂಗಳೂರು– ಪುಣೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇದ್ದರೂ ಬೆರಳೆಣಿಕೆಯಷ್ಟು ದೊಡ್ಡ ಉದ್ಯಮಗಳು ಕಾಲಿಟ್ಟಿವೆ. ನೂರಾರು ಜನರಿಗೆ ಉದ್ಯೋಗ ನೀಡುವಂತಹ ಬೃಹತ್ ಕಾರ್ಖಾನೆಗಳು ಬಂದಿಲ್ಲ. 'ಇತ್ತ ಜಮೀನು ಕಳೆದುಕೊಂಡಿದ್ದೇವೆ, ಅತ್ತ ಕಾರ್ಖಾನೆಗಳು ಬಂದು ಉದ್ಯೋಗವೂ ಸಿಗುತ್ತಿಲ್ಲ, ನಮ್ಮಿಂದ ವಶಪಡಿಸಿಕೊಂಡ ಭೂಮಿಯೂ ಬಳಕೆಯಾಗದೆ ಖಾಲಿ ಬಿದ್ದಿದೆ. ಬದುಕು ಬೀದಿಗೆ ಬಂದಿದೆ. ಬರಡು ಪ್ರದೇಶವನ್ನು ವಶಪಡಿಸಿಕೊಂಡರೆ ನಮಗೂ ಏನೂ ಅನಿಸುವುದಿಲ್ಲ. ತೆಂಗು, ಅಡಿಕೆ ಬೆಳೆಯುವ, ಫಲವತ್ತಾದ ಜಮೀನು ಕಿತ್ತುಕೊಂಡಾಗ ಕಣ್ಣಲ್ಲಿ ರಕ್ತ ಬರುತ್ತದೆ' ಎನ್ನುತ್ತಾರೆ ರೈತರು.

ಇಂತಹುದೇ ಕಾರಣಗಳನ್ನು ಮುಂದಿಟ್ಟುಕೊಂಡು ಭೂ ಸ್ವಾಧೀನವನ್ನು ವಿರೋಧಿಸಿ ರಾಜ್ಯದ ಹಲವೆಡೆ ರೈತರು ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ.

ಭೂ ಸ್ವಾಧೀನ ವಿರೋಧಿಸಿ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣದಲ್ಲಿ ನಡೆಯುತ್ತಿರುವ ರೈತರ ಧರಣಿ 500 ದಿನಗಳನ್ನು ದಾಟಿದೆ. ಫಲವತ್ತಾದ ಭೂಮಿ ಕೊಡುವುದಿಲ್ಲ ಎಂದು ಹಟಕ್ಕೆ ಬಿದ್ದವರಂತೆ ಹೋರಾಟ ಮುನ್ನಡೆಸಿದ್ದಾರೆ. 1,777 ಎಕರೆ ಭೂ ಸ್ವಾಧೀನಕ್ಕೆ 2021ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಈಗಾಗಲೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಮೊದಲನೇ ಹಂತದಲ್ಲಿ ಕೆಐಎಡಿಬಿಗೆ ಭೂಮಿ ಕೊಟ್ಟು, ಸಮರ್ಪಕವಾಗಿ ಪರಿಹಾರ ಸಿಗದ ಕಹಿ ನೆನಪು ಇನ್ನೂ ಮಾಸಿಲ್ಲ. ಈಗ ಇರುವ ಜಮೀನು ಕಳೆದುಕೊಂಡರೆ ಮುಂದೇನು ಗತಿ ಎಂಬ ಆತಂಕ ಕಾಡುತ್ತಿದೆ. ಇದೇ ಕಾರಣಕ್ಕೆ ಹೋರಾಟಕ್ಕೆ ಮುಂದಡಿ ಇಟ್ಟಿದ್ದಾರೆ.

ರೈತರು ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದರೂ ಪೊಲೀಸ್ ಬಲ ಬಳಸಿಕೊಂಡು ಹೋರಾಟ ಹತ್ತಿಕ್ಕಲು ಸರ್ಕಾರ ಪ್ರಯತ್ನ ನಡೆಸುತ್ತಲೇ ಇದೆ. ಧರಣಿ ಸ್ಥಳದಲ್ಲಿ ಮಲಗಿದ್ದವರ ಮೇಲೆ ರಾತ್ರೋರಾತ್ರಿ ಪೊಲೀಸರು ನುಗ್ಗಿ ಮನಸ್ಸಿಗೆ ಬಂದಂತೆ ಥಳಿಸಿದ್ದಾರೆ. ಬೂಟು ಕಾಲಿನಿಂದ ಒದ್ದು, ಬಂದೂಕಿನ ಹಿಂಬದಿಯಿಂದ ತಿವಿದು, ಹಿಂಸಿಸಿ ಕ್ರೂರವಾಗಿ ನಡೆದುಕೊಂಡಿದ್ದಾರೆ. ನಡುರಾತ್ರಿ ನಡೆದ ಹಠಾತ್ ದಾಳಿಗೆ ರೈತರು ನಲುಗಿ ಹೋಗಿದ್ದಾರೆ. ಹಲವರ ಮೇಲೆ ಮೊಕದ್ದಮೆ ದಾಖಲಿಸಿ ಕೋರ್ಟ್‌ಗೆ ಅಲೆಯುವಂತೆ ಮಾಡಿದ್ದಾರೆ. ಹೋರಾಟ ನಿಲ್ಲಿಸುವಂತೆ ಇನ್ನಿಲ್ಲದ ಕಿರುಕುಳ ನೀಡಲಾಗುತ್ತಿದೆ ಎಂದು ಪೊಲೀಸ್ ದೌರ್ಜನ್ಯದಲ್ಲಿ ಕಣ್ಣಿಗೆ ಗಾಯವಾಗಿದ್ದ ಪೋಲನಹಳ್ಳಿ ಯುವ ರೈತ ಪ್ರಮೋದ್ ಹೇಳುತ್ತಾರೆ.

ಪೂರ್ವಿಕರ ಆಸ್ತಿ ಜೋಪಾನ ಮಾಡುತ್ತಿರುವ ವಯೋವೃದ್ಧ ನಲ್ಲಪನಹಳ್ಳಿ ನಂಜಣ್ಣ, ಈಗಷ್ಟೇ ಭೂಮಿ ದಕ್ಕಿಸಿಕೊಂಡಿರುವ ಪರಿಶಿಷ್ಟರ ಹೋರಾಟದ ಕತೆ ಬಿಚ್ಚಿಡುವ ಚನ್ನರಾಯಪಟ್ಟಣದ ಯುವ ರೈತ ಮೋಹನ್, ಹೋರಾಟ ನಡೆಸಲು ರಟ್ಟೆ ಬಲವಿದೆ ಎನ್ನುವ ರೈತ ಮಹಿಳೆ ಮಟಬಾರ್ಲು ಗ್ರಾಮದ ವೆಂಕಟಮ್ಮ ಅವರ ನುಡಿಯಲ್ಲಿ ಆಕ್ರೋಶವಿದೆ. ಭೂಮಿ ಕಳೆದುಕೊಳ್ಳುವ ಆತಂಕದ ನಡುವೆ ಅನ್ನದಾತರು ಎದೆಗುಂದಿಲ್ಲ ಎಂಬುದು ಅವರ ಮಾತುಗಳು ಧ್ವನಿಸುತ್ತವೆ. ರಾಜಕೀಯ ನೇತಾರರು, ನಟರು, ರೈತ ಸಂಘಟನೆಗಳ ಮುಖಂಡರು ಸ್ಥಳಕ್ಕೆ ಬಂದು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಆದರೆ ಆಳುವ ಪ್ರಭುಗಳ ಮನಸ್ಸು ಮಾತ್ರ ಮರುಗುತ್ತಿಲ್ಲ. ರೈತರ ಹೋರಾಟದ ಛಲ ತಗ್ಗಿಲ್ಲ.

ರಾಮನಗರ ಜಿಲ್ಲೆ ಬಿಡದಿ, ಹಾರೋಹಳ್ಳಿ ಕೈಗಾರಿಕಾ ಪ್ರದೇಶವು 5,170 ಎಕರೆಯಷ್ಟು ವಿಸ್ತಾರವಾಗಿದೆ. ಬಿಡದಿಯಲ್ಲಿ 417 ಕೈಗಾರಿಕಾ ನಿವೇಶನಗಳನ್ನು ಹಂಚಿದ್ದು, 204ರಲ್ಲಿ ಮಾತ್ರ ಕೈಗಾರಿಕೆಗಳು ಆರಂಭವಾಗಿವೆ. ಹಾರೋಹಳ್ಳಿಯಲ್ಲಿ ಇನ್ನೂ 715 ನಿವೇಶನಗಳು ಖಾಲಿ ಉಳಿದಿವೆ. ಉದ್ಯಮಿಗಳು ನಿವೇಶನ ಖರೀದಿಗೆ ತೋರಿಸುವ ಉತ್ಸಾಹವನ್ನು ಉದ್ಯಮ ಆರಂಭಕ್ಕೆ ತೋರುತ್ತಿಲ್ಲ ಎನ್ನುವುದು ನಿವೇಶನಗಳ ಹಂಚಿಕೆ ಮತ್ತು ಉದ್ಯಮಗಳು ಆರಂಭವಾದ ಅಂಕಿಅಂಶಗಳೇ ಸಾರಿಹೇಳುತ್ತಿವೆ.

> **ಕೆಐಎಡಿಬಿಯು ಕೈಗಾರಿಕೆಗಳ ಅಭಿವೃದ್ಧಿ ಹೆಸರಿನಲ್ಲಿ ರೈತರ ಜಮೀನು ಕಬಳಿಸಲು ಹುನ್ನಾರ ನಡೆಸಿರುವುದು ಸರಿಯಲ್ಲ. ಇದನ್ನು ರೈತರು ಹಾಗೂ ಭೂ ದೇವಿ ಮೇಲಿನ ಶೋಷಣೆ ಎನ್ನಬೇಕಾಗುತ್ತದೆ**
> **ಅ.ನ.ಯಲ್ಲಪ್ಪರೆಡ್ಡಿ,** ಪರಿಸರವಾದಿ

> **ಯಾದಗಿರಿ ಜಿಲ್ಲೆ ಕಡೇಚೂರು– ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ಜಮೀನು ಬಳಕೆಯಾಗುತ್ತಿಲ್ಲ. ಇರುವ ಉದ್ಯಮಗಳಲ್ಲಿ ಸ್ಥಳೀಯರಿಗೆ ಉದ್ಯೋಗವೂ ಸಿಕ್ಕಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಖಾನೆಗಳೂ ಬರುತ್ತಿಲ್ಲ**
> **ದಶರಥಮಂತ್ರಿ,** ರೈತ, ಶೆಟ್ಟಿಹಳ್ಳಿ, ಯಾದಗಿರಿ ಜಿಲ್ಲೆ

> **ಬಲವಂತವಾಗಿ ಜಮೀನು ಕಿತ್ತುಕೊಳ್ಳಲು ಬಿಡುವುದಿಲ್ಲ. ಹೋರಾಟ ಮುಂದುವರಿಯಲಿದೆ. ನಮ್ಮ ಜಮೀನು ಉಳಿಸಿಕೊಳ್ಳುತ್ತೇವೆ**
> **ಪ್ರಮೋದ್,** ಯುವ ರೈತ ಹೋರಾಟಗಾರ, ಚನ್ನರಾಯಪಟ್ಟಣ

> **ವಶಪಡಿಸಿಕೊಂಡು ಅಭಿವೃದ್ಧಿ ಪಡಿಸಿರುವ ಪ್ರದೇಶದಲ್ಲಿ ಕೈಗಾರಿಕೆಗಳು ಆರಂಭವಾಗುವಂತೆ ನೋಡಿಕೊಳ್ಳಬೇಕು. ಪೂರ್ಣ ಪ್ರಮಾಣದಲ್ಲಿ ಹಂಚಿಕೆಯಾಗಿ, ಉದ್ಯಮ ಆರಂಭವಾದ ನಂತರ ಹೊಸದಾಗಿ ಭೂ ಸ್ವಾಧೀನ ಮಾಡಬೇಕು.**
> **ಸತೀಶ್ ಮಲ್ಲಣ್ಣ, ಭೂ ಸಂತ್ರಸ್ತ,** ತುಮಕೂರು

> **ತುಮಕೂರು ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಮೂರು ಹಂತದಲ್ಲಿ ಅಭಿವೃದ್ಧಿಪಡಿಸಿರುವ ಜಾಗವನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಯಾವುದೂ ಖಾಲಿ ಉಳಿದಿಲ್ಲ. ಮುಂದಿನ ದಿನಗಳಲ್ಲಿ ಕೈಗಾರಿಕೆಗಳು ಆರಂಭವಾಗಲಿವೆ**
> **ಲಕ್ಷ್ಮೀಶ್,** ಕೆಐಎಡಿಬಿ ಅಭಿವೃದ್ಧಿ ವಿಭಾಗದ ಅಧಿಕಾರಿ.

ಬೆಳಗಾವಿಯಲ್ಲಿ ಭೂಮಿಯೇ ಸಿಗುತ್ತಿಲ್ಲ

ಒಂದು ಕಡೆ ವಶಪಡಿಸಿಕೊಂಡ ಭೂಮಿ ಬಳಕೆಯಾಗದೆ ಖಾಲಿ ಇದ್ದರೆ, ಮತ್ತೊಂದೆಡೆ ಬೆಳಗಾವಿ ಜಿಲ್ಲೆಯಲ್ಲಿ ಭೂಮಿಯೇ ಸಿಗದಾಗಿದೆ. ಕೈಗಾರಿಕೆಗಳ ಸ್ಥಾಪನೆಗೆ 14 ಸಾವಿರ ಎಕರೆಯಷ್ಟು ಜಾಗ ಅಗತ್ಯವಿದೆ. ದಶಕದಿಂದ ಭೂಮಿಗಾಗಿ ಹುಡುಕಾಟ ನಡೆಸಿದ್ದರೂ ಸೂಕ್ತ ಸ್ಥಳ ಸಿಗುತ್ತಿಲ್ಲ.

2024ರ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲೆಗೆ 'ಫೌಂಡ್ರಿ ಕ್ಲಸ್ಟರ್' ಘೋಷಣೆ ಮಾಡಿದ್ದು, ಈ ಯೋಜನೆಗೂ ಭೂಮಿ ಸಿಕ್ಕಿಲ್ಲ. ಸಾಕಷ್ಟು ಕಡೆಗಳಲ್ಲಿ ನೀರಾವರಿ, ಕೃಷಿ ಭೂಮಿ ಇದ್ದು, ಕೈಗಾರಿಕೆ ಸ್ಥಾಪನೆಗೆ ಜಾಗ ಗುರುತಿಸುವುದು ಕಷ್ಟಕರವಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

'ರಿಯಲ್ ಎಸ್ಟೇಟ್ ದಂಧೆ'

ಕೆಐಎಡಿಬಿಯು ರೈತರ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ವಶಪಡಿಸಿಕೊಂಡು, ಅಭಿವೃದ್ಧಿಪಡಿಸಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದೆ. ಸಾಕಷ್ಟು ಬೇಡಿಕೆ ಇರುವ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳು ಮತ್ತು ಮೈಸೂರು ಭಾಗದಲ್ಲಿ ಉದ್ಯಮ ಆರಂಭಿಸಲು ನಿವೇಶನ ಕೋರಿ ಅರ್ಜಿ ಸಲ್ಲಿಸಿದರೆ ಭೂಮಿಯೇ ಸಿಗುವುದಿಲ್ಲ ಎಂಬ ಆರೋಪ ಸಾಮಾನ್ಯವಾಗಿದೆ.

'ರಾಜಕಾರಣಿಗಳು, ಕೆಐಎಡಿಬಿ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಜಾಗ ಪಡೆದುಕೊಳ್ಳುತ್ತಾರೆ. ರಾಜಕಾರಣಿಗಳ ಹಿಂಬಾಲಕರು, ಬಲಾಢ್ಯರು, ಹಣವಂತರು, ರಿಯಲ್ ಎಸ್ಟೇಟ್ ಕುಳಗಳಿಗೆ ನಿವೇಶನ ಸುಲಭವಾಗಿ ಸಿಗುತ್ತದೆ. ಹಿಂದೆ ನಿವೇಶನ ಪಡೆದುಕೊಂಡ ನಂತರ 99 ವರ್ಷಗಳ ವರೆಗೆ (ಗುತ್ತಿಗೆ–ಮಾರಾಟ) ಮಾರಾಟ ಮಾಡುವಂತಿರಲಿಲ್ಲ. ಈಗ ಇದನ್ನು 10 ವರ್ಷಗಳಿಗೆ ಇಳಿಸಿದ್ದು, ಗುತ್ತಿಗೆ ಅವಧಿ ಮುಗಿದ ತಕ್ಷಣ ಕೆಐಎಡಿಬಿಯಿಂದ ಶುದ್ಧ ಕ್ರಯಪತ್ರ ಮಾಡಿಸಿಕೊಂಡು, ನಂತರ ದುಬಾರಿ ಬೆಲೆಗೆ ಮಾರಾಟ ಮಾಡುವ ದಂಧೆ ನಡೆದಿದೆ' ಎಂದು ಉದ್ಯಮಿಯೊಬ್ಬರು ಹೇಳುತ್ತಾರೆ.

ಜಾಗ ಪಡೆದುಕೊಂಡ ಮೇಲೆ ಕೈಗಾರಿಕೆ ಆರಂಭಿಸಲೇ ಬೇಕು ಎಂಬ ನಿಯಮ ಪಾಲಿಸುವ ನಾಟಕವೂ ನಡೆಯುತ್ತದೆ. ನಿವೇಶನದಲ್ಲಿ ಕಾಟಾಚಾರಕ್ಕೆ ಅಲ್ಪ ಬಂಡವಾಳ ತೊಡಗಿಸಿ, ಸಣ್ಣ ಉದ್ಯಮ ಆರಂಭಿಸುತ್ತಾರೆ. 10 ವರ್ಷ ನೆಪಮಾತ್ರಕ್ಕೆ ನಡೆಸುತ್ತಾರೆ. ಜಾಗದ ನೋಂದಣಿ ಪ್ರಕ್ರಿಯೆ ಮುಗಿದ ತಕ್ಷಣ ನಷ್ಟ ತೋರಿಸಿ ಘಟಕ ಮುಚ್ಚುತ್ತಾರೆ. ನಂತರ ಮಾರಾಟ ಮಾಡಿಕೊಳ್ಳುತ್ತಾರೆ ಎಂದು ತುಮಕೂರು ತಾಲ್ಲೂಕು ನೆಲಹಾಳ್ ಗ್ರಾಮದ ಸಿದ್ಧಲಿಂಗಯ್ಯ ತಿಳಿಸಿದರು.

ಮೂಲ ಸೌಕರ್ಯ: ಭೂಮಿಯನ್ನು ವಶಪಡಿಸಿಕೊಂಡು ಅಭಿವೃದ್ಧಿ ಪಡಿಸಿದರೂ ಸಮರ್ಪಕವಾಗಿ ಮೂಲಭೂತ ಸೌಕರ್ಯ ಕಲ್ಪಿಸುವುದಿಲ್ಲ. ರಸ್ತೆ, ವಿದ್ಯುತ್ ಸಂಪರ್ಕ ಬಿಟ್ಟರೆ ಬಹುತೇಕ ಕಡೆಗಳಲ್ಲಿ ನೀರು, ಒಳಚರಂಡಿ ಇತರೆ ಸೌಲಭ್ಯ ಇರುವುದಿಲ್ಲ. ದೇಶದ ಬೃಹತ್ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಲು ಹೊರಟಿರುವ ತುಮಕೂರಿನ ವಸಂತನರಸಾಪುರಕ್ಕೆ ಈವರೆಗೂ ನೀರಿನ ಮೂಲವೇ ಇಲ್ಲವಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಕಸಬಾ, ಬೆಳವಂಗಲ ಹೋಬಳಿ, ನೆಲಮಂಗಲ ತಾಲ್ಲೂಕಿನ ಕೊಡಿಗೆಹಳ್ಳಿ ಸುತ್ತಮುತ್ತ ತರಕಾರಿ, ದ್ರಾಕ್ಷಿ, ಹೂವು, ಬಾಳೆ, ರೇಷ್ಮೆ, ಮಾವು ಬೆಳೆಯುತ್ತಿದ್ದ ಭೂಮಿಯನ್ನು ರೈತರು ಕಳೆದುಕೊಂಡಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ ಕೊಂಡರೆಡ್ಡಿಪಲ್ಲಿ, ಹೊಸಹುಡ್ಯ ಗ್ರಾಮಗಳ ಬಳಿ ಜಮೀನು ವಶಕ್ಕೆ ಅಧಿಸೂಚನೆ ಹೊರಡಿಸಿದ್ದು, 684 ಎಕರೆ ಗುರುತಿಸಲಾಗಿದೆ.

ಕೋಲಾರ ಜಿಲ್ಲೆಯ ನರಸಾಪುರ, ವೇಮಗಲ್, ಮಾಲೂರಿನಲ್ಲಿ 3,450 ಎಕರೆ ಅಭಿವೃದ್ಧಿ ಪಡಿಸಲಾಗಿದೆ. ಇದರಲ್ಲಿ ಶೇ 50ರಷ್ಟು ಪ್ರದೇಶದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿಲ್ಲ. ಹೊಸದಾಗಿ 5,966 ಎಕರೆ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. ಈಗಾಗಲೇ 1,972 ಎಕರೆ ಪ್ರದೇಶವನ್ನು 539 ಘಟಕಗಳಿಗೆ ಮಂಜೂರು ಮಾಡಲಾಗಿದೆ. ಕೆಜಿಎಫ್ ತಾಲ್ಲೂಕಿನ ಬಿಇಎಂಎಲ್ ಪ್ರದೇಶದಲ್ಲಿ 668 ಎಕರೆಯನ್ನು ಕೆಐಎಡಿಬಿಗೆ ಕೊಡಲಾಗಿದೆ. ಮುಳುಬಾಗಿಲು ತಾಲ್ಲೂಕು ದೇವರಾಯನಸಮುದ್ರದಲ್ಲಿ 700 ಎಕರೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಶ್ರೀನಿವಾಸಪುರ ತಾಲ್ಲೂಕಿನ ಯದರೂರು ಗ್ರಾಮದಲ್ಲಿ 1,273 ಎಕರೆ, ಆನೇಕಲ್ ತಾಲ್ಲೂಕಿನ ಹಂದೇನಹಳ್ಳಿ, ಮೇಡಹಳ್ಳಿ ಗ್ರಾಮಗಳ 700 ಎಕರೆ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಜಮೀನು ನೀಡಲು ರೈತರು ನಿರಾಕರಿಸುತ್ತಿದ್ದಾರೆ.

ಮೈಸೂರು ಹಾಗೂ ಆ ಭಾಗದ ಜಿಲ್ಲೆಗಳಲ್ಲೂ ಕೆಐಎಡಿಬಿ ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಸಾಕಷ್ಟು ಜಾಗ ಇನ್ನೂ ಖಾಲಿ ಉಳಿದಿದೆ. ಮೈಸೂರು ಜಿಲ್ಲೆಯಲ್ಲಿ 16 ಕೈಗಾರಿಕಾ ಪ್ರದೇಶಗಳಿದ್ದು, 6,516 ಎಕರೆ ಭೂಮಿ ವಶಪಡಿಸಿಕೊಳ್ಳಲಾಗಿದೆ. ಈವರೆಗೆ 2,180 ಕೈಗಾರಿಕೆಗಳಿಗೆ 4,141 ಎಕರೆ ಭೂಮಿ ಹಂಚಿಕೆ ಮಾಡಿದ್ದು, ಅದರಲ್ಲಿ 1,409 ಘಟಕಗಳಷ್ಟೇ ಆರಂಭವಾಗಿವೆ. 771 ಕೈಗಾರಿಕೆಗಳು ಉತ್ಪಾದನೆಯನ್ನೇ ಆರಂಭಿಸಿಲ್ಲ. ಕೆಲವೆಡೆ ದಶಕಗಳಿಂದ ಜಮೀನು ಖಾಲಿ ಬಿದ್ದಿದ್ದು, ಆಶಯ ಈಡೇರಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ 8 ಕೈಗಾರಿಕಾ ಪ್ರದೇಶಗಳಿದ್ದು, 1,513 ಎಕರೆ ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ 806 ಎಕರೆಯಷ್ಟೇ ಹಂಚಿಕೆಯಾಗಿದೆ. ಹಾಸನ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ಭೂಮಿ ಖರೀದಿಸಿದ ಬಹುತೇಕರು ಪಾಳು ಬಿಟ್ಟಿದ್ದಾರೆ. ಈ ಭೂಮಿ ಹಿಂಪಡೆಯುವ ಕಾರ್ಯವೂ ನಡೆದಿಲ್ಲ. ಅಧಿಕಾರಿಗಳು ನೋಟಿಸ್ ನೀಡಿದರೂ ಪ್ರಯೋಜನವಾಗಿಲ್ಲ. ಶೇ 60ರಷ್ಟು ಭೂಮಿಯಲ್ಲಿ ಇನ್ನೂ ಕೈಗಾರಿಕೆ ಪ್ರಾರಂಭಿಸಿಲ್ಲ. ಮಂಗಳೂರಿನ ಎಂಆರ್‌ಪಿಎಲ್ ನಾಲ್ಕನೇ ಹಂತದ ವಿಸ್ತರಣೆಗೆ ಕುತ್ತೆತ್ತೂರು, ಪೆರ್ಮುದೆ, ತೆಂಕ ಎಕ್ಕಾರು, ಮೂಳೂರು, ಕಂದಾವರ ಬಳಿ 990 ಎಕರೆ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. 703 ಎಕರೆಗೆ ಇನ್ನೂ ಪರಿಹಾರ ನೀಡಿಲ್ಲ.

ಕಲ್ಯಾಣ ಕರ್ನಾಟಕ ಭಾಗದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಕೆಐಎಡಿಬಿ ವಶಕ್ಕೆ ಪಡೆದ 16,731 ಎಕರೆ ಪೈಕಿ 12,300 ಎಕರೆಗೂ ಅಧಿಕ ಜಾಗ ದಶಕ ಕಳೆದರೂ ಬಳಕೆಯೇ ಆಗಿಲ್ಲ. ಅದರಲ್ಲಿ 1,872 ಎಕರೆಗೆ ಪರಿಹಾರ ನೀಡಿಲ್ಲ. ಕುಡುತಿನಿ, ಹರಗಿನಡೋಣಿ, ಜಾನೇಕುಂಟೆ, ವೇಣಿವೀರಪುರ, ಕೊಳಗಲ್ಲು, ಯಾರಂಗಳಿಗಿ, ಸಿದ್ದಮ್ಮನಹಳ್ಳಿ ಗ್ರಾಮಗಳಲ್ಲಿ ಎನ್‌ಎಂಡಿಸಿ, ಆರ್ಸೆಲರ್ ಮಿತ್ತಲ್, ಬ್ರಹ್ಮಿಣಿ, ಉತ್ತಮ್ ಗಾಲ್ವ ಸೇರಿದಂತೆ ವಿವಿಧ ಕಂಪನಿಗಳಿಗಾಗಿ 12,500 ಎಕರೆ ಭೂ ಸ್ವಾಧೀನ ಮಾಡಲಾಗಿದೆ. ಸಂಡೂರು ಉಪಚುನಾವಣೆ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಹಾರದ ಭರವಸೆ ನೀಡಿದ್ದರೂ ಈವರೆಗೂ ಈಡೇರಿಲ್ಲ.

ಕುಡುತಿನಿಯಲ್ಲಿ ಅಭಿವೃದ್ಧಿಪಡಿಸಿರುವ 600 ಎಕರೆಯಲ್ಲಿ ಒಂದೂ ನಿವೇಶನ ಹಂಚಿಕೆ ಮಾಡಿಲ್ಲ. ಮತ್ತೊಂದೆಡೆ ವಶಕ್ಕೆ ಪಡೆದ ಭೂಮಿಯಲ್ಲಿ ಕೈಗಾರಿಕೆಗಳು ಆರಂಭವಾಗಿಲ್ಲ. ರೈತರು ಉಳುಮೆ ಮಾಡಲೂ ಆಗಿಲ್ಲ. ಹೀಗಾಗಿ ಸಾವಿರಾರು ಎಕರೆ ಭೂಮಿ ಬರಡಾಗಿ ಬಿದ್ದಿದೆ. ಉದ್ಯೋಗ ಸೃಷ್ಟಿ ಗಗನ ಕುಸುಮವಾಗಿದೆ. ಈ ಮಧ್ಯೆ ಕೆಲ ಕಂಪನಿಗಳು ಜಮೀನು ಮಾರಾಟ ಮಾಡಿಕೊಂಡಿವೆ.

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಭೂಮಿ ವಶಪಡಿಸಿಕೊಳ್ಳಲಾಗಿದೆ. ನಿವೇಶನ ಪಡೆದವರು ಕೈಗಾರಿಕೆ ಆರಂಭಿಸಿಲ್ಲ. ಉದ್ದೇಶ ಈಡೇರಿಲ್ಲ. ಧಾರವಾಡ ಸುತ್ತಮುತ್ತ 4,625 ಎಕರೆ ಪೈಕಿ 1,974 ಎಕರೆ ಜಾಗವನ್ನು 847 ಘಟಕಗಳಿಗೆ ಹಂಚಿಕೆ ಮಾಡಿದೆ. ಉಳಿದ ಪ್ರದೇಶ ಖಾಲಿ ಉಳಿದಿದೆ. ಹುಬ್ಬಳ್ಳಿ ಸುತ್ತಮುತ್ತ ಅಭಿವೃದ್ಧಿಪಡಿಸಿರುವ ಪ್ರದೇಶ ಬಹುತೇಕ ಬಳಕೆಯಾಗಿದೆ.

ಪಾಳುಬಿದ್ದ 2 ಸಾವಿರ ಎಕರೆ: ಉತ್ತರ ಕನ್ನಡ ಜಿಲ್ಲೆಯಲ್ಲಿ 1980 ಮತ್ತು 1990ರಲ್ಲಿ ವಶಕ್ಕೆ ಪಡೆದ 2 ಸಾವಿರ ಎಕರೆಯಷ್ಟು ಪ್ರದೇಶ ಇಂದಿಗೂ ಬಳಕೆಯಾಗದೆ ಪಾಳು ಬಿದ್ದಿದೆ. ಕುಮಟಾ ತಾಲ್ಲೂಕಿನ ಮಾದನಗೇರಿ ಸಮೀಪ ಉಷ್ಣ ವಿದ್ಯುತ್ ಉತ್ಪಾದನೆ ಯೋಜನೆಗೆ ವಿರೋಧ ವ್ಯಕ್ತವಾಗಿದ್ದರಿಂದ ಭೂಮಿ ಬಳಕೆಯಾಗಿಲ್ಲ. ಬಳಿಕ ಬಂದರು ನಿರ್ಮಾಣಕ್ಕೆ ಪ್ರಯತ್ನಿಸಿದರೂ ಕಾರ್ಯಗತಗೊಂಡಿಲ್ಲ.

ಮೂರು ವರ್ಷ ಸಮಯ: ಜಾಗ ಪಡೆದುಕೊಂಡ ಮೂರು ವರ್ಷಗಳಲ್ಲಿ ಕೈಗಾರಿಕೆ ಆರಂಭಿಸಬೇಕು. ಅದು ಸಾಧ್ಯವಾಗದಿದ್ದರೆ ಇನ್ನೂ ಎರಡು ವರ್ಷ ಹೆಚ್ಚುವರಿ ಸಮಯ ಪಡೆದುಕೊಳ್ಳಬಹುದು. ಐದು ವರ್ಷಗಳ ನಂತರವೂ ಕೈಗಾರಿಕೆ ಪ್ರಾರಂಭಿಸದಿದ್ದರೆ ನೋಟಿಸ್ ಕೊಟ್ಟು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎನ್ನುತ್ತಾರೆ ಕೆಐಎಡಿಬಿ ಅಭಿವೃದ್ಧಿ ವಿಭಾಗದ ಅಧಿಕಾರಿ ಲಕ್ಷ್ಮೀಶ್.

ಆದರೆ ಈ ರೀತಿಯ ಕಾನೂನು ಕ್ರಮವನ್ನು ಕೆಐಎಡಿಬಿಯು ಜರುಗಿಸಿದ ಉದಾಹರಣೆಗಳು ಕಡಿಮೆ ಎನ್ನುವ ಆರೋಪ ಸಾರ್ವತ್ರಿಕವಾಗಿದೆ. ನಿಗದಿತ ಅವಧಿಯಲ್ಲಿ ಕೈಗಾರಿಕೆ ಆರಂಭಿಸದಿದ್ದರೆ ನಿವೇಶನಗಳನ್ನು ವಾಪಸ್ ಪಡೆಯುವ ಕ್ರಮವನ್ನು ಸಂಸ್ಥೆ ಆರಂಭಿಸಿದರೆ ರಿಯಲ್ ಎಸ್ಟೇಟ್ ಸಂಸ್ಥೆ ಎನ್ನುವ ಆರೋಪಕ್ಕೆ ಉತ್ತರ ನೀಡಿದಂತಾಗುತ್ತದೆ.

ಪೂರಕ ಮಾಹಿತಿ: ಆಯಾ ಬ್ಯೂರೊ ಹಾಗೂ ಜಿಲ್ಲಾ ವರದಿಗಾರರಿಂದ
ಪರಿಕಲ್ಪನೆ: ಯತೀಶ್ ಕುಮಾರ್.ಜಿ.ಡಿ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 30-3-2000

● **ರಾಜ್ಯಸಭೆ ಚುನಾವಣೆ: ರಾಜ್ಯದ ಅಧಿಕೃತ ಅಭ್ಯರ್ಥಿಗಳಿಗೆ ವಿಜಯ**

ಬೆಂಗಳೂರು, ಮಾರ್ಚ್ 29– ತೀವ್ರ ಕುತೂಹಲ ಕೆರಳಿಸಿದ್ದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇಂದು ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಅಧಿಕೃತ ಅಭ್ಯರ್ಥಿಗಳು ಜಯಗಳಿಸಿದ್ದು, ಪರಾಭವಗೊಂಡ ಉದ್ಯಮಿ ವಿಜಯ್ ಮಲ್ಯ ಮುಖಭಂಗ ಎದುರಿಸಬೇಕಾಯಿತು. ಕಾಂಗ್ರೆಸ್‌ನ ಕೆ.ರೆಹಮಾನ್ ಖಾನ್, ಬಿಂಬಾರಾಯ್ಕರ್ ಹಾಗೂ ಕೆ.ಜಿ. ಕೃಷ್ಣಮೂರ್ತಿ ಹಾಗೂ ಬಿಜೆಪಿಯ ಎಂ. ರಾಜಶೇಖರಮೂರ್ತಿ ಅವರು ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾದರು.

50 ವರ್ಷಗಳ ಹಿಂದೆ

ಭಾನುವಾರ, 30-3-1975

● **ದಕ್ಷಿಣ ಮೂರ್ತಿಗಳ ಕೂಟ**

ಬೆಂಗಳೂರು: ದಕ್ಷಿಣ ಭಾರತದಲ್ಲಿ ಕಾಂಗ್ರೆಸ್ ವಿರೋಧಿಶಕ್ತಿಗಳನ್ನು ಕ್ರೋಢೀಕರಿಸಲು ಗಂಭೀರ ಪ್ರಯತ್ನದ ಅಂಕುರಾರ್ಪಣೆ ಈಚೆಗೆ ಬೆಂಗಳೂರಿನಲ್ಲಿ ಆಯಿತು. ದಕ್ಷಿಣದ ತ್ರಿಮೂರ್ತಿಗಳಾದ ಸಿದ್ದವನಹಳ್ಳಿ ನಿಜಲಿಂಗಪ್ಪ, ನೀಲಂ ಸಂಜೀವರೆಡ್ಡಿ ಮತ್ತು ಕಾಮರಾಜ್ ಮಾರ್ಚ್ 22ರಂದು ನಗರದಲ್ಲಿ ಸಭೆ ಸೇರಿ ಈ ಸಂಘಟನೆಯ ಕಾರ್ಯತಂತ್ರದ ಬಗ್ಗೆ ದೀರ್ಘ ವಿಚಾರ ವಿನಿಮಯ ನಡೆಸಿದರು.

ಏಪ್ರಿಲ್ ಕೊನೆಯ ವೇಳೆಗೆ ಈ ಮೂವರು ಮತ್ತೆ ಸಭೆ ಸೇರಲಿದ್ದಾರೆ. ಬಹುಮಟ್ಟಿಗೆ ಈ ಸಭೆ ಬೆಂಗಳೂರಿನಲ್ಲಿ ನಡೆಯುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮಾರ್ಚ್ 30, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಪ್ರತಿಪದ್ ಗಂ. 12-50 **ನಕ್ಷತ್ರ:** ರೇವತಿ ಗಂ. 16-35 **ಯೋಗ:** ಐಂದ್ರ ಗಂ. 17-54 **ಕರಣ:** ಬವ ಗಂ. 12-50 ಮೀನ ಮಾಸದ 16 ನೇ ದಿನ, **ಮಳೆನಕ್ಷತ್ರ:** ಉತ್ತರಾಭಾದ್ರ 4.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-31 **ಸೂರ್ಯಾಸ್ತ:** 06-39
ಮುಸ್ಲಿಂ ದಿನಾಂಕ: 29 ರಂಜಾನ್
ದಿನ ವಿಶೇಷ: ಚಾಂದ್ರಮಾನ ಯುಗಾದಿ, ವಸಂತ ನವರಾತ್ರಿ ಆರಂಭ, ಅದೃಷ್ಟ ಸಂಖ್ಯೆ: 1, 4

ಮೇಷ: ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯವಾಗಿದೆ. ಹೊಸ ಸ್ಥಾನ ಅಥವಾ ಹೊಸ ಮನೆಗೆ ಹೋಗಬಹುದು. ಈ ಸಂಜೆ ಪ್ರೀತಿ ಪಾತ್ರರೊಡನೆ ಸಮಯ ಕಳೆಯುವಿರಿ. ಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ.

ವೃಷಭ: ಇನ್ನೊಬ್ಬರಿಗೆ ಗೌರವ ಕೊಡುವುದರಿಂದ ನಿಮ್ಮ ಗೌರವವು ಹೆಚ್ಚುತ್ತದೆ ಎಂಬುವುದು ಸದಾಕಾಲ ನೆನಪಿರಲಿ. ಇಂದು ನಿಮ್ಮ ಮಾನಸಿಕ ಸ್ಥೈರ್ಯ ಸದೃಢವಾಗುವುದು. ಮಗಳಿಂದ ಸಂತೋಷದ ಸುದ್ದಿ ಕೇಳಿ ಬರಲಿದೆ.

ಮಿಥುನ: ಮರದ ಮತ್ತು ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ ಪ್ರಾಪ್ತಿಯಾಗುತ್ತದೆ. ಕೌಟುಂಬಿಕವಾಗಿ ಒದಗುವ ಪರಿಸ್ಥಿತಿಗೆ ಹೊಂದಿಕೊಂಡು ನಡೆಯಬೇಕಾಗುವುದು. ಚಿನ್ನಾಭರಣಗಳಿಗಾಗಿ ಹಣ ಖರ್ಚು ಮಾಡುವಿರಿ.

ಕರ್ಕಾಟಕ: ದಿನಸಿ ವ್ಯಾಪಾರಸ್ಥರಿಗೆ ಹಣಕಾಸಿನ ಪರಿಸ್ಥಿತಿ ಉತ್ತಮವಾಗುತ್ತದೆ. ಮೊಮ್ಮಕ್ಕಳ ಜೊತೆಗಿನ ಓಡಾಟದಿಂದ ಆಧಿ-ವ್ಯಾಧಿಯಂತಹ ಎಲ್ಲ ನೋವುಗಳು ಮರೆಯಾಗುವುದು. ಶ್ರೀ ಕೃಷ್ಣನನ್ನು ಸ್ಮರಿಸುವುದರಿಂದ ಸತ್ಫಲ ಸಿಗಲಿದೆ.

ಸಿಂಹ: ಮಕ್ಕಳಿಗೆ ಶೀತ ಕಫದಂತಹ ಅನಾರೋಗ್ಯ ಎದುರಾಗಬಹುದು, ಜಾಗ್ರತೆವಹಿಸಿ. ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಎಲ್ಲಾ ಸಮಸ್ಯಗಳಿಗೂ ಸುಲಭವಾಗಿ ಪರಿಹಾರ ಸಿಗಲಿದೆ.

ಕನ್ಯಾ: ನಿಮ್ಮ ಸ್ಪರ್ಧಾ ಮನೋಭಾವದಿಂದ ಉನ್ನತ ಸ್ಥಾನಕ್ಕೆ ಏರಬಹುದು. ಈ ದಿನ ಮಕ್ಕಳಿಂದ ನೆಮ್ಮದಿ ಅಥವಾ ಸಮಾಧಾನದ ಮಾತುಗಳನ್ನು ಕೇಳುವಿರಿ. ನಿಮ್ಮ ಮನದ ಮಾತುಗಳಿಗೆ ಬೆಲೆ ಕೊಡುವುದು ಉತ್ತಮ.

ತುಲಾ: ಸಂತಾನದ ವಿಚಾರದಲ್ಲಿ ಹೇಳಿಕೊಂಡಿರುವ ಹರಕೆ ಬಗ್ಗೆ ನೆನಪಿರಲಿ. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿರುತ್ತೀರಿ. ಕೌಟುಂಬಿಕವಾಗಿ ವಾದ-ವಿವಾದಗಳನ್ನು ಮಾಡಿದಲ್ಲಿ, ಸಮಸ್ಯೆಗೆ ನಾಂದಿ ಹಾಡಿದಂತಾಗುವುದು.

ವೃಶ್ಚಿಕ: ಉದ್ಯೋಗದಲ್ಲಿ ಉನ್ನತ ಪದವಿ, ವರ್ಗಾವಣೆ ದೊರೆಯುವ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆಗಳಿವೆ. ವಿದೇಶದಿಂದ ಶುಭ ಸಮಾಚಾರ ಕೇಳುವಿರಿ. ಚಿನ್ನಾಭರಣ ಖರೀದಿಗೆ ಈ ದಿನ ಪ್ರಶಸ್ತವಾಗಿರುವುದು.

ಧನು: ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ರಾಜಕೀಯ ವರ್ಗದಲ್ಲಿ ಅಥವಾ ಸಂಘ-ಸಂಸ್ಥೆಗಳ ಹೊಸ ಹುದ್ದೆಗೆ ಅಭ್ಯರ್ಥಿಯಾಗುವ ಆಕಾಂಕ್ಷೆ ಮುಗಿಲೇರುವುದು.

ಮಕರ: ಸಾಹಿತಿ ಬರಹಗಾರರಿಗೆ ಹಾಗೂ ಚಲನ ಚಿತ್ರರಂಗದವರಿಗೆ ಹಣ ಮತ್ತು ಖ್ಯಾತಿ ದೊರೆಯುವುದು. ನಿಮ್ಮ ಪ್ರಾಮಾಣಿಕತನದಿಂದಾಗಿ ಒಳ್ಳೆಯ ಕೆಲಸವೊಂದು ಅಯಾಚಿತವಾಗಿ ಸಿಗುತ್ತದೆ. ನೀಲಿ ಬಣ್ಣ ಶುಭಪ್ರದ.

ಕುಂಭ: ನಿಮ್ಮ ಯೋಚನೆಗೆ ಪೂರಕವಾಗಿ ಧ್ವನಿ ಎತ್ತುವ ಮತ್ತು ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದಿಸುವಿರಿ. ಮನೆಯವರ ಒಳಿತಿಗಾಗಿ ಹೊಸ ಮಾರ್ಗ ಕಂಡುಕೊಳ್ಳಲು ಇದು ಸೂಕ್ತ ಸಮಯವಾಗಿರುತ್ತದೆ.

ಮೀನ: ವೈವಾಹಿಕ ಜೀವನದ ಬಗೆಗಿನ ಹೊಸ ಆಲೋಚನೆಗಳು ಕಾಡುವುದು. ದೇವರ ಸೇವೆಯ ವಿಚಾರದಲ್ಲಿ ಸ್ವಾರ್ಥ ಬುದ್ಧಿಯನ್ನು ತೋರಿಸಬೇಡಿ. ಮಗನ ವಿದ್ಯಾಭ್ಯಾಸಕ್ಕೆ ಒತ್ತಡ ಹೇರುವುದು ಅನಿವಾರ್ಯವಾಗುತ್ತದೆ.

ಪದಬಂಧ 5997

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತೀಕ್ಷ್ಣವಾಗಿ ಮುಂದುವರೆಯುವವನು (4)
3.ಸಂಪೂರ್ಣವಾಗಿ ಪಕ್ವವಾಗಿರುವುದು (4)
5.ಹೆಣ್ಣು ದುಂಬಿಯಿದು (4)
7.ಜಲದೊಳಗಿರುವ ಕ್ಲಿಷ್ಟತೆ (3)
8.ಪಾಕಕ್ಕೆ ಸಿಕ್ಕ ಬಹುಮಾನ (5)
11.ದಕ್ಷಿಣದ ವಿರುದ್ಧ ದಿಕ್ಕು (3)
12.ಕತ್ತು ಕೊನೆಗಿಟ್ಟು ಹೂಡಿದ ಸಂಚು ಉಲ್ಟಾ ಆಗಿದೆ (4)
15.ಕೆಟ್ಟ ಹವ್ಯಾಸ (4)
16.ಬಿಡುವು ಹೀಗೆ ಬಂದಿದೆ (4)

ಮೇಲಿಂದ ಕೆಳಕ್ಕೆ
1.ಅಂತ್ಯ ಕಾಲವಿದು (4)
2. ಹಾಡುಗಾರ ಇಲ್ಲಿದ್ದಾನೆ (3)
3.ಬಟ್ಟೆಯ ಅಗಲದ ಒಂದು ಪ್ರಮಾಣ (2)
4.ತಾವರೆಯನ್ನು ಹೀಗೂ ಹೇಳುವರು (3)
6.ದುರಸ್ತಿಯನ್ನು ಹೀಗೆನ್ನಿ (3)
7.ಜನರ ಬಳಿಯಿರುವ ತಂದೆ (3)
8.ಈತ ತಿಳುವಳಿಕೆಯಿಲ್ಲದವನು (3)
9.ಷಹರದವನು ಹಾಕಿದ ಕರಾರು (3)
10.ಹಿಂದಿಯವನ ಪರಿಶ್ರಮ (4)
11.ಉಮೇದುವಾರನ ಹುರುಪು (3)
13.ಕರುವಿನಲ್ಲಿರುವ ತೆನೆ (3)
14.ಕೃಷ್ಣನ ಸೋದರ ಮಾವ (2)



5996ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲ್ಲಿ 4.ನರ್ತನ
5.ಜಲಚರ 6.ನಾಮಧೇಯ
7.ಕಸ 9.ಲೀನ
13.ಚಾರಿತ್ರಿಕ 14.ಸರದಾರ
15.ರಭಸ 16.ಜಾಣ

ಮೇಲಿಂದ ಕೆಳಕ್ಕೆ:
1.ವನರಾಜ 2.ಜನನಾಯಕ
3.ವಂಚನೆ 5.ಜಯಶಾಲಿ
8.ಸದಾಚಾರ 10.ನವೀಕರಣ
11.ಅವಸರ 12.ಮರಳು

ಸುಡೊಕು 6382

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6381 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಠದ ಬಾವಿಗೆ ಕ್ರಿಮಿನಾಶಕ: ಇಬ್ಬರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಖಜೂರಿ ಗ್ರಾಮದ ಕೋರಣೇಶ್ವರ ವಿರಕ್ತಮಠದ ಬಾವಿಗೆ ವಿಷಕಾರಿ ಕ್ರಿಮಿನಾಶಕ ಔಷಧ ಎಸೆದ ಆರೋಪದಡಿ ಮಠದಿಂದ ವಿಮುಕ್ತಗೊಂಡಿರುವ ಸ್ವಾಮೀಜಿ, ಒಬ್ಬ ಮಹಿಳೆ ವಿರುದ್ಧ ಆಳಂದ ಠಾಣೆಯಲ್ಲಿ ಶುಕ್ರವಾರ ಪ್ರಕರಣ ದಾಖಲಾಗಿದೆ.

ಮಠದಿಂದ ವಿಮುಕ್ತಗೊಂಡಿರುವ ಮುರುಘೇಂದ್ರ ಸ್ವಾಮೀಜಿ (ಚಂದ್ರಶೇಖರಯ್ಯ ಅಸೂಟಿ), ಅನಿತಾ ಗಣಪತಿ ವಿರುದ್ಧ ಮಠದ ಟ್ರಸ್ಟ್ ಸಮಿತಿ ಸದಸ್ಯ ಹಣಮಂತ ಸಾವಳೇಶ್ವರ ನೇತೃತ್ವದಲ್ಲಿ ದೂರು ನೀಡಲಾಗಿತ್ತು. ವಿಮುಕ್ತಗೊಂಡ ನಂತರವೂ ಸ್ವಾಮೀಜಿ ಮಠದ ಹಿಂಬದಿಯ ತಗಡಿನ ಶೆಡ್‌ನಲ್ಲಿ ಉಳಿದುಕೊಂಡಿದ್ದಾರೆ.

‘ಅಸೂಟಿ ಅವರು ಮಠಕ್ಕೆ ಕೆಟ್ಟ ಹೆಸರು ತರಲು ಈ ಕೃತ್ಯ ಮಾಡಿದ್ದಾರೆ. ಮಠದ ಶಾಲೆಯಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಮಧ್ಯಾಹ್ನದ ಊಟ, ಕುಡಿಯುವ ನೀರಿಗಾಗಿ ಅದೇ ಬಾವಿಯ ನೀರು ಬಳಕೆ ಮಾಡಲಾಗುತ್ತದೆ. ಮಕ್ಕಳ ಆರೋಗ್ಯದಲ್ಲಿ ಏರುಪೇರು ಉಂಟುಮಾಡಿ ಮಠಕ್ಕೆ ಕೆಟ್ಟ ಹೆಸರು ತರುವ ಹುನ್ನಾರ ಇದೆ. ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಒತ್ತಾಯಿಸಿದ್ದರು.

ಎಎಬಿ ಠರಾವು: ಹೈಕೋರ್ಟ್ ನ್ಯಾ. ನಟರಾಜನ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘ (ಎಎಬಿ) ಇತ್ತೀಚೆಗೆ ಕೈಗೊಂಡಿರುವ ಸರ್ವ ಸದಸ್ಯರ ವಿಶೇಷ ತುರ್ತು ಸಭೆಯ ಠರಾವಿನಲ್ಲಿ, ‘ಪಾರ್ಟ್ ಹರ್ಡ್’ (ಭಾಗಶಃ ಆಲಿಕೆ) ಪ್ರಕರಣಗಳ ಕುರಿತಂತೆ ತಮ್ಮ ಹೆಸರು ಉಲ್ಲೇಖ ಮಾಡಿರುವುದಕ್ಕೆ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಕೆ. ನಟರಾಜನ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ವಕೀಲರಿಗೆ ಯಾವುದಾದರೂ ಅಹವಾಲು ಇದ್ದಿದ್ದರೆ ಅವರು ನೇರವಾಗಿ ನನ್ನ ಮುಂದೆ ವಿಚಾರ ಪ್ರಸ್ತಾಪ ಮಾಡಬಹುದಿತ್ತು’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಈ ಕುರಿತಂತೆ ನ್ಯಾಯಾಲಯದ ಮುಕ್ತ ಕಲಾಪದ ವೇಳೆ ಎಎಬಿ ನಿರ್ಣಯದ ಬಗ್ಗೆ ಪ್ರಸ್ತಾಪಿಸಿರುವ ಅವರು, ‘ಠರಾವನ್ನು ಸಾಮಾಜಿಕ ಮಾಧ್ಯಮದಲ್ಲಿ ಗಮನಿಸಿದೆ. ದೆಹಲಿ ನ್ಯಾಯಮೂರ್ತಿಯೊಬ್ಬರ ಮನೆಯಲ್ಲಿ ಅಪಾರ ಮೊತ್ತದ ನಗದು ದೊರೆತ ಪ್ರಕರಣದ ಜೊತೆಗೆ ನನ್ನ ಹೆಸರನ್ನೂ ಉಲ್ಲೇಖ ಮಾಡಲಾಗಿದೆ. ಇದರ ಅಗತ್ಯವೇನಿತ್ತು? ಇದು ನ್ಯಾಯಾಲಯದ ವರ್ಚಸ್ಸಿಗೆ ಹಾನಿಯುಂಟು ಮಾಡುವುದಿಲ್ಲವೇ’ ಎಂದು ಅವರು ಪ್ರಶ್ನಿಸಿದರು.

‘ನಾನು ಇನ್ನೂ ಒಂದು ತಿಂಗಳ ಕಾಲ ಕಲಬುರಗಿ ಪೀಠದಲ್ಲೇ ಕಾರ್ಯ ನಿರ್ವಹಿಸಬೇಕಿದೆ. ಏತನ್ಮಧ್ಯೆ, ಬೇಸಿಗೆ ರಜೆ ಬರುವ ಕಾರಣ ಭಾಗಶಃ ವಿಚಾರಣೆ ನಡೆಸಿರುವ ಪ್ರಕರಣಗಳಿಗೆ ಸಮಸ್ಯೆಯಾಗುತ್ತದೆ. ಹೀಗಾಗಿ, ಸಕಾರಣಗಳಿಂದ ನನ್ನ ಮುಂದೆ ಭಾಗಶಃ ವಿಚಾರಣೆಗೆ ಒಳಪಟ್ಟಿರುವ ಪ್ರಕರಣಗಳ ವಿಚಾರಣೆಯನ್ನು ಮುಂದುವರಿಸಲು ಆಗದು. ಅವುಗಳನ್ನು ನನ್ನಿಂದ ಬಿಡುಗಡೆ ಮಾಡುವುದೇ ಸೂಕ್ತ’ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

‘ಭಾಗಶಃ ವಿಚಾರಣೆ ಆಲಿಸಿರುವ ಪ್ರಕರಣಗಳನ್ನು ನಾನೇ ವಿಚಾರಣೆ ನಡೆಸಬೇಕು ಎಂದು ವಕೀಲರು ಬಯಸಿದರೂ ಎಎಬಿ ಠರಾವು ಪಾಸು ಮಾಡಿರುವ ಹಿನ್ನೆಲೆಯಲ್ಲಿ ನನಗೆ ಆ ಪ್ರಕರಣಗಳ ವಿಚಾರಣೆ ನಡೆಸುವ ಇಚ್ಛೆ ಇಲ್ಲ. ಯಾವುದೇ ವಕೀಲರಿಗೆ ಸಮಸ್ಯೆ ಇದ್ದರೆ ಅವರು ಲಿಖಿತವಾಗಿ ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಮಾಡಿ, ಆ ಪ್ರಕರಣವನ್ನು ಪುನಃ ನನ್ನ ಮುಂದೆ ಪಟ್ಟಿ ಮಾಡಲು ಕೋರಬಹುದು’ ಎಂದು ಅವರು ಸಲಹೆ ನೀಡಿದ್ದಾರೆ.

‘ಪ್ರಕರಣವೊಂದರಲ್ಲಿ ಎಎಬಿ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ ಅವರ ತಂದೆ ಪದಾಂಕಿತ ಹಿರಿಯ ವಕೀಲ ಕೆ.ಎನ್. ಸುಬ್ಬಾರೆಡ್ಡಿ ಭಾಗಿಯಾಗಿದ್ದ ಪ್ರಕರಣದಲ್ಲಿ ಭಾಗಶಃ ವಿಚಾರಣೆ ನಡೆಸಿರುವುದನ್ನೂ ಪಟ್ಟಿಯಿಂದ ಬಿಡುಗಡೆ ಮಾಡಲಾಗಿದೆ’ ಎಂದೂ ಅವರು ಈ ಕುರಿತಂತೆ ಹೊರಡಿಸಿರುವ ಆದೇಶದಲ್ಲಿ ತಿಳಿಸಿದರು.

ನಕ್ಸಲ್ ಕಾರ್ಯಾಚರಣೆ ಸಿಬ್ಬಂದಿ ಸೇರಿ 219 ಪೊಲೀಸರಿಗೆ ಸಿ.ಎಂ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ 219 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

ರಾಜ್ಯದ ವಿವಿಧ ಘಟಕಗಳಲ್ಲಿ ಕೆಲಸ ಮಾಡುತ್ತಿರುವ 197 ಪೊಲೀಸ್ ಅಧಿಕಾರಿ, ಸಿಬ್ಬಂದಿಯನ್ನು ಮುಖ್ಯಮಂತ್ರಿ ಪದಕಕ್ಕೆ ಆಯ್ಕೆ ಮಾಡಲಾಗಿದೆ.

ಅಲ್ಲದೇ ನಕ್ಸಲ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ 22 ಮಂದಿಯ ತಂಡವನ್ನೂ ಈ ಪದಕಕ್ಕೆ ಆಯ್ಕೆ ಮಾಡಲಾಗಿದೆ.

ರಾಜ್ಯದ ಹಾಗೂ ನೆರೆ ರಾಜ್ಯದ ನಕ್ಸಲರು ಶರಣಾಗಿ ಮುಖ್ಯವಾಹಿನಿಗೆ ಬರುವಲ್ಲಿ ರಾಜ್ಯ ಗುಪ್ತಚರ ಘಟಕ ಹಾಗೂ ನಕ್ಸಲ್ ನಿಗ್ರಹ ಪಡೆಯ ಅಧಿಕಾರಿ, ಸಿಬ್ಬಂದಿಯ ಪಾತ್ರ ಗಮನಾರ್ಹ ವಾಗಿತ್ತು. ವಿಶೇಷ ಕಾರ್ಯಾಚರಣೆಯಲ್ಲಿ ಪೊಲೀಸರು ಪಾಲ್ಗೊಂಡು ಯಶಸ್ವಿಗೊಳಿಸಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಮನವಿ

ಬೆಂಗಳೂರು: 'ರಾಜ್ಯದಲ್ಲಿರುವ ಎಲ್ಲ ಕೋರ್ಟ್ ಹಾಲ್‌ಗಳಲ್ಲಿ ಅಂಬೇಡ್ಕರ್ ಜಯಂತಿ (ಏಪ್ರಿಲ್ 14) ಒಳಗಾಗಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಬೇಕು’ ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಆಗ್ರಹಿಸಿದೆ.

‘ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರ ಮನವಿಯಂತೆ, ಕಾನೂನು ಸಚಿವ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ, ಎಲ್ಲ ಕೋರ್ಟ್ ಹಾಲ್‌ಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಆದೇಶ ಹೊರಡಿಸುವಂತೆ ಹೈಕೋರ್ಟ್‌ಗೆ ಕಾನೂನು ಇಲಾಖೆಯು ಈಗಾಗಲೇ ಪ್ರಸ್ತಾವ ಸಲ್ಲಿಸಿದೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು’ ಎಂದು ವೇದಿಕೆಯ ಅಧ್ಯಕ್ಷ ಅನಂತರಾಯಪ್ಪ ಮನವಿ ಮಾಡಿದ್ದಾರೆ.

‘ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಂಬೇಡ್ಕರ್ ಅವರ ಮಾದರಿ ಭಾವಚಿತ್ರ ಲಭ್ಯವಿದ್ದು, ನ್ಯಾಯಾಲಯಗಳ ಅವಶ್ಯಕತೆಗೆ ಅನುಸಾರವಾಗಿ ಪೂರೈಕೆ ಮಾಡಲಾಗುವುದು. ಅಲ್ಲದೆ, ಅದರ ವೆಚ್ಚವನ್ನು ಭರಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಅವರು ಕಾನೂನು ಇಲಾಖೆಗೆ ಪತ್ರ ಕೂಡಾ ಬರೆದಿದ್ದಾರೆ. ಹೀಗಾಗಿ, ಭಾವಚಿತ್ರ ಅಳವಡಿಸಲು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು’ ಎಂದೂ ಅವರು ಒತ್ತಾಯಿಸಿದ್ದಾರೆ.

ಸುಧಾ ಮಯೂರ ಓದಿರಿ

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
ಅಧಿಸೂಚನೆ ಸಂ:ಕೆಎಮ್‌ಸಿಆರ್‌ಐ/ಪೂವಿ(4)/39/2024-25 ದಿನಾಂಕ:25.03.2025

ಕೆ.ಎಮ್.ಸಿ.ಆರ್.ಐ. ಸಂಸ್ಥೆಯ ಹಳೆಯ ಕ್ಯಾಥಲ್ಯಾಬ ಮಶಿನನ್ನು ವಿಲೇವಾರಿ ಮಾಡುವ ಇ-ಟೆಂಡರ ಪ್ರಕಟಣೆ

ಕರ್ನಾಟಕ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಕಾರ್ಡಿಯಾಲಜಿ ವಿಭಾಗದಲ್ಲಿರುವ ಕ್ಯಾಥಲ್ಯಾಬ ಮಶಿನನ್ನು ಮಾರಾಟಕ್ಕಾಗಿ ಈ ಟೆಂಡರ ಕರೆಯಲಾಗಿದೆ. ಟೆಂಡರ ಷರತ್ತುಗಳು ಹಾಗೂ ವಿವರಗಳನ್ನು ವೆಬ್‌ಸೈಟ್ http://kppp.karnataka.gov.in/ ಮುಖಾಂತರ ಪಡೆದುಕೊಳ್ಳಬಹುದು.

ಸಹಿ/- (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)
ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ ತಾಲೂಕಾ ಆಸ್ಪತ್ರೆ ನರಗುಂದ ತಾ॥ ನರಗುಂದ, ಜಿ ॥ ಗದಗ
e-mail : amotlhnrd@gmail.com
ಕ್ರ.ಸಂ: ತಾ.ಆ.ನ/ಸಿ.ಆರ್/ಹೊ.ಗು/ಟೆಂಡರ್/502/2024-25 ದಿನಾಂಕ : 29-03-2025

ಟೆಂಡರ್ ಪ್ರಕಟಣೆ

2025-26 ನೇ ಸಾಲಿಗಾಗಿ ತಾಲೂಕಾ ಆಸ್ಪತ್ರೆ ನರಗುಂದ ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಗ್ರೂಪ್ “ಡಿ” ಮತ್ತು ನಾನ್ ಕ್ಲಿನಿಕಲ್ ವೃಂದದ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No- DHFWS/2024-25/SE1413 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

ಸಹಿ/- ಆಡಳಿತ ವೈದ್ಯಾಧಿಕಾರಿಗಳು ತಾಲೂಕ ಆಸ್ಪತ್ರೆ ನರಗುಂದ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/730/2024-25

Karnataka State Audit and Accounts Department
Office of the Principal Director, 3rd floor, `A' Block, TTMC Building, K.H. Road, Shanthinagara, Bengaluru-560 027. Phone No:- 080- 22214817 Fax No:- 080- 22216500, E-mail: 1. controllerstateaccounts@yahoo.com 2. controllerksaad@gmail.com

No: Ra.Le.Pa. 05 Pra.ho.va 2024-25/2091 Date:28.03.2025

TENDER NOTIFICATION

Tenders are invited through e-Procurement only from the Registered Agencies, for providing Seven (07) vehicles to this Department, hired on annual rate contract basis.

1	EMD Amount	33,600/-
2	Tender Publishing Date	26.03.2025
3	Last Date & Time for submission of Bid	16.04.2025 (Upto 4.00 pm)
4	Date & Time for opening of Technical Bid Commercial Bid	17.04.2025 at 4.00pm 21.04.2025 at 4.00pm

Further details website https://kppp.karnataka.gov.in

Sd/- Deputy Director, Karnataka State Audit & Accounts Department, Bangalore.
DIPR/CP/5980/SHIRDISAI/2024-25

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಕೊಳ್ಳೆಗಾಲ/2024-25 ದಿನಾಂಕ: 29-03-2025

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಮಾರುಕಟ್ಟೆ ಜಂಟಿ ಸಹಭಾಗಿತ್ವದಡಿಯಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ EWS ಮತ್ತು LIG ವರ್ಗದ ನಿವೇಶನಗಳನ್ನು ಹಂಚಿಕೆ ಮಾಡಲು ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು ಪಾವತಿಸಿ ಅರ್ಜಿ ಸಲ್ಲಿಸಲು, ಕೊನೆಯ ದಿನಾಂಕ: 29-03-2025 ರಂದು ನಿಗಧಿಪಡಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 07-04-2025 ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ ದಿನಾಂಕ:07-03-2025ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/- ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/5985/Zen/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ
ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ
ಸಂಖ್ಯೆ: ಕಕರಸಾ/ಕಾನಿಅ/ಡಿಬಿ/ಟಿ/ 1151 /2024-25 ದಿನಾಂಕ: 24/03/2025

ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ: 30/2024-25

Through GOK e-procurement platform WWW.kppp.karnataka.gov.in

1) ಕಾಮಗಾರಿ ವಿವರ: ಬೀದರ ವಿಭಾಗದ ಕೋಲಾರ್ ಕೈಗಾರಿಕಾ ಪ್ರದೇಶದಲ್ಲಿರುವ ಪ್ಲಾಟ್ ನಂ 135 (ಎ) ಖಾಲಿ ನಿವೇಶನದಲ್ಲಿ ವಿಭಾಗೀಯ ಕಾರ್ಯಾಗಾರ ನಿರ್ಮಿಸುವ ಕಾಮಗಾರಿ, 2) ಲೆಕ್ಕ ಶೀರ್ಷಿಕೆ: ಬಂಡವಾಳ ಅನುದಾನ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ ರೂ. 970.00 ಲಕ್ಷ, ಗರಿಷ್ಠ ರೂ. 970.00 ಲಕ್ಷ, 4) ಗುತ್ತಿಗೆದಾರರ ಅರ್ಹತೆ: ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ: 23-04-2025 ಸಾಯಂಕಾಲ 5:00 ಗಂಟೆಯವರೆಗೆ, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ : ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 28-04-2025 ಸಾಯಂಕಾಲ 17.30 ಗಂಟೆಯವರೆಗೆ, 8) ಟೆಂಡರ್ ಬಿಡ್ ತೆರೆಯುವ ದಿನಾಂಕ: 02-05-2025 ಮುಂಜಾನೆ 11:00 ಗಂಟೆಯವರೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033 / 08472-220663, 10) ಅಂತರಜಾಲ ತಾಣದ ವಿಳಾಸ: ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ WWW.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1167/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಹೊಸಪೇಟೆ ವಿಜಯನಗರ ಜಿಲ್ಲೆ.
ಸಂ:ಟೆಂಡರ್:ಪ್ರಕಟಣೆ:2024-25/4671 ದಿ:-25.03.2025

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ ರದ್ದುಗೊಳಿಸುವ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಅಲ್ಪಾವಧಿ ಪ್ರಕಟಣೆ ಸಂಖ್ಯೆ: PB/ ಟೆಂಡರ್ ಪ್ರಕಟಣೆ/2024-25/4548 Dated:17.03.2025.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ ಪ್ರಕಟಣೆ ಮೂಲಕ ಈ ಕಛೇರಿಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು, ಪ್ರಸ್ತುತ ಈ ಕೆಳಕಾಣಿಸಿದ ಕಾಮಗಾರಿಗಳನ್ನು ತಾಂತ್ರಿಕ ಕಾರಣಾಂತರಗಳಿಂದ ರದ್ದುಗೊಳಿಸಿ ತ್ವರಿತಗತಿಯಲ್ಲಿ ಸದರಿ ಕಾಮಗಾರಿಗಳಿಗೆ ಮತ್ತೋಮ್ಮೆ ಟೆಂಡರ್ ಆಹ್ವಾನಿಸಲಾಗುವುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THESE WORK ARE RESERVED FOR SC CATOGERY					
1	PWD/2024-25/EL/WORK_INDENT19956	40.95	2	PWD/2024-25/EL/WORK_INDENT19968	100.00
THIS WORK IS RESERVED FOR CATOGERY II-A					
4	PWD/2024-25/EL/WORK_INDENT19967	100.00			
GENERAL WORKS					
7	PWD/2024-25/EL/WORK_INDENT19954	16.76	8	PWD/2024-25/EL/WORK_INDENT19983	190.40
9	PWD/2024-25/EL/WORK_INDENT19952	51.59	10	PWD/2024-25/EL/WORK_INDENT19955	190.40
15	PWD/2024-25/EL/WORK_INDENT19950	190.40	12	PWD/2024-25/EL/WORK_INDENT19953	127.10
17	PWD/2024-25/EL/WORK_INDENT19949	190.40	14	PWD/2024-25/EL/WORK_INDENT19951	190.40
19	PWD/2024-25/EL/WORK_INDENT19948	190.4	16	PWD/2024-25/EL/WORK_INDENT19944	190.00
21	PWD/2024-25/EL/WORK_INDENT19947	190.4	18	PWD/2024-25/EL/WORK_INDENT19940	190.40

ಇದನ್ನು ಹೊರತುಪಡಿಸಿದಂತೆ, ಬಾಕಿ ಉಳಿದ ಸದರಿ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/617

ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ
ಸಂ: ಕ್ರಿಮ್ಸ್/ಇ-ಟೆಂಡರ್/2024-25 ದಿನಾಂಕ: 26.03.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/178/2024-25, ದಿನಾಂಕ: 26.03.2025, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರದ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರವನ್ನು ಒಂದು ವರ್ಷದ ಅವಧಿಗೆ ಒದಗಿಸಲು ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 26.03.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15.04.2025 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.2: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/179/2024-25, ದಿನಾಂಕ: 26.03.2025, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಪ್ರಪತ್ರ ಮತ್ತು ರಜಿಸ್ಟರ್‌ಗಳ ಮುದ್ರಣ ಮಾಡಿ ಪೂರೈಸಲು ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 27.03.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15.04.2025 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.3: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ-ಟೆಂಡರ್/180/2024-25, ದಿನಾಂಕ: 26.03.2025, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಸ್ಟೇಶನರಿ ಸಾಮಗ್ರಿಗಳ ಪೂರೈಕೆಗೆ ಇ-ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 27.03.2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15.04.2025 ರಂದು ಸಂಜೆ 5.00 ರ ಒಳಗೆ

ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

ಸಹಿ/- ನಿರ್ದೇಶಕರು
DIPR/KWR/KSMCA/1039/24-25 dt. 29.03.2025

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080-22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಡಿವೈಇಎಸ್/ತಾಂ.ಶಾ/ಕ್ರೀಯೋ/222/2024-25 ದಿನಾಂಕ : 18.03.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ-ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕ್ರೀಡಾ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಮೂಲಕ ಅರ್ಹ ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕ್ರೀಡಾ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ. (ಕಾಲ್-2). ಟೆಂಡರ್‌ಗಿಟ್ಟ ಮೊತ್ತ : ರೂ. 208.16 ಲಕ್ಷಗಳು, ಇಎಂಡಿ ಮೊತ್ತ : ರೂ. 3,12,244.00.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 17.04.2025 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.04.2025 ಸಮಯ: 16.30 ಗಂಟೆ.

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/5984/Zen/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222943, ಇ-ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟಲ್ ಮೂಲಕ) 3ನೇ ಕರೆ

ಐ.ಎಫ್.ಟಿ ಸಂಖ್ಯೆ: 49/2024-25 ದಿನಾಂಕ : 27.03.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-3 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ ಶಿವಮೊಗ್ಗ ತಾಲ್ಲೂಕು ನಗರ ವ್ಯಾಪ್ತಿಯ ಹೊಸಪೇಟೆ-ಶಿವಮೊಗ್ಗ (ರಾ.ಹೆ-25) ರಸ್ತೆಯ ಸರಪಳಿ 191.23 ಕಿ.ಮೀ ರಿಂದ 192.00 ಕಿ.ಮೀ. ವರೆಗೆ ನಗರ ಪರಿಮಿತಿಯಲ್ಲಿ ಮೇಲ್ಸೆತುವೆ ರಸ್ತೆಯ ಮರು ಡಾಂಬರೀಕರಣ ಕಾಮಗಾರಿ. (ಇಂಡೆಂಟ್ ನಂ.19129)3ನೇ ಕರೆ 5054-03-337-0-17-160 ರಾಜ್ಯ ಹೆದ್ದಾರಿ ರಸ್ತೆ ನವೀಕರಣ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.79.42 ಲಕ್ಷ ಮತ್ತು ಇ.ಎಂ.ಡಿ. ಮೊತ್ತ ರೂ.0.80 ಲಕ್ಷ. ಸದರಿ ಕಾಮಗಾರಿಗಳ ಟೆಂಡರ್ ಕಾಲಾವಧಿ 06 ತಿಂಗಳು ಮಳೆಗಾಲ ಸೇರಿ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 27-03-2025 ರಿಂದ 03-04-2025 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 03-04-2025 ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 04-04-2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 05-04-2025 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.179-03 ಝೆಂಕಾರ್/2024-25

ಮಹಾನಗರ ಪಾಲಿಕೆ, ವಿಜಯಪುರ
ಸಂ:ಮನಪಾ/ಲೋ.ವಿ/ಕಾಅ/ಡಿಎಮ್ಎ/ಟಿಎನ್‌ಡಿ/ಇಪ್ರೋ-/2024-25/6856
ದಿನಾಂಕ:24.03.2025

ಇ-ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಹಾಗೂ ದರಪಟ್ಟಿ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ 1) ಸನ್ 2024-25 ನೇ ಸಾಲಿನ ಮಹಾನಗರ ಪಾಲಿಕೆಯ ಸಾಮಾನ್ಯ ಅನುದಾನದಲ್ಲಿನ 05 ಕಾಮಗಾರಿಗಳು 2) ಸನ್ 2024-25ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 02 ಕಾಮಗಾರಿ ಮತ್ತು 3) ಸನ್ 2020-21 ನೇ ಸಾಲಿನ 15ನೇ ಹಣಕಾಸು ಅನುದಾನದ ಉಳಿತಾಯ ಮೊತ್ತದಲ್ಲಿ 01 ಕಾಮಗಾರಿ ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ದರಪಟ್ಟಿ ಅಹ್ವಾನಿಸಲಾಗಿದೆ ಹಾಗೂ e-DAR ಸಂಬಂಧಿಸಿದಂತೆ ರಸ್ತೆಗಳಮಾಹಿತಿಯನ್ನು ಸಂಗ್ರಹಿಸಲು ತಾಂತ್ರಿಕ ಸರ್ವೆ ಕೈಗೊಂಡು ಮಾಹಿತಿ ಒದಗಿಸಲು Quotation ದರ ಸಲ್ಲಿಸಲು ಈ ಕೆಳಗಿನಂತಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ : 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.

1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 08-04-2025

ವಿಜಯಪುರ ನಗರ ವ್ಯಾಪ್ತಿಯಲ್ಲಿ e-DAR ಸಂಬಂಧಿಸಿದಂತೆ ರಸ್ತೆಗಳ ಮಾಹಿತಿ ಸಂಗ್ರಹಿಸಲು ತಾಂತ್ರಿಕ ಸರ್ವೆ ಕೈಗೊಂಡು, ಮಾಹಿತಿ ಒದಗಿಸುವುದು ಅವಶ್ಯವಿರುವದರಿಂದ, ಕೆಳಕಾಣಿಸಿದ ಮಾಹಿತಿಯಂತೆ ಸಂಪೂರ್ಣ ಮಾಹಿತಿವುಳ್ಳ ವಿಸ್ತ್ರತವಾದ ವರದಿಯನ್ನು ತಯಾರಿಸಿ ಪೂರೈಸಲು ಇಚ್ಛೇವುಳ್ಳ ಅರ್ಹ ಗುತ್ತಿಗೆದಾರರಿಂದ ಹಾಗೂ ಸಂಘ ಸಂಸ್ಥೆಗಳಿಂದ ದರಗಳನ್ನು ಸಲ್ಲಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದರಪಟ್ಟಿ ಆಹ್ವಾನಿಸಲಾಗಿದೆ. ಇಚ್ಛೇವುಳ್ಳ ಅರ್ಹ ಗುತ್ತಿಗೆದಾರರು ಹಾಗೂ ಸಂಘ ಸಂಸ್ಥೆಗಳುಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕನಿಷ್ಠ ದರಗಳನ್ನು ದಿನಾಂಕ: 08/04/2025 ವರೆಗೆ ಸಾಯಂಕಾಲ 4:00 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ.

Sl.No	Name of Item/Description	Rate Exclusive of-GST
1	For Conducting e-Dar Survey with technical staff and preparing information as given in 14 No. of Formats(Rate to be quoted per km length)	

Note:- 1) GST shall be quoted separately
2) For Further information kppp.gov.in portal

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/799/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ-1,ಎಇ-3:ಟೆಂಡರ್-46:2024-25
ದಿನಾಂಕ: 29.03.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ಏಕ ಲಕೋಟೆ ಪದ್ಧತಿ:- ಸಾಮಾನ್ಯ:- ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ:-
(1) ಚಳ್ಳಕೆರೆ ತಾಲ್ಲೂಕು ದೊಡ್ಡೇರಿ ಗ್ರಾಮದ ಶ್ರೀ ದತ್ತಾವದೂತ ಕನ್ನೇಶ್ವರ ಸ್ವಾಮಿ ಮಠದ ರಸ್ತೆ ಡಾಂಬರೀಕರಣ (ವ.ಇಂ. 21000) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 25.00
(2) ಚಿತ್ರದುರ್ಗ ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿರುವ ವಕೀಲರ ಭವನದ ಪಕ್ಕದಲ್ಲಿ ಗಣಕೀಕೃತ ಕೊಠಡಿ ನಿರ್ಮಾಣ ಹಾಗೂ ಪೀಠೋಪಕರಣ ಒದಗಿಸುವ ಕಾಮಗಾರಿ (ವ.ಇಂ. 20800) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 25.00

ಕಾಮಗಾರಿಗಳ ಟೆಂಡರ್ ದಿನಾಂಕಗಳು:- ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 07-04-2025 ಸಮಯ 17-30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 08-04-2025 ಸಮಯ 16-00 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 09-04-2025 ಸಮಯ 16-15

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/ 755/2024-25
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222943, ಇ-ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟಲ್ ಮೂಲಕ) 2ನೇ ಕರೆ

ಐ.ಎಫ್.ಟಿ ಸಂಖ್ಯೆ: 51/2024-25 ದಿನಾಂಕ : 29.03.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-3&4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 5054-04-337-0-01-154-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ-ಹೊಳೆಹೊನ್ನೂರು ರಸ್ತೆಯಿಂದ ಎಂ.ಎಂ.ರಸ್ತೆಗೆ ಎಮ್ಮೆಹಟ್ಟಿ, ತಿಮ್ಲಾಪುರ, ಮಾರಶೆಟ್ಟಿಹಳ್ಳಿ, ಅರಕೆರೆ,ದಾನವಾಡಿ ಮೂಲಕ ಸೇರುವ ರಸ್ತೆ ಸರಪಳಿ 4.00 ರಿಂದ 4.80 ಕಿ.ಮೀ ವರೆಗೆ ರಸ್ತೆ ಸುಧಾರಣೆ (ಇಂಡೆಂಟ್ ನಂ-20385) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.79.09 ಲಕ್ಷಗಳು ಮತ್ತು ಇ.ಎಂ.ಡಿ. ಮೊತ್ತ ರೂ.1.582 ಲಕ್ಷಗಳು, ಸದರಿ ಕಾಮಗಾರಿಗಳ ಟೆಂಡರ್ ಕಾಲಾವಧಿ 09 ತಿಂಗಳು ಮಳೆಗಾಲ ಸೇರಿ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 29-03-2025 ರಿಂದ 07-04-2025 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 07-04-2025 ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 08-04-2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 09-04-2025 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.192-03 ಝೆಂಕಾರ್/2024-25

ನಮೂನೆ ಬಿ – ಸಾರ್ವಜನಿಕ ಪ್ರಕಟಣೆ
[IBBI-ಭಾರತೀಯ ದಿವಾಳಿ ಮತ್ತು ಪಾಪರುಗಿರಿ ಮಂಡಳಿಯ (ಸಮಾಪನ ಪ್ರಕ್ರಿಯೆ) ನಿಬಂಧನೆಗಳು, 2016 ರ ನಿಬಂಧನೆ 12]

ಭರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಮತ್ತು ಇಂಪೋರ್ಟ್ಸ್ ಲಿಮಿಟೆಡ್‌ನ ಹಿತಾಸಕ್ತಿದಾರರ ಗಮನಕ್ಕೆ

ಸಂಬಂಧಿತ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಕಂಪನಿಯ ಹೆಸರು	ಭರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಮತ್ತು ಇಂಪೋರ್ಟ್ಸ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ಕಂಪನಿ ರಚನೆಯಾದ ದಿನಾಂಕ	17ನೇ ಜುಲೈ 2007
3.	ಯಾವ ಪ್ರಾಧಿಕಾರದ ಅನುಮತಿಯೊಂದಿಗೆ ಕಾರ್ಪೊರೇಟ್ ಸಾಲಗಾರ ಕಂಪನಿಯ ರಚನೆ/ನೋಂದಾವಣೆ ಆಗಿದೆ	ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು, ಕರ್ನಾಟಕ
4.	ಕಾರ್ಪೊರೇಟ್ ಸಾಲಗಾರ ಕಂಪನಿಯ ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್)	U51909KA2007PLC043387
5.	ಕಾರ್ಪೊರೇಟ್ ಸಾಲಗಾರ ಕಂಪನಿಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದರೆ) ವಿಳಾಸ	**ನೋಂದಾಯಿತ ಕಛೇರಿ:** # 186, 1ನೇ ಮಹಡಿ, 1ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು-560027. **ಪ್ರಧಾನ ಕಛೇರಿ:** ಸರ್ವೇ ನಂ. 48, ಹೆಬ್ಬಗೋಡಿ, ಹುಸ್ಕೂರು ಗೇಟ್, ಹೊಸೂರು ಮುಖ್ಯರಸ್ತೆ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು – 560 100
6.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪರಿಹಾರ ಪ್ರಕ್ರಿಯೆಯ ಮುಕ್ತಾಯಗೊಂಡ ದಿನಾಂಕ	26ನೇ ಮಾರ್ಚ್ 2025
7.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪ್ರಕ್ರಿಯೆಯ ಆರಂಭವಾದ ದಿನಾಂಕ	26ನೇ ಮಾರ್ಚ್ 2025
8.	ಸಮಾಪಕರಾಗಿ ಕೆಲಸ ಮಾಡುತ್ತಿರುವ ದಿವಾಳಿತನ ವೃತ್ತಿಪರರ ಹೆಸರು ಮತ್ತು ನೋಂದಾವಣೆ ಸಂಖ್ಯೆ	ರವೀಂದ್ರ ಬೆಳೆಯೂರ್ IBBI/IPA-001/IP-P00189/2017-18/10368
9.	ಮಂಡಳಿಯಲ್ಲಿ ನೋಂದಾಯಿಸಿರುವಂತೆ ಸಮಾಪಕರ ವಿಳಾಸ ಮತ್ತು ಇಮೇಲ್	ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560 011 ದೂರವಾಣಿ: +91 80 2654 0193 ಇಮೇಲ್: ravi@beleyur.com
10.	ಪತ್ರವ್ಯವಹಾರಗಳಿಗಾಗಿ ಸಮಾಪಕರ ವಿಳಾಸ ಮತ್ತು ಇಮೇಲ್	ರವೀಂದ್ರ ಬೆಳೆಯೂರ್ 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ದೂರವಾಣಿ: +91 80 26540193 ಇಮೇಲ್: bharathinfra_cirp@beleyur.com
11.	ಕ್ಲೇಮ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	**26ನೇ ಏಪ್ರಿಲ್ 2025**

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿಯ ಬೆಂಗಳೂರು ಪೀಠವು ಭರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಮತ್ತು ಇಂಪೋರ್ಟ್ಸ್ ಲಿಮಿಟೆಡ್‌ನ ದಿವಾಳಿ ಪ್ರಕ್ರಿಯೆಯನ್ನು 26.03.2025 ರಿಂದ ಆರಂಭಿಸಬೇಕೆಂದು ಆದೇಶಿಸಿದೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಭರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಮತ್ತು ಇಂಪೋರ್ಟ್ಸ್ ಲಿಮಿಟೆಡ್‌ನ ಹಿತಾಸಕ್ತಿದಾರರು ಪುರಾವೆ ಸಹಿತವಾಗಿ ತಮ್ಮ ಕ್ಲೇಮುಗಳನ್ನು 26ನೇ ಏಪ್ರಿಲ್ 2025 ರಂದು ಅಥವಾ ಅದರ ಒಳಗಾಗಿ ಸಮಾಪಕರಿಗೆ, ಮೇಲೆ ಕ್ರ. ಸಂ. 10 ರಲ್ಲಿ ತಿಳಿಸಿರುವ ಅವರ ವಿಳಾಸದಲ್ಲಿ ಸಲ್ಲಿಸಬೇಕು.

ಹಣಕಾಸು ಸಾಲಿಗರು ತಮ್ಮ ಕ್ಲೇಮುಗಳನ್ನು ಪುರಾವೆ ಸಹಿತವಾಗಿ ವಿದ್ಯುನ್ಮಾನ ವಿಧಾನದಲ್ಲಿ ಮಾತ್ರವೇ ಸಲ್ಲಿಸಬೇಕು. ಇನ್ನಿತರ ಎಲ್ಲ ಸಾಲಿಗರು ಖುದ್ದಾಗಿ, ಅಥವಾ ಅಂಚೆಯ ಮೂಲಕ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಕ್ಲೇಮುಗಳನ್ನು ಪುರಾವೆ ಸಹಿತವಾಗಿ ಸಲ್ಲಿಸಬೇಕು.

ಸುಳ್ಳು ಅಥವಾ ಹಾದಿತಪ್ಪಿಸುವಂತಹ ಪುರಾವೆಗಳನ್ನು ನೀಡುವುದು ದಂಡಾರ್ಹ ಅಪರಾಧವಾಗುತ್ತದೆ.

ಒಂದೊಮ್ಮೆ, ಯಾವುದೇ ಹಿತಾಸಕ್ತಿದಾರರು ದಿವಾಳಿತನ ಪ್ರಕ್ರಿಯೆಯ ಅವಧಿಯಲ್ಲಿ ತಮ್ಮ ಕ್ಲೇಮುಗಳನ್ನು ಸಲ್ಲಿಸದೇ ಇದ್ದಲ್ಲಿ, ದಿವಾಳಿ ಪರಿಹಾರ ಪ್ರಕ್ರಿಯೆಯ ಸಮಯದಲ್ಲಿ ಕ್ಲೇಮುಗಳನ್ನು (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ಪ್ರಕ್ರಿಯೆ) ನಿಬಂಧನೆಗಳು, 2016 ಅಡಿಯಲ್ಲಿ ಸಲ್ಲಿಸಿದ್ದರೆ ಅಂತಹ ಕ್ಲೇಮುಗಳನ್ನು ಕಾಲಂ 38ರ ಅಡಿಯಲ್ಲಿ ಈಗಾಗಲೇ ಸಲ್ಲಿಸಲಾಗಿದೆ ಎಂದು ಪರಿಗಣಿಸಲಾಗುವುದು.

ಸಹಿ/- ರವೀಂದ್ರ ಬೆಳೆಯೂರ್ ಲಿಕ್ವಿಡೇಟರ್
ದಿನಾಂಕ: 29ನೇ ಮಾರ್ಚ್ 2025 ಭರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ ಮತ್ತು ಇಂಪೋರ್ಟ್ಸ್ ಲಿಮಿಟೆಡ್
ಸ್ಥಳ: ಬೆಂಗಳೂರು ಸಮಾಪನ ಪ್ರಕ್ರಿಯೆಯಲ್ಲಿ

ಯುಗಾದಿ ಸಿಹಿ ಕಹಿಗಳ ಸಮನ್ವಯ ಚಕ್ರ

• ಎಸ್. ಸೂರ್ಯಪ್ರಕಾಶ ಪಂಡಿತ್

ಹೊಸತನ್ನು ಸ್ವಾಗತಿಸುವ ಕ್ಷಣ ಮತ್ತೊಮ್ಮೆ ಬಂದಿದೆ. ನಾವು ಅದನ್ನು ಸಂತೋಷದಿಂದ ಸ್ವೀಕರಿಸಬೇಕಷ್ಟೆ!

ಹಳೆಯದು ಮರೆಯಾಗುತ್ತಲೇ ಇರುತ್ತದೆ; ಹೊಸತಾಗಿರುವುದು ಹುಟ್ಟುತ್ತಲೇ ಇರುತ್ತದೆ. ಆದರೆ ಈ ಬದಲಾವಣೆ ಸುಲಭವಾಗಿ ನಮ್ಮ ಗಮನಕ್ಕೆ ಬರುವುದಿಲ್ಲ. ಇದನ್ನು ನಾವು ಪ್ರಕೃತಿಯ ಜಾಡನ್ನು ಹಿಡಿದು ಕಂಡುಕೊಳ್ಳಬಹುದು. ಒಣಗಿದ ಮರವೊಂದು ಮತ್ತೆ ಚಿಗುರನ್ನು ಪಡೆಯುವುದು ನಮ್ಮ ಕಣ್ಣಿಗೆ ಗೋಚರಿಸುತ್ತದೆ; ಆ ಚಿಗುರು ಎಲೆಯಾಗಿ ಮತ್ತೆ ಬಲಿತು, ಒಣಗಿ ಮತ್ತೆ ಉದುರುತ್ತದೆ. ಪ್ರಕೃತಿಯ ಈ ಏಳು–ಬೀಳುಗಳ ಚಕ್ರಕ್ಕೂ ಯುಗಾದಿಯ ಹಬ್ಬಕ್ಕೂ ನಂಟಿರುವುದು ಸ್ವಾರಸ್ಯಕರವಾಗಿದೆ.

ಯುಗದ ಆದಿ 'ಯುಗಾದಿ'. ಆದಿ ಎಂದರೆ ಮೊದಲು. 'ಮೊದಲು' ಎಂಬುದು ಮೊದಲಾಗಬೇಕು ಎಂದರೆ ಇನ್ನೊಂದು ಕೊನೆಯನ್ನು ಕಂಡಿರಬೇಕಾಗುತ್ತದೆ. ಆದರೆ ಆ ಕೊನೆ, ದಿಟವಾದ ಕೊನೆಯಲ್ಲ; ಇನ್ನೊಂದು ಮೊದಲಿನ ಆರಂಭವೇ ಈ ಕೊನೆ. ಹೀಗೆ ಕೊನೆ–ಮೊದಲು–ಕೊನೆಗಳ ಚಕ್ರವೇ ಯುಗಾದಿಯ ಕಲ್ಪನೆಯಲ್ಲಿರುವುದು. ಕೊನೆಯಾಯಿತೆಂದು ಕುಗ್ಗಬೇಕಿಲ್ಲ; ಮೊದಲುಗೊಂಡಿತು ಎಂದು ಹಿಗ್ಗಬೇಕಿಲ್ಲ. ಒಂದು ಇನ್ನೊಂದರಂತೆ ಈ ಚಕ್ರದ ಏಳುಬೀಳುಗಳು ನಿರಂತರವಾಗಿರುತ್ತವೆ. ಈ ನಿರಂತರ ಸುತ್ತಾಟವನ್ನು ನಾವು ಗಮನಿಸಬೇಕು, ಗಮನಿಸಿ ಒಪ್ಪಿಕೊಳ್ಳಬೇಕು. ಇದೇ ಯುಗಾದಿಯ ಸಂದೇಶ.

ಸೃಷ್ಟಿಯಲ್ಲಿ ಇಂಥ ಹಲವು ಕೊನೆ–ಮೊದಲುಗಳ ಚಕ್ರ ಸುತ್ತುತ್ತಲೇ ಇರುತ್ತದೆ; ಹಗಲು–ರಾತ್ರಿ, ಋತುಗಳು – ಹೀಗೆ. ಹೀಗೆಯೇ ನಮ್ಮ ಜೀವನದಲ್ಲೂ ಹಲವು ವಿವರಗಳು ಸುತ್ತುತ್ತಲೇ ಇರುತ್ತವೆ: ಸುಖ–ದುಃಖ, ಸೋಲು–ಗೆಲವು, ಹುಟ್ಟು–ಸಾವು. ಇವನ್ನು ಸಮನಾಗಿ ಸ್ವೀಕರಿಸಬೇಕೆಂಬ ವಿವೇಕಕ್ಕೆ ನಮ್ಮನ್ನು ಸಜ್ಜುಗೊಳಿಸುತ್ತದೆ, ಯುಗಾದಿಯ ಸಂದೇಶ.

ಸೃಷ್ಟಿಯ ಮೊದಲ ದಿನವೇ ಯುಗಾದಿ ಎಂಬ ಕಲ್ಪನೆಯೂ ಇದೆ. ಸೃಷ್ಟಿ ಎಂದರೆ ನಾಲ್ಕು ಯುಗಗಳನ್ನು ಒಳಗೊಂಡ ಮಹಾಸೃಷ್ಟಿಯೂ ಆಗುತ್ತದೆ; ನಮ್ಮ ಜೀವನದಲ್ಲಿ ತೋರಿಕೊಳ್ಳುತ್ತಿರುವ ಒಂದೊಂದು ಕ್ಷಣವೂ ಸೃಷ್ಟಿಯೇ ಎನಿಸಿಕೊಳ್ಳುತ್ತದೆ. ಹೀಗೆ ಒಂದೊಂದು ಕ್ಷಣವನ್ನೂ ಹಬ್ಬದಂತೆ ಸವಿಯಬೇಕು, ಸಂಭ್ರಮಿಸಬೇಕು ಎಂಬುದೇ ಯುಗಾದಿಯ ಸಂದೇಶ.

'ಯುಗ' ಎಂದರೆ ಜೋಡಿ ಎಂಬ ಅರ್ಥವೂ ಇದೆ; ಸುಖ–ದುಃಖ, ಒಳಿತು–ಕೆಡಕು ಎಂಬ ಭಾವಗಳೂ ಕತ್ತಲೆ–ಬೆಳಕು, ಹುಟ್ಟು–ಸಾವು ಎಂಬ ಜೋಡಿಗಳೂ ಸೃಷ್ಟಿನಿಯಮದ ಅನಿವಾರ್ಯ ತಥ್ಯಗಳು ಎಂಬುದನ್ನು ಈ 'ಯುಗ'ದ ಕಲ್ಪನೆಯಲ್ಲಿ ಕಾಣಬಹುದು. ನೇಗಲಿನ ಮತ್ತು ಬಂಡಿಯ ನೊಗಕ್ಕೂ 'ಯುಗ' ಎಂದು ಹೆಸರು; ಇದು ಜೀವನಪಯಣವನ್ನೂ ಸಂಕೇತಿಸುತ್ತದೆ; ಜೀವನಾಧಾರವಾದ ಕೃಷಿಯನ್ನೂ ಸಂಕೇತಿಸುತ್ತದೆ. ಯುಗಗಳ ಕಲ್ಪನೆ, ಸೃಷ್ಟಿಚಕ್ರ, ಪ್ರಕೃತಿಯ ವಿನ್ಯಾಸ, ಕೃಷಿ – ಇವಾವುದೂ ಏಕಮುಖ ಸಂಚಾರವಲ್ಲ; ಇವೆಲ್ಲವೂ ಸುಖ–ದುಃಖ, ಹುಟ್ಟು–ಸಾವು, ರಾತ್ರಿ–ಹಗಲು – ಇಂಥ ಜೋಡಿಯ ಸಾಮರಸ್ಯದ ಕುಣಿತಗಳೇ ಹೌದು ಎಂಬುದು ಎದ್ದುಕಾಣುವ ವಿವರ. ಜೀವನಚಕ್ರದ ಓಟ ನಿರಂತರವಾಗಿರಬೇಕು; ಕತ್ತಲೆ–ಬೆಳಕುಗಳು ಈ ಓಟಕ್ಕೆ ಅಡ್ಡಿಗಳನ್ನಾಗಿಸಿಕೊಳ್ಳಬಾರದು ಎಂಬ ಪ್ರಕೃತಿಯ ಪಾಠವೇ ಯುಗಾದಿಯ ಸಂದೇಶವೂ ಆಗಿದೆ.

ಯುಗಾದಿಯಂದು ಪಂಚಾಗ–ಶ್ರವಣವನ್ನು ಮಾಡುವುದುಂಟು. ನಮ್ಮ ಮುಂದಿರುವ ವರ್ಷದಲ್ಲಿ ಪ್ರಕೃತಿ ಹೇಗಿರುತ್ತದೆ ಎಂಬ ವಿವರಗಳೂ ಪಂಚಾಂಗದಲ್ಲಿರುತ್ತವೆ; ನಮ್ಮ ಮುಂದಿನ ದಿನಗಳ ಭವಿಷ್ಯ ಹೇಗಿರುತ್ತವೆ ಎಂಬ ವಿವರಗಳೂ ಇರುತ್ತವೆ. ಈ ಭವಿಷ್ಯಗಳು ವಾಸ್ತವದಲ್ಲಿ ನಡೆಯುತ್ತದೆಯೋ, ಇಲ್ಲವೋ – ಅದು ಇಲ್ಲಿ ಮುಖ್ಯವಲ್ಲ; ಈ ಕಲಾಪ ಪ್ರತಿನಿಧಿಸುವ ಸಾಂಕೇತಿಕತೆ ಬಹಳ ಮುಖ್ಯ. ಪ್ರಕೃತಿಯ ಶಕ್ತಿ–ಯುಕ್ತಿ ನಮ್ಮ ಶಕ್ತಿ–ಮಿತಿಗಳನ್ನೂ ಅರಿತುಕೊಂಡು, ಎರಡನ್ನೂ ಸಮನ್ವಯದಿಂದ ಅಳವಡಿಸಿಕೊಂಡು, ನಮ್ಮ ಜೀವನವನ್ನು ಸುಂದರವಾಗಿಸಿಕೊಳ್ಳುವ ವಿವೇಕ ನಮ್ಮಲ್ಲಿಯೇ ಇದೆ ಎಂಬುದನ್ನು ಯುಗಾದಿಯ ಸಂದೇಶ ಸಾರುತ್ತಿದೆ. ಬೇವು–ಬೆಲ್ಲಗಳ ಸಾಂಕೇತಿಕತೆಯೂ ಇದೇ: ನಮಗೆ ಪೂರಕ ಎನಿಸುವಂಥವೂ, ಮಾರಕ ಎನಿಸುವಂಥವೂ – ಎರಡೂ ನಮ್ಮ ಮುಂದಿವೆ. ಇವನ್ನು ನಾವು ಹೇಗೆ ಗ್ರಹಿಸಿ, ಸ್ವೀಕರಿಸುತ್ತೇವೆ – ಎಂಬುದರಲ್ಲಿಯೇ ನಮ್ಮ ಭವಿಷ್ಯ ನಿರ್ಧಾರವಾಗುವುದು.

ಪ್ರೀತಿ, ಕರುಣೆಗಳ 'ಈದ್ ಉಲ್ ಫಿತ್ರ್'

• ಅಬ್ದುಲ್ ರಹಿಮಾನ್

'ಇಬ್ಬರು ಪರಸ್ಪರ ಹಸ್ತಲಾಘವ ಮಾಡಿದಾಗ ಮರದಿಂದ ಎಲೆಗಳು ಉದುರಿದಂತೆ ಪಾಪಗಳು ಕಳೆಯುತ್ತವೆ' ಎನ್ನುವ ಪ್ರವಾದಿ ಮುಹಮ್ಮದರ ಮಾತು 'ಈದ್ ಉಲ್ ಫಿತ್ರ್' ಆಚರಣೆ ಹಿಂದಿನ ಉದ್ದೇಶವನ್ನು ಸಾರುತ್ತದೆ. ಸಹೋದರತೆ, ಉದಾರತೆ, ಮಾನವೀಯತೆ, ಸಮರ್ಪಣಾ ಮನೋಭಾವ ಮುಂತಾವುದಗಳೇ ಈ ಹಬ್ಬದ ರಂಗುಗಳು.

ಮಸೀದಿ, ಈದ್ಗಾಗಳಲ್ಲಿ ಯಾವುದೇ ತಾರತಮ್ಯ ಇಲ್ಲದೆ ಭುಜಕ್ಕೆ ಭುಜಕೊಟ್ಟು ನಿಂತು ಪ್ರಾರ್ಥಿಸುವುದು ಸಹೋದರತ್ವ ಹಾಗೂ ಏಕತೆಯ ಪ್ರತೀಕ. ಕೈ–ಮೈ ಜೋಡಿಸಿ ಶುಭಾಶಯ ವಿನಿಮಯ ಮಾಡಿಕೊಂಡು ಸ್ನೇಹವನ್ನು ಪ್ರಕಟಿಸುವುದು ಹಬ್ಬದ ವಿಶೇಷ. ದ್ವೇಷ, ಅಸೂಯೆಗಳನ್ನು ಮರೆತು ಪರಸ್ಪರ ಕ್ಷಮಾಪಣೆ ನೀಡುವುದು, ಕೌಟುಂಬಿಕ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಹಬ್ಬ ನೀಡುವ ಪ್ರಮುಖ ಸಂದೇಶ. 'ಕುಟುಂಬ ಸಂಬಂಧವನ್ನು ಗಟ್ಟಿಗೊಳಿಸುವವನು ಜನರಲ್ಲಿ ಉತ್ತಮನು' ಎನ್ನುವುದು ಪ್ರವಾದಿಯವರು ಹೇಳಿಕೊಟ್ಟ ಪಾಠ. ಹಳೆಯ ವೈಷಮ್ಯಗಳನ್ನು ಮರೆತು, ಒಗ್ಗಟ್ಟನ್ನು ಬಲಪಡಿಸಲು ಪ್ರೇರೇಪಿಸುವ ಹಬ್ಬವೂ ಹೌದು.

ಪ್ರಾರ್ಥನೆಗೆ ಒಟ್ಟಾಗಿ ತೆರಳುವುದು, ಖುಷಿಯನ್ನು ಹಂಚಿಕೊಳ್ಳುವುದು, ದಾನ–ಧರ್ಮಗಳ ಮೂಲಕ ಬಡವರಿಗೆ ನೆರವಾಗುವುದು, ಅಬಲರಿಗೆ ಅನುಕಂಪ ತೋರುವುದು, ಅನಾಥರು, ವೃದ್ಧರು, ಅಶಕ್ತರ ಬಗ್ಗೆ ದಯಾಶೀಲರಾಗುವುದು – ಇವು ಈದ್ ಕಲಿಸಿಕೊಡುವ ಪಾಠಗಳು. 'ನೆರೆಹೊರೆಯವರು ಹಸಿದಿರುವಾಗ ಹಬ್ಬ ಆಚರಿಸುವವನು ನನ್ನವನಲ್ಲ' ಎನ್ನುವ ಪ್ರವಾದಿಯವರ ಮಾತಿನ ಹಿಂದೆ ಸಾಮಾಜಿಕ ಕಳಕಳಿಯ ಪಾಠ ಇದೆ. ಹಬ್ಬದ ದಿನ ಖುದ್ದು ಪ್ರವಾದಿಯವರು, ಮದೀನಾದ ಬೀದಿಗಳಲ್ಲಿ ತೆರಳಿ ಹಣ, ಬಟ್ಟೆಗಳನ್ನು ದಾನ ಮಾಡುತ್ತಿದ್ದರು. ನಿರ್ಲಕ್ಷಿತರೊಂದಿಗೆ ಹಬ್ಬವನ್ನು ಆಚರಿಸುತ್ತಿದ್ದರು. ಉಡುಗೊರೆ ನೀಡಿ ಸಂಬಂಧಗಳನ್ನು ಗಟ್ಟಿಗೊಳಿಸಿ ಎಂದು ಪ್ರವಾದಿಯವರು ಹೇಳಿದ್ದಾರೆ.

ಒಂದು ಈದ್‌ನ ದಿನ ಬೆಳಿಗ್ಗೆ ಪ್ರಾರ್ಥನೆಗಾಗಿ ಮಸೀದಿಗೆ ತೆರಳುತ್ತಿದ್ದ ಪ್ರವಾದಿಯವರ ಕಣ್ಣಿಗೆ ದುಃಖದಿಂದ ನಿಂತಿದ್ದ ಬಡವನೊಬ್ಬ ಕಣ್ಣಿಗೆ ಬಿದ್ದ. ವಿಚಾರಿಸಿದಾಗ, ಧರಿಸಲು ಬಟ್ಟೆಯಿಲ್ಲವೆಂದೂ, ಕುಟುಂಬಕ್ಕೆ ಆಹಾರವಿಲ್ಲವೆಂದೂ ಹೇಳಿದ. ಕೂಡಲೇ ಪ್ರವಾದಿಯವರು ಅವನಿಗೆ ಮೇಲಂಗಿಯನ್ನು ತೆಗೆದು ಕೊಟ್ಟರಲ್ಲದೆ, ಆಹಾರ–ಹಣದ ವ್ಯವಸ್ಥೆಯನ್ನೂ ಮಾಡಿ, ಅವನನ್ನು ಪ್ರಾರ್ಥನೆಗೂ ಕರೆದೊಯ್ದರು. ಆ ಮೂಲಕ ಹಬ್ಬದ ಸಂಭ್ರಮದಲ್ಲಿ ಯಾರೂ ಹೊರಗುಳಿಯದಂತೆ ನೋಡಿಕೊಳ್ಳಬೇಕು; ಹೊಸ ಬಟ್ಟೆ, ಊಟ ಮಾತ್ರ ಹಬ್ಬದ ಸಂಭ್ರಮವಲ್ಲ; ಪ್ರೀತಿ, ಕರುಣೆಗಳು ಹಬ್ಬದ ಆಚರಣೆಯ ಉದ್ದೇಶ ಎನ್ನುವುದನ್ನು ತಿಳಿಸಿಕೊಟ್ಟರು. ಈದ್, ಪರಸ್ಪರ ಸಹಕಾರ, ಸಹಾನುಭೂತಿ ಪ್ರಕಟಣೆಯ ದಿನ ಕೂಡ.

'ಉಪವಾಸವನ್ನು ಅಂತ್ಯಗೊಳಿಸುವ ಹಬ್ಬ' ಎನ್ನುವುದು ಈದ್ ಉಲ್ ಫಿತ್ರ್‌ನ ಶಬ್ದಾರ್ಥ. ಈ ಹಬ್ಬ ಮುಸ್ಲಿಮರು ಅನುಭವಿಸಿದ ಆಧ್ಯಾತ್ಮಿಕ ಶುದ್ಧೀಕರಣದ ರಂಜಾನ್ ತಿಂಗಳ ಅಂತ್ಯವನ್ನು ಸೂಚಿಸುತ್ತದೆ. ಒಂದು ತಿಂಗಳು ಉಪವಾಸ ಇದ್ದು, ಎಲ್ಲಾ ದುರ್ನಡತೆಗಳಿಂದ ದೇಹ ಹಾಗೂ ಆತ್ಮವನ್ನು ಶುಚಿಗೊಳಿಸಿದ ವ್ಯಕ್ತಿಯು ಆ ಹುರುಪನ್ನು ಮುಂದುವರಿಸಲು ಸಂಕಲ್ಪ ಮಾಡುವ, ಉಪವಾಸದಿಂದ ದಕ್ಕಿಸಿಕೊಂಡ ಆಧ್ಯಾತ್ಮಿಕ ಚೈತನ್ಯವನ್ನು ಸಂಭ್ರಮಿಸುವ ದಿನ. ಸ್ವೇಚ್ಛೆಯಿಂದ ದೂರ ಉಳಿದು, ಸ್ವಯಂ ಶುದ್ಧೀಕರಣ ಹಾಗೂ ಆತ್ಮವನ್ನು ಪಳಗಿಸಲು ರಂಜಾನ್ ತಿಂಗಳು ನೀಡಿದ ಪ್ರೇರಣೆಯನ್ನು ಜೀವನಪೂರ್ತಿ ಅಳವಡಿಸಿಕೊಳ್ಳಲು ನಿರ್ಣಯ ಕೈಗೊಳ್ಳುವ ಹಬ್ಬ. ಹಸಿವಿನಿಂದ ಕಲಿತ ಪಾಠವನ್ನು ಸಮಾಜಸೇವೆಯ ಮೂಲಕ ಧನ್ಯಗೊಳಿಸುವ ಸಂದರ್ಭವೂ ಹೌದು. ಭ್ರಾತೃತ್ವ, ಸಹಬಾಳ್ವೆಯ ಸಂದೇಶವೂ ಈದ್‌ನಲ್ಲಿದೆ.

ಆ ದಿನ ಶಕ್ತ ಪ್ರತಿಯೊಬ್ಬರೂ ಬಡವರಿಗೆ ಧಾನ್ಯಗಳನ್ನು ದಾನ ನೀಡುವುದು ಕಡ್ಡಾಯ. ಊರಿನಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಧಾನ್ಯಗಳನ್ನು ಮನೆಯ ಪ್ರತಿ ಸದಸ್ಯನ ಹೆಸರಿನಲ್ಲಿ, ತಲಾ 2600 ಗ್ರಾಂನಷ್ಟು ದಾನ ನೀಡಬೇಕು. ಇದನ್ನು 'ಫಿತ್ರ್ ಝಕಾತ್' ಎನ್ನಲಾಗುತ್ತದೆ. ಆ ದಿನ ಯಾರೂ ಹಸಿವಿನಿಂದ ಇರಬಾರದು. ಎಲ್ಲರೊಂದಿಗೆ ಹಂಚಿತಿಂದು ಹಬ್ಬದ ಖುಷಿ ಕಾಣಬೇಕು. ಸಂಭ್ರಮ ನನ್ನದು ಮಾತ್ರವಾಗದೇ, ನಮ್ಮೆಲ್ಲರದೂ ಆಗಬೇಕು ಎನ್ನುವುದನ್ನು ಈ ಹಬ್ಬದ ಆಶಯ.

₹3,500 ಕೋಟಿ ಹೂಡಿಕೆ • ವಿಜಯಪುರಕ್ಕೆ ಸಾಬೂನು ತಯಾರಿಕೆ ಘಟಕ

'24,954 ಉದ್ಯೋಗ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಎಂ.ಬಿ.ಪಾಟೀಲ

ಬೆಂಗಳೂರು: ರಾಜ್ಯದ ಎಂಟು ಜಿಲ್ಲೆಗಳಲ್ಲಿ ₹3,500.86 ಕೋಟಿ ಬಂಡವಾಳ ಹೂಡಿಕೆಯ 69 ಯೋಜನೆಗಳಿಗೆ ಕೈಗಾರಿಕಾ ಸಚಿವ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಏಕಗವಾಕ್ಷಿ ಅನುಮೋದನಾ ಸಮಿತಿ ಅನುಮೋದನೆ ನೀಡಿದೆ. ಇದರಿಂದ 24,954 ಜನರಿಗೆ ಉದ್ಯೋಗ ಅವಕಾಶಗಳು ಸಿಗಲಿದೆ.

ವಿಜಯಪುರ ಜಿಲ್ಲೆಯಲ್ಲಿ ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್) ವತಿಯಿಂದ ₹250 ಕೋಟಿಯಲ್ಲಿ ಸಾಬೂನು ತಯಾರಿಕಾ ಘಟಕ ಸ್ಥಾಪನೆಯೂ ಇದರಲ್ಲಿ ಸೇರಿದೆ. ಏಕಗವಾಕ್ಷಿ ಅನುಮೋದನಾ ಸಮಿತಿಯ 152ನೇ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ಈ ಹೊಸ ಕೈಗಾರಿಕೆಗಳು ತುಮಕೂರು, ವಿಜಯಪುರ, ರಾಮನಗರ, ಕೋಲಾರ, ಬೆಳಗಾವಿ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಸ್ತಿತ್ವಕ್ಕೆ ಬರಲಿವೆ. ಹೊಸ ಕೈಗಾರಿಕೆಗಳಲ್ಲಿ ಮಷಿನ್‌ಟೂಲ್, ತಂಪು ಪಾನೀಯ, ಕಾರ್ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್, ಕಬ್ಬಿಣ ಮತ್ತು ಉಕ್ಕು, ಪರಿಶುದ್ಧ ಜಲಜನಕ ಅನಿಲ, ಹಾಲಿನ ಪುಡಿ ತಯಾರಿಕೆ ಘಟಕಗಳು ಇವೆ' ಎಂದು ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'₹50 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ 12 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ನೀಡಿರುವ ಅನುಮೋದನೆಗಳಿಂದ ₹2,311.88 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 18,972 ಜನರಿಗೆ ಉದ್ಯೋಗ ದೊರೆಯಲಿವೆ. ₹15 ಕೋಟಿಯಿಂದ ₹ 50 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 55 ಯೋಜನೆಗಳಿಂದ ₹ 1148.98 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು 5,832 ಜನರಿಗೆ ಉದ್ಯೋಗ, ಹೆಚ್ಚುವರಿ ಬಂಡವಾಳ ಹೂಡಿಕೆಯ 2 ಯೋಜನೆಗೆ ನೀಡಿರುವ ಅನುಮೋದನೆಯಿಂದ ₹40 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಅಂದಾಜು 150 ಜನರಿಗೆ ಉದ್ಯೋಗ ಸಿಗಲಿದೆ' ಎಂದು ಅವರು ವಿವರಿಸಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ.ಎನ್. ಮಹೇಶ್, ಐಟಿಬಿಟಿ ಇಲಾಖೆಯ ನಿರ್ದೇಶಕ ರಾಹುಲ್ ಎಸ್. ಸಂಕನೂರ್, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಅನುಮೋದನೆಗೊಂಡಿರುವ ಪ್ರಮುಖ 10 ಪ್ರಸ್ತಾವಗಳು

ಸಂಸ್ಥೆ	ಸ್ಥಳ	ಬಂಡವಾಳ ಹೂಡಿಕೆ (₹ ಕೋಟಿಗಳಲ್ಲಿ)	ಉದ್ಯೋಗ
ಜ್ಯೋತಿ ಸಿಎನ್‌ಸಿ ಆಟೊಮೇಷನ್ ಲಿಮಿಟೆಡ್	ತುಮಕೂರು ಜಿಲ್ಲೆಯ ವಸಂತನರಸಾಪುರ	285	3,394
ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ಸ್ ಲಿಮಿಟೆಡ್	ವಿಜಯಪುರ ಜಿಲ್ಲೆ, ಇಟ್ಟಂಗಿಹಾಳ	250	200
ಹಿಂದೂಸ್ತಾನ್ ಕೋಕಾ ಕೋಲಾ ಬ್ರಿವರೇಜಸ್ ಪ್ರೈ. ಲಿ.,	ರಾಮನಗರ ಜಿಲ್ಲೆಯ ಬಿಡದಿ ಕೈಗಾರಿಕಾ ಪ್ರದೇಶ	249	25
ಶಿಂಡೆಂಜೆನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್	ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶ	238	1,030
ಎಎಸ್‌ಕೆ ಆಟೊಮೊಬೈಲ್ಸ್ ಪ್ರೈವೇಟ್ ಲಿಮಿಟೆಡ್	ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಬಸವನಹಳ್ಳಿ ಕೈಗಾರಿಕಾ ಪ್ರದೇಶ	186	760
ಅಲೈಡ್ ಮೌಲ್ಡೆಡ್ ಎನ್‌ಕ್ಲೋಸರ್ ಪ್ರಾಡಕ್ಟ್ಸ್ ಇಂಡಿಯಾ ಪ್ರೈ. ಲಿ.,	ರಾಮನಗರ ಜಿಲ್ಲೆಯ ಹಾರೋಹಳ್ಳಿ ಕೈಗಾರಿಕಾ ಪ್ರದೇಶ	135	126
ಗೋಕುಲ್ ಮೆಟಾ ಟೆಕ್ ಪ್ರೈವೇಟ್ ಲಿಮಿಟೆಡ್	ಬೆಳಗಾವಿ ಜಿಲ್ಲೆಯ ವಘವಡೆ ಗ್ರಾಮ	96	324
ಪೀಣ್ಯ ಇಂಡಸ್ಟ್ರಿಯಲ್ ಗ್ಯಾಸಸ್ ಪ್ರೈವೇಟ್ ಲಿಮಿಟೆಡ್	ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಕೈಗಾರಿಕಾ ಪ್ರದೇಶ	92	2,919
ಎಸ್‌ಎಸ್‌ಬಿ ಇನ್‌ಫ್ರಾ ಪ್ರಾಜೆಕ್ಟ್ಸ್	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಗದೇನಹಳ್ಳಿ	70	162
ಎಆರ್‌ಎನ್‌ಎ ಡೇರಿ ಫಾರ್ಮ್ ಪ್ರೈವೇಟ್ ಲಿಮಿಟೆಡ್	ಚಿಕ್ಕಮಗಳೂರು ಜಿಲ್ಲೆ	49	200

ನೀರಿಗೆ ಹಾಹಾಕಾರ...

ಹಾವೇರಿ ತಾಲ್ಲೂಕಿನ ಬಮ್ಮನಕಟ್ಟಿ ಗ್ರಾಮದಲ್ಲಿ ಬೇಸಿಗೆ ಆರಂಭದಲ್ಲಿ ಹಲವು ಕೊಳವೆಬಾವಿಗಳು ಬತ್ತಿಹೋಗಿ, ನೀರಿನ ಸಮಸ್ಯೆ ತಲೆದೋರಿದೆ. ಕೊಳವೆಬಾವಿ ನಳಗಳಲ್ಲಿ ನೀರು ಹಿಡಿಯಲು ಜನರು ಸರದಿಯಲ್ಲಿ ನಿಂತಿದ್ದರು ಚಿತ್ರ: ಮಾಲತೇಶ ಇಚ್ಚಂಗಿ

ಎಎಸ್‌ಐ ಸೇರಿ ನಾಲ್ವರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯ ಲೋಪ ಎಸಗಿದ ಆರೋಪದ ಮೇರೆಗೆ ರಾಮಮೂರ್ತಿನಗರ ಪೊಲೀಸ್ ಠಾಣೆಯ ಎಎಸ್‌ಐ ಗುಣಶೇಖರ್ ಹಾಗೂ ಮೂವರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

ವ್ಯಕ್ತಿಯೊಬ್ಬರನ್ನು ಅಕ್ರಮವಾಗಿ ಏಳು ದಿನ ಠಾಣೆಯಲ್ಲಿ ಇರಿಸಿಕೊಂಡು ನಗರದ ವಿವಿಧೆಡೆ ಸುತ್ತಾಟ ನಡೆಸಿದ ಆರೋಪವಿದೆ. ಆರೋಪವು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ನಾಲ್ವರನ್ನು ಅಮಾನತು ಮಾಡಲಾಗಿದೆ ಎಂದು ಪೂರ್ವ ವಿಭಾಗದ ಡಿ.ಸಿ.ಪಿ ದೇವರಾಜು ತಿಳಿಸಿದ್ದಾರೆ.

ಕೇರಳದ ರಾಜೀವ್ ಅವರು ಕಾರು ಮಾರಾಟಕ್ಕೆ ಮುಂದಾಗಿದ್ದರು. ಕಳ್ಳತನ ಮಾಡಿದ್ದ ಕಾರನ್ನು ಮಾರಾಟ ಮಾಡುತ್ತಿರುವ ಆರೋಪದ ಮೇರೆಗೆ ರಾಜೀವ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ನಂತರ ಠಾಣೆಗೆ ಕರೆದುಕೊಂಡು ಬಂದು ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಲಾಗಿದೆ.

ಸುಳ್ಳು ಹೇಳಿ ಅಕ್ರಮವಾಗಿ ಬಂಧಿಸಿದ್ದಾರೆ ಎಂದು ಆರೋಪಿಸಿ ರಾಜೀವ್ ಕುಟುಂಬದವರು ಮಾನವ ಹಕ್ಕುಗಳ ಆಯೋಗದ ಮೊರೆ ಹೋಗಿದ್ದರು. ಆಯೋಗದ ಅಧಿಕಾರಿಗಳು ಠಾಣೆ ಮೇಲೆ ದಾಳಿ ಮಾಡಿದ್ದರು. ಆಗ ರಾಜೀವ್ ಅವರನ್ನು ಹಿಂದಿನ ಬಾಗಿಲು ಮೂಲಕ ಪೊಲೀಸರು ಹೊರಕ್ಕೆ ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಸಿ.ಸಿ.ಟಿ.ವಿ ಕ್ಯಾಮೆರಾಗಳ ಪರಿಶೀಲನೆ ವೇಳೆ ಅಕ್ರಮವಾಗಿ ಬಂಧಿಸಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

'ದಲಿತ ಸಮಾವೇಶಕ್ಕೆ ಸಮಯ ಬಂದಿಲ್ಲ'

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಂಗಳೂರು: 'ದಲಿತ ಸಮಾವೇಶ ನಡೆಸುವ ಸಂದರ್ಭ ಬಂದಿಲ್ಲ. ಸದ್ಯಕ್ಕೆ ಅಂತಹ ಉದ್ದೇಶ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಮಾವೇಶ ನಡೆಸಲು ಎಐಸಿಸಿ, ಹೈಕಮಾಂಡ್ ಅನುಮತಿ ಕೊಡಬೇಕು. ವರಿಷ್ಠರು ಸಮ್ಮತಿಸದ ಹೊರತು ಯಾವುದೇ ಸಮಾವೇಶ ನಡೆಸಲು ಆಗದು. ಸಂದರ್ಭ ಒದಗಿ ಬಂದಿಲ್ಲದ ಕಾರಣ ಈ ಬಗ್ಗೆ ಸತೀಶ ಜಾರಕಿಹೊಳಿಯವರೂ ಸೇರಿ ಯಾರೊಂದಿಗೂ ನಾನು ಚರ್ಚೆ ನಡೆಸಿಲ್ಲ' ಎಂದು ಸ್ಪಷ್ಟಪಡಿಸಿದರು.

ಯಾರೂ ಕರೆದಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏಪ್ರಿಲ್ 2ರಂದು ನವದೆಹಲಿಗೆ ತೆರಳುತ್ತಿರುವ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, 'ಕರ್ನಾಟಕ ಭವನದ ಹೊಸ ಕಟ್ಟಡ ಕಾಮಗಾರಿ ಉದ್ಘಾಟನಾ ಸಮಾರಂಭಕ್ಕೆ ಹೋಗುತ್ತಿದ್ದಾರೆ ಎಂದಷ್ಟೇ ಗೊತ್ತು. ಉಳಿದ ಯಾವ ವಿಚಾರವೂ ಗೊತ್ತಿಲ್ಲ. ಈ ಕಟ್ಟಡಕ್ಕೆ ಹಿಂದೆ ಶಂಕುಸ್ಥಾಪನೆ ಮಾಡಿದ್ದು ನಾನು. ಆದರೆ, ಸಮಾರಂಭಕ್ಕೆ ನನ್ನನ್ನು ಯಾರೂ ಆಹ್ವಾನಿಸಿಲ್ಲ. ಹಾಗಾಗಿ, ನಾನು ಹೋಗುತ್ತಿಲ್ಲ' ಎಂದು ಹೇಳಿದರು.

ನಿಗಮ ಮಂಡಳಿಗಳಿಗೆ ನೇಮಕ: 'ನಿಗಮ ಮಂಡಳಿಗಳಿಗೆ ನಿರ್ದೇಶಕರ ನೇಮಕ ಪಟ್ಟಿಯನ್ನು ಮೂರು ತಿಂಗಳ ಹಿಂದೆಯೇ ಕೆಪಿಸಿಸಿ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗೆ ಕೊಟ್ಟಿದ್ದೇನೆ. ಶಾಸಕರಿಂದ ಹೆಸರು ತೆಗೆದುಕೊಂಡು ಪಟ್ಟಿ ಕೊಡುವಂತೆ ಸೂಚನೆ ನೀಡಿದ್ದರು. ಅದರಂತೆ ಪಟ್ಟಿ ತಯಾರಿಸಿದ್ದೇವೆ' ಎಂದೂ ಹೇಳಿದರು.

'ಇ-ಕಾಮರ್ಸ್' ಪೋರ್ಟಲ್ ಶೀಘ್ರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಉತ್ಪನ್ನಗಳ ಮಾರಾಟಕ್ಕೆ 'ಇ-ಕಾಮರ್ಸ್' ಪೋರ್ಟಲ್ ತೆರೆಯಲು ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ತಯಾರಿ ನಡೆಸಿದೆ.

ಕೇಂದ್ರ ಸರ್ಕಾರದ ಜೆಮ್ ಪೋರ್ಟಲ್ ಮಾದರಿಯಲ್ಲಿ ರಾಜ್ಯ ಸರ್ಕಾರಿ ಸೇರಿದಂತೆ ಖಾಸಗಿ ಒಡೆತನದ ವಿವಿಧ ಉತ್ಪನ್ನಗಳ ಮಾರಾಟದ ಜತೆಗೆ ಖರೀದಿ ವ್ಯವಸ್ಥೆಗೂ ಇದು ವೇದಿಕೆಯಾಗಲಿದೆ.

ಎಂಎಸ್‌ಐಎಲ್‌ನ ಹಿರಿಯ ಅಧಿಕಾರಿಗಳ ಜೊತೆ ಈ ಸಂಬಂಧ ಶನಿವಾರ ಚರ್ಚೆ ನಡೆಸಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಪೋರ್ಟಲ್ ತೆರೆಯಲು ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

'ಇ-ಕಾಮರ್ಸ್ ಪೋರ್ಟಲ್ ಕಾರ್ಯಾಚರಣೆಯನ್ನು ನಾಲ್ಕು ಹಂತಗಳಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದು ಕಾರ್ಯರೂಪಕ್ಕೆ ಬಂದರೆ ಸರ್ಕಾರಿ ಇಲಾಖೆಗಳು ತಮಗೆ ಬೇಕಾಗುವ ಸಾಮಗ್ರಿಗಳನ್ನು ಯಾವುದೇ ಟೆಂಡರ್ ಇಲ್ಲದೆ ಇದರ ಮೂಲಕ ಖರೀದಿಸಬಹುದು. ಹಾಗೆಯೇ, ಮಾರಾಟ ಕೂಡ ಮಾಡಬಹುದು. ಕೇಂದ್ರ ಸರ್ಕಾರ ಮಟ್ಟದಲ್ಲಿ ಟೆಂಡರ್ ಇಲ್ಲದೆ ನೇರವಾಗಿ ಖರೀದಿಸಲು ಜೆಮ್ ಪೋರ್ಟಲ್ ಇದೆ' ಎಂದು ಸಚಿವರು ವಿವರಿಸಿದರು.

'ಮೊದಲ ಹಂತದಲ್ಲಿ ಎಂಎಸ್‌ಐಎಲ್ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡಲಾಗುವುದು. ಎರಡನೇ ಹಂತದಲ್ಲಿ ಮೈಸೂರು ಸ್ಯಾಂಡಲ್ ಸೋಪು, ಲಿಡ್ಕರ್ ಉತ್ಪನ್ನ, ಮೈಸೂರು ರೇಷ್ಮೆ ಬಟ್ಟೆ, ಕಾವೇರಿ ಎಂಪೋರಿಯಂ ಉತ್ಪನ್ನ, ನಂದಿನಿ ಉತ್ಪನ್ನ ಇತ್ಯಾದಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ಇದರಲ್ಲಿ ಎಂಎಸ್‌ಎಂಇ ಉತ್ಪನ್ನಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸುವ ಉತ್ಪನ್ನಗಳಿಗೂ ವೇದಿಕೆ ಕಲ್ಪಿಸಲಾಗುವುದು' ಎಂದರು.

'ಮೂರನೇ ಹಂತದಲ್ಲಿ ಗ್ರಾಹಕ ಉತ್ಪನ್ನಗಳು ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳು ಹಾಗೂ ನಾಲ್ಕನೇ ಹಂತದಲ್ಲಿ ತಾಜಾ ಉತ್ಪನ್ನಗಳನ್ನು ಇ-ಕಾಮರ್ಸ್ ಮೂಲಕ ಮಾರಾಟ ಮಾಡುವ ಉದ್ದೇಶ ಇದೆ' ಎಂದರು.

ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜಕುಮಾರ್, ನಿರ್ದೇಶಕ ಚಂದ್ರಪ್ಪ ಸಭೆಯಲ್ಲಿದ್ದರು.

ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ

ಗಡಿ ಕನ್ನಡಿಗರ ಸಮಸ್ಯೆ: ನೋಡಲ್ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಶಾಲಿನಿ ರಜನೀಶ್

ಬೆಂಗಳೂರು: ರಾಜ್ಯ ಹಾಗೂ ಹೊರ ರಾಜ್ಯಗಳ ಗಡಿ ಕನ್ನಡಿಗರ ಸಮಸ್ಯೆಗಳ ಪರಿಶೀಲನೆಗೆ ನೋಡಲ್ ಅಧಿಕಾರಿ ನೇಮಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದರು.

ಗಡಿ ಕನ್ನಡಿಗರ ಸಮಸ್ಯೆಗಳ ಕುರಿತು ಮುಖ್ಯ ಕಾರ್ಯದರ್ಶಿಗೆ ಮಾಹಿತಿ ನೀಡಿದ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಹೊರ ರಾಜ್ಯಗಳಲ್ಲಿರುವ 658 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿರುವುದಾಗಿ ತಿಳಿಸಿದರು.

ಗಡಿ ಭಾಗದ ವಿದ್ಯಾರ್ಥಿಗಳು ಮತ್ತು ಹೊರನಾಡ ಕನ್ನಡಿಗರು ನಿತ್ಯ ಅನುಭವಿಸುವ ಶೈಕ್ಷಣಿಕ, ಔದ್ಯೋಗಿಕ ಹಾಗೂ ಮೂಲ ಸೌಕರ್ಯಗಳ ಸಮಸ್ಯೆಗಳನ್ನು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದ ಅವರು, ಈ ಸಮಸ್ಯೆಗಳನ್ನು ಪರಿಹರಿಸಲು ಇಲಾಖಾವಾರು ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಗಡಿ ಭಾಗಗಳಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಶಿಕ್ಷಕರ ನೇಮಕ, ವಸತಿ ಶಾಲೆಗಳಲ್ಲಿ ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ ಪ್ರವೇಶ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೊರ ರಾಜ್ಯದವರಿಗೂ ಸಮಾನ ಅವಕಾಶ, ಹೊರನಾಡ ಕನ್ನಡಿಗರಿಗೆ ಮೀಸಲಾತಿ ನೀಡಲು ನಿಯಮಗಳ ಪರಿಷ್ಕರಣೆ, ಹೊರನಾಡ ವಿದ್ಯಾರ್ಥಿಗಳು ಮತ್ತು ಪತ್ರಕರ್ತರಿಗೆ ಸರ್ಕಾರಿ ಬಸ್‌ಗಳಲ್ಲಿ ಸಂಚರಿಸಲು ರಿಯಾಯಿತಿ ಬಸ್ ಪಾಸ್ ವ್ಯವಸ್ಥೆ ಮತ್ತಿತರ ಬೇಡಿಕೆಗಳ ಕುರಿತು ಪ್ರಸ್ತಾಪಿಸಿದರು. ಅಲ್ಲದೆ, ತ್ವರಿತ ಪರಿಹಾರ ಒದಗಿಸಬೇಕು ಎಂದೂ ಕೋರಿದರು.

ಅದಕ್ಕೆ ಪ್ರತಿಕ್ರಿಯಿಸಿದ ಶಾಲಿನಿ ರಜನೀಶ್, 'ರಾಜ್ಯ ಹಾಗೂ ಹೊರ ರಾಜ್ಯಗಳ ಗಡಿ ಕನ್ನಡಿಗರ ಸಮಸ್ಯೆಗಳ ಪರಿಶೀಲನೆಗೆ ಪ್ರತಿಯೊಂದು ಇಲಾಖೆಗೆ ತಲಾ ಒಬ್ಬೊಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಪ್ರತಿ ಗಡಿ ಜಿಲ್ಲೆಯಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಗಡಿ ಸಮಸ್ಯೆಗಳ ಕುರಿತು ಚರ್ಚಿಸಬೇಕು. ಈ ಸಭೆಗಳಿಗೆ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಬೇಕು. ಗಡಿ ಜಿಲ್ಲೆಗಳ ಉಸ್ತುವಾರಿ ಕಾರ್ಯದರ್ಶಿಗಳು ಕೂಡ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು' ಎಂದು ಸೂಚನೆ ನೀಡಿದರು.

ಕೇರಳ ರಾಜ್ಯದ ಗಡಿ ಪ್ರದೇಶಗಳ ಹೆಸರುಗಳನ್ನು ಮಲಯಾಳೀಕರಣ ಮಾಡುತ್ತಿರುವ ಬಗ್ಗೆ ಇರುವ ಕಾನೂನಾತ್ಮಕ ಅವಕಾಶಗಳನ್ನು ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಗೆ ಮುಖ್ಯ ಕಾರ್ಯದರ್ಶಿ ಸೂಚಿಸಿದರು.

ವಿವಿಧ ವಸತಿ ನಿಲಯಗಳ ಪ್ರವೇಶಾತಿಗೆ ಹೊರ ರಾಜ್ಯದ ಗಡಿ ಕನ್ನಡಿಗರಿಗೆ ಅವಕಾಶ ಮಾಡಿ ಕೊಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಭರವಸೆ ನೀಡಿದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ತೆರಿಗೆ ವಂಚಕರ ವಾಹನಗಳ ಬೇಟೆ ಆರಂಭ

ಪುದುಚೇರಿ ನೋಂದಣಿ ಸಂಖ್ಯೆ ಹೊಂದಿದ ವಾಹನಗಳ ಮೇಲೆ ಹದ್ದಿನ ಕಣ್ಣು

• ಚಂದ್ರಕಾಂತ ಮಸಾನಿ

ರಾಯಚೂರು: ರಾಜ್ಯದಲ್ಲಿ ವಾಹನ ಖರೀದಿ ಮೇಲಿನ ಅಧಿಕ ಶುಲ್ಕದಿಂದ ತಪ್ಪಿಸಿಕೊಳ್ಳಲು ಪುದುಚೇರಿಯಲ್ಲಿ ವಾಹನ ಖರೀದಿಸಿರುವ ಮಾಲೀಕರ ವಾಹನಗಳ ಮೇಲೆ ಪ್ರಾದೇಶಿಕ ಸಾರಿಗೆ ಇಲಾಖೆ ಹದ್ದಿನ ಕಣ್ಣು ಇಟ್ಟಿದೆ. ಕಳೆದ ಒಂದು ವಾರದಲ್ಲೇ ಕಲಬುರಗಿ ವಿಭಾಗದಲ್ಲಿ 54 ಐಶಾರಾಮಿ ವಾಹನಗಳನ್ನು ವಶಕ್ಕೆ ಪಡೆದಿದೆ.

ಆರ್‌ಟಿಒ ಅಧಿಕಾರಿಗಳು ಕಾರ್ಯಾಚರಣೆಗೆ ಇಳಿದಿದ್ದು, ಬೀದರ್ ಜಿಲ್ಲೆಯಲ್ಲಿ 28 ವಾಹನಗಳು, ಕಲಬುರಗಿ 16, ರಾಯಚೂರು ಜಿಲ್ಲೆಯಲ್ಲಿ ಮೂರು ಐಷಾರಾಮಿ ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ. ವಾಹನದ ಖರೀದಿ ದಾಖಲೆ, ಪುದುಚೇರಿಯಲ್ಲೇ ವಾಸ ಇರುವ ದಾಖಲೆ ಹಾಗೂ ಕರ್ನಾಟಕದಲ್ಲಿ ವಾಸವಾಗಿರುವ ದಾಖಲೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ.

ವಶ ಪಡಿಸಿಕೊಂಡ ವಾಹನಗಳ ಸಂಖ್ಯೆ

ಕಲಬುರಗಿ	16
ಭಾಲ್ಕಿ	12
ಬೀದರ್	11
ಬಸವಕಲ್ಯಾಣ	5
ಕೊಪ್ಪಳ	4
ಯಾದಗಿರಿ	3
ರಾಯಚೂರು	3
ಕಲಬುರಗಿ ವಿಭಾಗ	54

ವಾಹನ ಖರೀದಿ ಮೇಲಿನ ತೆರಿಗೆ ಉಳಿಸಲು ಪುದುಚೇರಿಯ ನಕಲಿ ವಿಳಾಸ ನೀಡಿದ್ದವರು ಈಗ ಪೇಚಿಗೆ ಸಿಲುಕಿದ್ದಾರೆ. ಆರ್‌ಟಿಇಒ ಅಧಿಕಾರಿಗಳು ಆಧಾರ್, ಡ್ರೈವಿಂಗ್ ಲೈಸೆನ್ಸ್ ಹಾಗೂ ಪುದುಚೇರಿಯಲ್ಲಿ ನಿಜವಾಗಿಯೂ ವ್ಯವಹಾರ ನಡೆಸುತ್ತಿದ್ದರೆ ಅದರ ದಾಖಲೆ ಪರಿಶೀಲಿಸುತ್ತಿರುವ ಕಾರಣ ಮಾಲೀಕರು ಕರ್ನಾಟಕ ಸರ್ಕಾರಕ್ಕೆ ಲಕ್ಷಾಂತರ ರೂ. ಶುಲ್ಕ ಕಟ್ಟುವುದು ಅನಿವಾರ್ಯ.

ರಾಜ್ಯದಲ್ಲಿ ₹10 ಲಕ್ಷ ಬೆಲೆಯ ಹೊಸ ಕಾರಿಗೆ ₹1.80 ಲಕ್ಷ ತೆರಿಗೆ ಹಾಗೂ ₹20 ಲಕ್ಷದ ಕಾರಿಗೆ ₹3.60 ಲಕ್ಷ ತೆರಿಗೆ ಪಾವತಿಸಬೇಕಾಗಲಿದೆ. ಒಂದು ವೇಳೆ ಪುದುಚೇರಿಯಲ್ಲಿ ಎರಡು ವರ್ಷ ಬಳಸಿ ಅದೇ ಕಾರನ್ನು ಕರ್ನಾಟಕಕ್ಕೆ ತಂದು ಒಂದು ವರ್ಷದಿಂದ ಇಲ್ಲಿಯೇ ಓಡಾಡಿಸುತ್ತಿದ್ದರೂ ಪ್ರಸಕ್ತ ವರ್ಷದ ವಾಹನದ ಮೌಲ್ಯ ಆಧರಿಸಿ ತೆರಿಗೆ ಕಟ್ಟಿಸಿಕೊಳ್ಳುವ ಕಾರ್ಯಾಚರಣೆ ಶುರುವಾಗಿದೆ.

'ಕಲ್ಯಾಣ ಕರ್ನಾಟಕದಲ್ಲಿ ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಪುದುಚೇರಿಯಲ್ಲಿ ನೋಂದಾಯಿಸಿದ ಕಾರುಗಳ ಸಂಖ್ಯೆ ಅಧಿಕ ಇವೆ. ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುವಲ್ಲಿ ರಾಜಕಾರಣಿಗಳು ಮುಂಚೂಣಿಯಲ್ಲಿದ್ದಾರೆ' ಎನ್ನುತ್ತಾರೆ ಬೀದರ್‌ನ ಆರ್‌ಟಿಒ ಕಚೇರಿಯ ಅಧಿಕಾರಿಗಳು.

ಕಲಬುರಗಿಯಲ್ಲಿ 16 ಕಾರುಗಳ ಮಾಲೀಕರಿಂದ ದಂಡ ರೂಪದಲ್ಲಿ ತೆರಿಗೆ ವಸೂಲಿ ಮಾಡಲಾಗಿದೆ. ಬೀದರ್‌ನಲ್ಲಿ 11 ಹಾಗೂ ರಾಯಚೂರಿನಲ್ಲಿ ಮೂರು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚೆಕ್‌ಪೋಸ್ಟ್‌ನಿಂದ ಮಾಹಿತಿ: ಕಾರು ಖರೀದಿ ವೇಳೆ ಕೆಲವರು ಪಾಂಡಿಚೇರಿಯ ನಕಲಿ ವಿಳಾಸ ಕೊಟ್ಟಿದ್ದಾರೆ. ಮಾಲೀಕರ ಆಧಾರ್, ಬ್ಯಾಂಕ್ ಖಾತೆ, ರಹವಾಸಿ ಪತ್ರಗಳು ಎಲ್ಲವೂ ಕರ್ನಾಟಕದ್ದೇ ಆಗಿರುವ ಕಾರಣ ತೆರಿಗೆ ವಂಚಕರು ಸುಲಭವಾಗಿ ಆರ್‌ಟಿಇ ಅಧಿಕಾರಿಗಳ ಕೈಗೆ ಸಿಕ್ಕಿಕೊಳ್ಳುತ್ತಿದ್ದಾರೆ.

ಆರ್‌ಟಿಒ ಚೆಕ್‌ಪೋಸ್ಟ್‌ನಲ್ಲಿ ಸಂಚರಿಸಿದ ತಕ್ಷಣ ನಂಬರ್ ಸ್ಕ್ಯಾನ್ ಮಾಡಿ ನೋಡಲಾಗುತ್ತಿದೆ. ಅದರಲ್ಲಿ ವಾಹನದ ವಿವರ ಕಾಣಸಿಗುತ್ತಿದೆ. ಮಾಲೀಕರು ಕೊಡುವ ಪಾಂಡಿಚೇರಿಯಲ್ಲಿನ ವಾಸದ ದಾಖಲೆ ಹಾಗೂ ಕರ್ನಾಟಕದಲ್ಲಿರುವ ವಾಸ ದಾಖಲೆಗಳಿಗೂ ತಾಳೆಯಾಗುತ್ತಿಲ್ಲ. ಹೀಗಾಗಿ ಮಾಲೀಕರಿಂದ ತೆರಿಗೆ ಕಟ್ಟಿಸಿಕೊಳ್ಳಲಾಗುತ್ತಿದೆ.

ಹಾವೇರಿ ಹಾಲು ಒಕ್ಕೂಟದಿಂದ ದರ ಪರಿಷ್ಕರಣೆ • ರೈತರ ಆಕ್ರೋಶ

ಉತ್ಪಾದಕರಿಗೆ ನೀಡುತ್ತಿದ್ದ ದರ ಕಡಿತ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾಲಿನ ದರ ಏರಿಕೆ ಬೆನ್ನಲ್ಲೇ ಉತ್ಪಾದಕರು ಹಾಗೂ ಸಂಘಗಳಿಗೆ ನೀಡುತ್ತಿದ್ದ ಶೇಖರಣೆ ದರ ದಿಢೀರ್ ಕಡಿತ ಮಾಡಲಾಗಿದ್ದು, ಹಾವೇರಿ ಹಾಲು ಒಕ್ಕೂಟದ ಈ ಕ್ರಮಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಬಹುತೇಕ ರೈತರಿಗೆ ಪಶುಸಂಗೋಪನೆ ಜೀವನಕ್ಕೆ ಆಧಾರವಾಗಿದೆ. ಆಕಳು, ಎಮ್ಮೆಯ ಹಾಲನ್ನು ಸಂಘಗಳ ಡೇರಿಗಳಿಗೆ ನೀಡುತ್ತಾರೆ. ದರ ಕಡಿತದಿಂದ, ಉತ್ಪಾದಕರು ಮತ್ತು ಸಂಘದವರು ನ್ಯಾಯಯುತ ಬೆಲೆಯಿಂದ ವಂಚಿತರಾಗಿದ್ದಾರೆ.

'ಆಕಳು ಹಾಲಿನ ದರವನ್ನು ಉತ್ಪಾದಕರಿಗೆ ₹27 (ಲೀಟರ್‌ಗೆ) ಮತ್ತು ಸಂಘಗಳಿಗೆ ₹ 28.05 ದರ ಪರಿಷ್ಕರಿಸಲಾಗಿದೆ. ಎಮ್ಮೆ ಹಾಲಿನ ದರವನ್ನು ಉತ್ಪಾದಕರಿಗೆ ₹39.50 ಹಾಗೂ ಸಂಘಗಳಿಗೆ ₹ 40.55 ದರ ಪರಿಷ್ಕರಣೆ ಮಾಡಲಾಗಿದೆ' ಎಂದು ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಅಶೋಕ ಗೌಡ ಅವರು ಮಾರ್ಚ್ 27ರಂದು ಆದೇಶ ಹೊರಡಿಸಿದ್ದಾರೆ.

ಮುಖ್ಯಾಂಶಗಳು

- ಹಾವೇರಿ ಹಾಲು ಒಕ್ಕೂಟ ಆದೇಶ
- ದಿಢೀರ್ ₹ 3.50 ಕಡಿತ
- ಉತ್ಪಾದಕರ ಶ್ರಮಕ್ಕೆ ಬೆಲೆ ಇಲ್ಲವೇ: ರೈತರ ಪ್ರಶ್ನೆ



'₹ 18 ಕೋಟಿ ನಷ್ಟ'

'ಹಾವೇರಿ ಹಾಲು ಒಕ್ಕೂಟ ಸದ್ಯದ ಸ್ಥಿತಿಯಲ್ಲಿ ₹18 ಕೋಟಿ ನಷ್ಟದಲ್ಲಿದೆ. ಆಡಳಿತ ಮಂಡಳಿ ತೀರ್ಮಾನದಂತೆ ಉತ್ಪಾದಕರು ಹಾಗೂ ಸಂಘಗಳಿಗೆ ನೀಡುತ್ತಿದ್ದ ದರವನ್ನು ಕಡಿತ ಮಾಡಲಾಗಿದೆ' ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಅಶೋಕ ಗೌಡರ ತಿಳಿಸಿದರು.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ದರ ಕಡಿತ ಬಗ್ಗೆ ಉತ್ಪಾದಕರು ಆತಂಕಪಡುವ ಅಗತ್ಯವಿಲ್ಲ. ಏ. 1ರಿಂದ ಪುನಃ ₹4 ದರ ಹೆಚ್ಚಳಕ್ಕೆ ಕೆಎಂಎಫ್ ಈಗಾಗಲೇ ಆದೇಶ ಹೊರಡಿಸಿದೆ. ಹಾವೇರಿಯ ಉತ್ಪಾದಕರಿಗೆ ಹಳೇ ದರಕ್ಕಿಂತಲೂ 50 ಪೈಸೆ ಹೆಚ್ಚುವರಿ ದರ ಸಿಗಲಿದೆ' ಎಂದರು.

2024ರ ಅ.10ರ ಹಾಲು ಒಕ್ಕೂಟದ ಆದೇಶದಂತೆ, ಆಕಳು ಹಾಲಿಗೆ ಉತ್ಪಾದಕರಿಗೆ ₹30.50 (ಪ್ರತಿ ಲೀಟರ್‌ಗೆ) ಹಾಗೂ ಸಂಘಗಳಿಗೆ ₹31.55 ದರ ನೀಡಲಾಗುತ್ತಿತ್ತು. ಎಮ್ಮೆ ಹಾಲಿಗೆ ಉತ್ಪಾದಕರಿಗೆ ₹43 ಹಾಗೂ ಸಂಘಗಳಿಗೆ ₹44.05 ದರ ನೀಡಲಾಗುತ್ತಿತ್ತು. ಇದೀಗ ಹಾಲಿನ ಶೇಖರಣೆ ದರವನ್ನು ₹3.50 ಕಡಿಮೆ ಮಾಡಿರುವುದು ಉತ್ಪಾದಕರು ಹಾಗೂ ಸಂಘಗಳ ಕೆಂಗಣ್ಣಿಗೆ ಗುರಿಯಾಗಿದೆ.

'ಹಾಲಿನ ದರ ಏರಿಸಲಾಗಿದೆ. ಉತ್ಪಾದಕರಿಗೆ ನೀಡುವ ದರ ಕಡಿತ ಮಾಡಲಾಗಿದೆ. ಇದರ ಉದ್ದೇಶವೇನು? ಗ್ರಾಹಕರಿಂದ ಸಂಗ್ರಹಿಸಿದ ಹಣ ಎಲ್ಲಿಗೆ ಹೋಗುತ್ತದೆ. ಉತ್ಪಾದಕರ ಶ್ರಮಕ್ಕೆ ಬೆಲೆ ಇಲ್ಲವೇ' ಎಂದು ಹಾವೇರಿ ತಾಲ್ಲೂಕಿನ ಹಾಲು ಉತ್ಪಾದಕ ಶಂಭಣ್ಣ ತಿಳಿಸಿದರು.

‘ಬದುಕು ಕೊಟ್ಟ ಹೋಳಿಗೆ’ ಮಹಿಳೆಯರ ಸಾಧನೆಗೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಂಡಿ ತಾಲ್ಲೂಕಿನ ಬಬಲಾದ ಗ್ರಾಮದ ಮಹಿಳೆಯರು ‘ಶಕ್ತಿ’ ಯೋಜನೆಯಡಿ ಸರ್ಕಾರಿ ಬಸ್‌ನಲ್ಲಿ ನಿತ್ಯ ಬೆಂಗಳೂರಿಗೆ ಪ್ರಯಾಣಿಸಿ, ಅಲ್ಲಿ ಹೋಳಿಗೆ ಮಾರಾಟ ಮಾಡಿ ಆದಾಯ ಗಳಿಸುತ್ತಿರುವ ಕುರಿತ ‘ಪ್ರಜಾವಾಣಿ’ ವಿಶೇಷ ವರದಿ ಉಲ್ಲೇಖಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳೆಯರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಶಕ್ತಿ ಯೋಜನೆ’ ಬದುಕು ಕೊಟ್ಟ ಹೋಳಿಗೆ’ ವರದಿಯನ್ನು ‘ಎಕ್ಸ್‌’ನಲ್ಲಿ ಲಗತ್ತಿಸಿರುವ ಅವರು, ‘ಹೋಳಿಗೆ ವ್ಯಾಪಾರ ಮಾಡಿ ಕೈತುಂಬ ಆದಾಯ ಗಳಿಸಿ, ನೆಮ್ಮದಿಯ ಬದುಕು ಕಟ್ಟಿಕೊಂಡ ‘ಒಡಲ ಧ್ವನಿ’ ಸಂಘದ ಮಹಿಳೆಯರ ಕತೆ ಸ್ಫೂರ್ತಿದಾಯಕ’ ಎಂದಿದ್ದಾರೆ.

‘ಹೆಂಡತಿ ದೇವಸ್ಥಾನಕ್ಕೆ ಹೋದವಳು ತಿಂಗಳಾದಾರೂ ಬರಲಿಲ್ಲ, ‘ಶಕ್ತಿ’ ಯೋಜನೆ ಬಂದ ಮೇಲೆ ಹೆಂಗಸರು ಮನೆಯಲ್ಲೇ ಇರಲ್ಲ... ಎಂಬ ಹೊಟ್ಟೆ ತುಂಬಿದ ಮಂದಿಯ ವ್ಯವಸ್ಥಿತ ಅಪಪ್ರಚಾರಗಳ ಬದಲು ಇಂತಹ ಸುದ್ದಿಗಳು ಹೆಚ್ಚು ಜನರನ್ನು ತಲುಪಬೇಕು, ಆ ಮೂಲಕ ಮತ್ತಷ್ಟು ಮಹಿಳೆಯರು ಬದುಕಿನ ಹೊಸ ಹಾದಿ ಕಂಡುಕೊಳ್ಳುವಂತಾಗಬೇಕು. ಆಗಲೇ ಯೋಜನೆ ಉದ್ದೇಶ ಪೂರ್ಣ ಸಾಕಾರವಾಗಲಿದೆ’ ಎಂದಿದ್ದಾರೆ.



ಸಿ.ಎಂ ‘ಎಕ್ಸ್’ ಖಾತೆಯಲ್ಲಿ ವರದಿ ಹಂಚಿಕೊಂಡಿದ್ದಾರೆ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಖುಷಿಯಾಗಿದೆ. ಅವರು ಜಾರಿಗೊಳಿಸಿದ ಶಕ್ತಿ ಯೋಜನೆಯಿಂದ ನಾವು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಅವರಿಗೆ ಧನ್ಯವಾದ. ‘ಶಕ್ತಿ’ ಯೋಜನೆ ಇಲ್ಲದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ’ ಎಂದು ‘ಒಡಲ ಧ್ವನಿ’ ಸಂಘದ ಕಾರ್ಯದರ್ಶಿ ಭುವನೇಶ್ವರಿ ಕಾಂಬಳೆ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಈಗಿನ ಹನಿಟ್ರ್ಯಾಪ್ ಪ್ರಕರಣದಲ್ಲೂ ಇದೇ ತಂಡ ಕೆಲಸ ● ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ

‘ರಮೇಶ ಹನಿಟ್ರ್ಯಾಪ್ ರೂವಾರಿ ಬಿವೈವಿ, ಡಿಕೆಶಿ’

ಪ್ರಜಾವಾಣಿ ವಾರ್ತೆ

ಬಸನಗೌಡ ಪಾಟೀಲ ಯತ್ನಾಳ

ಬೆಂಗಳೂರು: ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಅವರನ್ನು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸಿದ್ದೇ ಬಿಜೆಪಿ ರಾಜ್ಯ ಘಟಕದ ಇಂದಿನ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಅಂದು ಜಾರಕಿಹೊಳಿ ಅವರನ್ನು ಸಿಲುಕಿಸುವಲ್ಲಿ ಈ ಇಬ್ಬರು ಪ್ರಮುಖ ರೂವಾರಿಗಳಾಗಿದ್ದರು. ಈಗಿನ ಹನಿಟ್ರ್ಯಾಪ್ ಪ್ರಕರಣದಲ್ಲೂ ಇದೇ ತಂಡ ಕೆಲಸ ಮಾಡಿದೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಹನಿಟ್ರ್ಯಾಪ್ ಬಗ್ಗೆ ಸದನದಲ್ಲೇ ಹೇಳಿದ್ದಾರೆ. ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಉನ್ನತ ತನಿಖೆ ನಡೆಸಬೇಕು. ಆಗ ಸತ್ಯ ಹೊರಬರುತ್ತದೆ ಎಂದರು.

ಶನಿ ದೇವರಿಗೆ ಮೊರೆ

ಬಿಜೆಪಿಯಿಂದ ಉಚ್ಚಾಟನೆಗೊಂಡ ಯತ್ನಾಳ ಅವರು, ಬೆಂಗಳೂರಿನ ಮಿಲ್ಕ್ ಕಾಲೊನಿಯ ಶನಿ ಮಹಾತ್ಮ ದೇವಸ್ಥಾನಕ್ಕೆ ಶನಿವಾರ ಭೇಟಿ ನೀಡಿದರು. ಒಬ್ಬರೇ ದೇವರ ಮುಂದೆ ಕುಳಿತು ಅರ್ಧ ಗಂಟೆ ಪ್ರಾರ್ಥನೆ ಸಲ್ಲಿಸಿದರು.

‘ಎರಡೂವರೆ ವರ್ಷಗಳಿಂದ ಸಮಸ್ಯೆ ಇತ್ತು. ಈಗ ಶನಿ ದೇವರ ಸ್ಥಾನ ಬದಲಾಗಿದೆ. ಹಿಂದೂ ಸಂಪ್ರದಾಯದ ಹೊಸ ವರ್ಷಕ್ಕೆ ಒಳ್ಳೆಯ ದಿನಗಳು ಆರಂಭವಾಗುತ್ತಿವೆ. ತಮ್ಮ ಭವಿಷ್ಯ ಉಜ್ವಲವಾಗಲಿದೆ’ ಎಂದು ಯತ್ನಾಳ ಹೇಳಿದರು.

‘ಮಧುಬಲೆ’ ಪ್ರಕರಣಗಳಲ್ಲಿ ಸಾಮಾನ್ಯರು ಭಾಗಿಯಾಗಿದ್ದರೆ, ತಕ್ಷಣ ತನಿಖೆ ನಡೆಯುತಿತ್ತು. ಬಂಧನ ಆಗುತ್ತಿತ್ತು. ಪ್ರಮುಖರು ಭಾಗಿ ಆಗಿರುವ ಕಾರಣ ಬಂಧಿಸಲು ಸರ್ಕಾರಕ್ಕೆ ಭಯವಾಗಿದೆ
ಜಗದೀಶ ಶೆಟ್ಟರ್, ಸಂಸದ

ಯಡಿಯೂರಪ್ಪ, ವಿಜಯೇಂದ್ರಗೆ ಬುದ್ಧಿ ಕಲಿಸುವೆ: ‘ಬಿಜೆಪಿಯಿಂದ ತಮ್ಮನ್ನು ಉಚ್ಚಾಟಿಸಲು ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರೇ ಕಾರಣ. ಸತ್ಯ ಮತ್ತು ನೇರ ಮಾತು ಸಹಿಸಲು ಅವರಿಗೆ ಸಾಧ್ಯವಾಗಲಿಲ್ಲ. ಈ ಇಬ್ಬರಿಗೂ ಬುದ್ಧಿಕಲಿಸದೆ ಬಿಡುವುದಿಲ್ಲ. ಅವರ ಭ್ರಷ್ಟಾಚಾರ, ಕುಟುಂಬ ರಾಜಕಾರಣದ ವಿರುದ್ಧ ಜನಜಾಗೃತಿ ಮೂಡಿಸಲು ರಾಜ್ಯದ ಎಲ್ಲೆಡೆ ಪ್ರವಾಸ ಮಾಡುತ್ತೇನೆ. ಸನಾತನ ಧರ್ಮ, ಹಿಂದೂ ಕಾರ್ಯಕರ್ತರಿಗಾಗಿ ಹೋರಾಟ ನಡೆಸುತ್ತೇನೆ. ಬಿಜೆಪಿಯನ್ನು ಮತ್ತೆ ಹಿಂದುತ್ವದ ಹಳಿಗೆ ತರುತ್ತೇನೆ’ ಎಂದರು.

ಬಿ.ವೈ. ರಾಘವೇಂದ್ರ ಹೊರತುಪಡಿಸಿ ಬಿಜೆಪಿಯ ಬಹುತೇಕ ಸಂಸದರು ವಿಜಯೇಂದ್ರ ವಿರುದ್ಧ ಇದ್ದಾರೆ. ವಿಜಯೇಂದ್ರ ಬಂಡವಾಳ ಕೆಲವೇ ದಿನಗಳಲ್ಲಿ ಗೊತ್ತಾಗುತ್ತದೆ. ಅಪ್ಪ–ಮಕ್ಕಳ ಕುಟುಂಬವನ್ನು ರಾಜಕೀಯದಿಂದ ದೂರ ಮಾಡುತ್ತೇನೆ. ವರಿಷ್ಠರು ಅವರನ್ನೇ ಮುಂದೊಂದು ದಿನ ಪಕ್ಷದಿಂದ ತೆಗೆಯಲಿದ್ದಾರೆ. ನಾನು ಮತ್ತೆ ಗೌರವಯುತವಾಗಿ ಬಿಜೆಪಿಗೆ ಮರಳುತ್ತೇನೆ. ಹಾಗಂತ ಮರುಪರಿಶೀಲನೆಗೆ ಮನವಿ ಮಾಡುವುದಿಲ್ಲ, ದೆಹಲಿಗೂ ಹೋಗುವುದಿಲ್ಲ ಎಂದು ಹೇಳಿದರು.

‘ರಾಜ್ಯದ ಯಾವ ಲಿಂಗಾಯತರೂ ಅವರ ಜತೆಗಿಲ್ಲ. ಯಡಿಯೂರಪ್ಪ ಮನೆಯಲ್ಲಿ ಕುಳಿತು ಮಗನನ್ನು ಮುಖ್ಯಮಂತ್ರಿ ಮಾಡುವ ಕನಸು ಕಾಣುತ್ತಿದ್ದಾರೆ. ಅದು ಆಗದ ಮಾತು. 2028ಕ್ಕೆ ನಾನೇ ಈ ರಾಜ್ಯದ ಮುಖ್ಯ–ಮಂತ್ರಿಯಾಗುವೆ. ಈ ಮಾತನ್ನು ಅವರು ಸವಾಲಾಗಿ ಸ್ವೀಕರಿಸಲಿ’ ಎಂದು ಪಂಥಾಹ್ವಾನ ನೀಡಿದರು.

ಪ್ರಯತ್ನಕ್ಕೆ ಸ್ಪಂದಿಸದ ಯತ್ನಾಳ: ವಿಜಯೇಂದ್ರ

ಬಿ.ವೈ. ವಿಜಯೇಂದ್ರ

‘ಬಸನಗೌಡ ಪಾಟೀಲ ಯತ್ನಾಳ ಅವರು ನಿರಂತರವಾಗಿ ಟೀಕೆ ಮಾಡಿದರೂ ಪಕ್ಷದ ಹಿತಕ್ಕಾಗಿ ಅವರನ್ನು ಭೇಟಿಯಾಗಿ ಗೊಂದಲ ಸರಿಪಡಿಸುವ ಕೆಲಸ ಮಾಡಿದೆ. ಅವರಿಂದ ಸ್ಪಂದನೆ ದೊರೆಯಲಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅಧ್ಯಕ್ಷನಾಗಿ ಎಲ್ಲವನ್ನೂ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಸದನದ ಅವಧಿಯಲ್ಲಿ ಭೋಜನಕೂಟಕ್ಕೂ ಅವರನ್ನು ಆಹ್ವಾನಿಸಿದ್ದೆ. ಕೇಂದ್ರದ ವರಿಷ್ಠರೂ ಹಲವು ಬಾರಿ ನೋಟಿಸ್ ಕೊಟ್ಟು ತಿದ್ದುವ ಪ್ರಯತ್ನ ಮಾಡಿದ್ದರು. ಸಾಕಷ್ಟು ಅವಕಾಶ ನೀಡಿದ್ದರು. ಅಂತಿಮವಾಗಿ ಉಚ್ಚಾಟನೆಯ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದರು.

‘ಯಡಿಯೂರಪ್ಪ ಅವರು ಹಲವರನ್ನು ಬೆಳೆಸಿದ್ದಾರೆ. ತಮ್ಮ ಜೀವನದಲ್ಲಿ ಮತ್ತೊಬ್ಬರನ್ನು ತುಳಿಯುವ ಕೆಲಸ ಮಾಡಿಲ್ಲ. ರಾಜ್ಯದಲ್ಲಿ ಬಿಜೆಪಿಯನ್ನು ಸ್ವಂತ ಬಲದಲ್ಲಿ ಅಧಿಕಾರಕ್ಕೆ ತರುವ ಜವಾಬ್ದಾರಿಯನ್ನು ವರಿಷ್ಠರು ನನಗೆ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಮಾಡಬೇಕು ಎಂದಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಶಾಲಾ ಪ್ರವೇಶ ವಯೋಮಿತಿ: ವರದಿ ನಂತರ ನಿರ್ಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸಿನ ಆಧಾರದಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯೋಮಿತಿ ಸಡಿಲಗೊಳಿಸುವ ಕುರಿತು ನಿರ್ಧರಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಒಂದನೇ ತರಗತಿ ಪ್ರವೇಶಕ್ಕೆ 2025–26ನೇ ಸಾಲಿನಿಂದ ಆರು ವರ್ಷ ಕಡ್ಡಾಯಗೊಳಿಸಲಾಗಿದೆ. ವಯೋಮಿತಿ ಸಡಿಲಿಸುವಂತೆ ಹಲವು ಪೋಷಕರು ಮನವಿ ಮಾಡಿದ್ದಾರೆ. ರಾಜ್ಯ ಶಿಕ್ಷಣ ನೀತಿ ಆಯೋಗ ವರದಿ ನೀಡಿದ ನಂತರ ಮುಖ್ಯಮಂತ್ರಿ ಜತೆ ಚರ್ಚಿಸಿ, ಖಚಿತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಹಿಂದಿನ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಭಾಗವಾಗಿ ಶಾಲಾ ಪ್ರವೇಶದ ವಯೋಮಿತಿಯನ್ನು ಆರು ವರ್ಷಕ್ಕೆ ನಿಗದಿ ಮಾಡಿತ್ತು. ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಎನ್‌ಇಪಿ ರದ್ದು ಮಾಡಲು ಕ್ರಮ ಕೈಗೊಂಡಿದೆ. ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ರೂಪಿಸಲು ಆಯೋಗ ರಚಿಸಿದೆ. ಪೋಷಕರ ವಿನಂತಿಯನ್ನು ಆಯೋಗದ ಗಮನಕ್ಕೂ ತರಲಾಗಿದೆ ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ 2022ರ ನವೆಂಬರ್‌ನಲ್ಲಿ ಹೊರಡಿಸಿದ ಆದೇಶದ ಪ್ರಕಾರ, ಜೂನ್ 1, 2025ರ ಒಳಗೆ ಆರು ವರ್ಷಗಳನ್ನು ಪೂರ್ಣಗೊಳಿಸಿದ ಮಕ್ಕಳು 2025-26 ಶೈಕ್ಷಣಿಕ ವರ್ಷಕ್ಕೆ ಒಂದನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

ಯುಗಾದಿ ಮುನ್ನಾದಿನವಾದ ಶನಿವಾರ ಕಲಬುರಗಿಯ ಮಾರುಕಟ್ಟೆಯಲ್ಲಿ ಖರೀದಿ ಸಂಭ್ರಮ
ಪ್ರಜಾವಾಣಿ ಚಿತ್ರ

ರಂಜಾನ್ ಹಿನ್ನಲೆಯಲ್ಲಿ ಬೆಳಗಾವಿಯ ಖಡೇಬಜಾರ್ ಮಾರುಕಟ್ಟೆ ಪ್ರದೇಶ ಅಲಂಕೃತಗೊಂಡಿತ್ತು
ಚಿತ್ರ: ಏಕನಾಥ ಅಗಸಿಮನಿ

ರಾಜೇಂದ್ರ ಕೊಲೆ ಯತ್ನ: ತನಿಖೆಗೆ ತಂಡ

ತುಮಕೂರು: ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಕೊಲೆಗೆ ಸಂಚು ನಡೆಸಿದ ಆರೋಪ ಕುರಿತ ಪ್ರಕರಣದ ತನಿಖೆಗೆ ಮಧುಗಿರಿ ವಿಭಾಗದ ಡಿವೈಎಸ್‌ಪಿ ಮಂಜುನಾಥ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.

ಶಿರಾ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ, ಕ್ಯಾತ್ಸಂದ್ರ ಠಾಣೆಯ ಪಿಎಸ್‌ಐ ಚೇತನ್ ಅವರನ್ನು ಒಳಗೊಂಡ ತಂಡ ಆರೋಪಿಗಳ ಪತ್ತೆಗೆ ಬಲೆ ಬೀಸಿದೆ.

‘ನನ್ನ ಕೊಲೆಗೆ ಸಂಚು ರೂಪಿಸಿದ್ದು, ತನಿಖೆ ನಡೆಸಿ ಅಗತ್ಯ ಕ್ರಮಕೈಗೊಳ್ಳಬೇಕು’ ಎಂದು ಆರ್.ರಾಜೇಂದ್ರ ಶುಕ್ರವಾರ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ರೌಡಿ ಶೀಟರ್ ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮೊದಲು ಪ್ರಮುಖ ಆರೋಪಿ ಸೋಮನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ಪೊಲೀಸರು ಮುಂದಾಗಿದ್ದಾರೆ.

ಅಬಕಾರಿ ಅಧಿಕಾರಿಗಳಿಗೆ ಲೋಕಾಯುಕ್ತ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆಯ ಬೆಂಗಳೂರಿನ 8 ಉಪ ಜಿಲ್ಲಾ ಕಚೇರಿಗಳಲ್ಲಿನ ಕರ್ತವ್ಯಲೋಪದ ಬಗ್ಗೆ 150ಕ್ಕೂ ಹೆಚ್ಚು ಸಿಬ್ಬಂದಿಯನ್ನು ಶನಿವಾರ ವಿಚಾರಣೆ ನಡೆಸಿದ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಕರ್ತವ್ಯಲೋಪ ಎಸಗುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಿ.ಎಸ್.ಪಾಟೀಲ

ಮದ್ಯ ಮಾರಾಟ ಪರವಾನಗಿ ನೀಡುವಲ್ಲಿ ಲಂಚ ಮತ್ತು ವಿಳಂಬ ಸಂಬಂಧ ಬಂದಿದ್ದ ದೂರುಗಳ ಆಧಾರದಲ್ಲಿ ಲೋಕಾಯುಕ್ತರು, ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ, ಬಿ.ವೀರಪ್ಪ ಮತ್ತು ಲೋಕಾಯುಕ್ತ ಪೊಲೀಸರು 2024ರ ಸೆಪ್ಟೆಂಬರ್ 24ರಂದು ಅಬಕಾರಿ ಕಚೇರಿಗಳ ಮೇಲೆ ದಾಳಿ ನಡೆಸಿದ್ದರು.

ಲೋಕಾಯುಕ್ತ ವಿಚಾರಣೆಗೆ ಅಬಕಾರಿ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಹಾಜರಾಗಿದ್ದರು

ಕರ್ತವ್ಯದ ಅವಧಿಯಲ್ಲಿ ಅಬಕಾರಿ ಅಧಿಕಾರಿ ಮತ್ತು ಸಿಬ್ಬಂದಿ ಕಚೇರಿಯಲ್ಲಿ ಇಲ್ಲದಿರುವುದು, ನಗದು ವಹಿಯಲ್ಲಿ ದಾಖಲಿಸದೆ ಹಣ ಇರಿಸಿಕೊಂಡಿದ್ದು, ದಾಖಲೆಗಳಲ್ಲಿ ನಮೂದಾಗದ ಮದ್ಯ ಮತ್ತು ಮಾದಕ ವಸ್ತುಗಳು, ಕಚೇರಿಯಲ್ಲಿಯೇ ಸಿಬ್ಬಂದಿ ಮದ್ಯ ಸೇವಿಸಿದ್ದು ಸೇರಿ ಹಲವು ನ್ಯೂನತೆಗಳು ಪತ್ತೆಯಾಗಿದ್ದವು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತರು, ವಿವರಣೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು.

ಇದೇ 24ರಂದು ಅಬಕಾರಿ ಅಧಿಕಾರಿಗಳು ಲೋಕಾಯುಕ್ತ ಕಚೇರಿಗೆ ಬಂದು ವಿವರಣೆ ನೀಡಿದ್ದರು. ಶನಿವಾರ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಯ ವಿಚಾರಣೆ ನಡೆಸಿದ ಲೋಕಾಯುಕ್ತ ನ್ಯಾಯಮೂರ್ತಿ, ಅಬಕಾರಿ ಅಧಿಕಾರಿಗಳು ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸುವಂತೆ ಲೋಕಾಯುಕ್ತ ಪರಿಶೀಲನಾಧಿಕಾರಿಗಳಿಗೆ ಸೂಚಿಸಿದರು.

ಜತೆಗೆ ಕರ್ತವ್ಯದ ಸಮಯದಲ್ಲಿ ಮತ್ತು ಕಚೇರಿಯಲ್ಲಿ ಪಾಲಿಸಬೇಕಾದ ಕ್ರಮಗಳ ಬಗ್ಗೆ ಅಬಕಾರಿ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಿದರು. ಅವುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಮೇಲಧಿಕಾರಿಗಳು ದಂಡನಾಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

‘ಗಾಂಜಾ ಪ್ರಕರಣ ಪೊಲೀಸರಿಗೆ’

‘ಸೆಪ್ಟೆಂಬರ್‌ನಲ್ಲಿ ನಡೆಸಿದ್ದ ದಾಳಿಯ ವೇಳೆ ಹಲವು ಕಚೇರಿಗಳಲ್ಲಿ, ದಾಖಲೆಗಳಲ್ಲಿ ನಮೂದಾಗದ ಗಾಂಜಾ ಪತ್ತೆಯಾಗಿತ್ತು. ಇದು ಅಪರಾಧ ಪ್ರಕರಣವಾದ ಕಾರಣ, ಅವುಗಳ ಬಗ್ಗೆ ತನಿಖೆ ನಡೆಸುವಂತ ಪೊಲೀಸ್ ಆಯುಕ್ತರಿಗೆ ತಿಳಿಸಿದ್ದೇವೆ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಅಬಕಾರಿ ಅಧಿಕಾರಿಗಳು ವಶಕ್ಕೆ ಪಡೆದ ಗಾಂಜಾ, ಅಕ್ರಮ ಮದ್ಯ ಕುರಿತ ವಿವರಗಳನ್ನು ಕಚೇರಿಯ ದಾಖಲೆಗಳಲ್ಲಿ ಕಡ್ಡಾಯವಾಗಿ ನಮೂದು ಮಾಡಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ’ ಎಂದು ಅವರು ತಿಳಿಸಿದರು.

‘ದಾಳಿಯ ವೇಳೆ ಕಂಡು ಬಂದಿದ್ದ ಕರ್ತವ್ಯ ಲೋಪಗಳ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಅವುಗಳಲ್ಲಿ ಶೇ 60–65ರಷ್ಟು ನ್ಯೂನತೆಗಳನ್ನು ಅವರು ಸರಿಪಡಿಸಿಕೊಂಡಿದ್ದಾರೆ. ಉಳಿದವುಗಳನ್ನು ಶೀಘ್ರವೇ ಬಗೆಹರಿಸುವುದಾಗಿ ತಿಳಿಸಿದ್ದಾರೆ. ಅದರಲ್ಲಿ ವಿಳಂಬ ಮಾಡಬಾರದು ಮತ್ತು ಕ್ರಮ ತೆಗೆದುಕೊಂಡ ನಂತರ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದೇವೆ’ ಎಂದು ಅವರು ಮಾಹಿತಿ ನೀಡಿದರು.

ಮಾರ್ಗಸೂಚಿಗಳು

- ಕರ್ತವ್ಯದ ಸಮಯದಲ್ಲಿ ಎಲ್ಲ ಸಿಬ್ಬಂದಿ ಕಡ್ಡಾಯವಾಗಿ ಸಮವಸ್ತ್ರದಲ್ಲಿರಬೇಕು
- ಅನ್ಯಕಾರ್ಯ ನಿಮಿತ್ತ ಹೊರಹೋಗುವಾಗ ಚಲನವಲನ ವಹಿಯಲ್ಲಿ ನಮೂದಿಸಬೇಕು
- ಇಲಾಖಾ ವಾಹನಗಳ ಚಲನವಲನವನ್ನು ಸಂಬಂಧಿತ ವಹಿಯಲ್ಲಿ ಕಡ್ಡಾಯವಾಗಿ ದಾಖಲಿಸಬೇಕು
- ಎಲ್ಲ ಕಚೇರಿಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು
- ಪರವಾನಗಿ ನೀಡಿಕೆ ಮತ್ತು ನವೀಕರಣ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪಾರದರ್ಶಕವಾಗಿ ನಡೆಸಬೇಕು
- ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯಮಾರಾಟಕ್ಕೆ ತಡೆಹಾಕಬೇಕು
- ವಶಕ್ಕೆ ಪಡೆದ ಮದ್ಯ, ಮಾದಕ ವಸ್ತು ಮತ್ತು ವಾಹನಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು

ಟಿ.ಟಿ.ಗೆ ಟಿಪ್ಪರ್ ಡಿಕ್ಕಿ ಮೂವರ ಸಾವು

ಚಳ್ಳಕೆರೆ: ಟೆಂಪೊ ಟ್ರಾವೆಲರ್‌ಗೆ (ಟಿ.ಟಿ) ಟಿಪ್ಪರ್ ಡಿಕ್ಕಿ ಹೊಡೆದು ಟಿ.ಟಿ.ಯಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟು, 7 ಜನ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹೆಗ್ಗೆರೆ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ತಾಲ್ಲೂಕಿನ ತಳಕು ಹೋಬಳಿ ವ್ಯಾಪ್ತಿಯ ಜೆಮ್ಲಾ ನಾಯಕನಹಟ್ಟಿ ಗ್ರಾಮದ ಲಂಬಾಣಿಹಟ್ಟಿಯ ಕುಮಾರ ನಾಯ್ಕ (46), ಶಂಕರಬಾಯಿ (75) ಮತ್ತು ಎ.ಶ್ವೇತಾ (38) ಮೃತರು. ಟಿ.ಟಿ.ಯ ಚಾಲಕ ಕುಮಾರನಾಯ್ಕ ಅವರ ಪತ್ನಿ ಶೈಲಜಾ, ಪುತ್ರಿ ಪುಷ್ಪಾವತಿ, ಪುತ್ರ ಪ್ರೀತಮ್ ಮತ್ತು ತಿಪ್ಪೇಸ್ವಾಮಿ (43) ಗಾಯಗೊಂಡಿದ್ದು, ಅವರನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರ ಗಾಯಗೊಂಡಿದ್ದ ವೃದ್ಧೆ ಲಕ್ಷ್ಮಿಬಾಯಿ (75), ಅಜೂರನಾಯ್ಕ (70), ಪ್ರಶಾಂತ್ (38) ಅವರನ್ನು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಲ್ಲಿ ಟಿ.ಟಿ. ಓಡಿಸಿ ಜೀವನ ನಡೆಸುತ್ತಿದ್ದ ಕುಮಾರನಾಯ್ಕ, ಶನಿವಾರ ಟಿ.ಟಿ.ಯಲ್ಲಿ ಊರಿನತ್ತ ಹೊರಟಿದ್ದಾಗ ಅಪಘಾತ ಸಂಭವಿಸಿದೆ ಎಂದು ಡಿವೈಎಸ್ಪಿ ಟಿ.ಬಿ.ರಾಜಣ್ಣ ತಿಳಿಸಿದ್ದಾರೆ.

‘71 ಎಕರೆ ಸರ್ಕಾರಕ್ಕೆ ಸ್ವಾಧೀನವಾಗಲಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಒತ್ತುವರಿ ಮಾಡಿಕೊಂಡ 71.30 ಎಕರೆ ಗೋಮಾಳವನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕು’ ಎಂದು ಸಮಾಜ ಪರಿವರ್ತನ ಸಮುದಾಯದ ಅಧ್ಯಕ್ಷ ಎಸ್.ಆರ್. ಹಿರೇಮಠ ಹೇಳಿದರು.


ಎಸ್‌.ಆರ್. ಹಿರೇಮಠ

ಕುಮಾರಸ್ವಾಮಿ ಅವರು ಈ ಒತ್ತುವರಿ ಕುರಿತಂತೆ ಕರ್ನಾಟಕ ಹೈಕೋರ್ಟ್‌ನ 21 ಆದೇಶಗಳಿಗೆ ತಡೆಯಾಜ್ಞೆ ನೀಡುವಂತೆ ಕೋರಿ ಸಲ್ಲಿಸಿದ 274 ಪುಟಗಳ ವಿಶೇಷ ಅನುಜ್ಞಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದ ಹಿನ್ನೆಲೆಯಲ್ಲಿ ಶನಿವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿ ಈ ಪ್ರತಿಕ್ರಿಯೆ ನೀಡಿದರು.

‘ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸಚಿವ ಕುಮಾರಸ್ವಾಮಿ ಮತ್ತು ಅವರ ಕುಟುಂಬದ ಸದಸ್ಯರು ಈಗ ಹೈಕೋರ್ಟ್‌ನಲ್ಲೇ ತಮ್ಮ ಅಹವಾಲು ಸಲ್ಲಿಸಬೇಕಿದೆ. ತಮ್ಮ ಬಳಿ ಎಲ್ಲಾ ದಾಖಲೆಗಳು ಇದೆ ಎಂದು ಅವರು ಹೇಳಿಕೆ ನೀಡುತ್ತಿದ್ದಾರೆ. ಅದನ್ನು ಕೋರ್ಟ್‌ಗೆ ಸಲ್ಲಿಸಲಿ. 2020ರ ಜನವರಿ 14ರಂದು ಮತ್ತು ಕಳೆದ ಮಾರ್ಚ್ 19ರಂದು ಹೈಕೋರ್ಟ್ ನೀಡಿದ ಆದೇಶವನ್ನು ಪಾಲಿಸದೆ ಸರ್ಕಾರಕ್ಕೆ ಈಗ ಬೇರೆ ದಾರಿಯೇ ಇಲ್ಲ’ ಎಂದು ಹೇಳಿದರು.

‘ಕುಮಾರಸ್ವಾಮಿ, ಡಿ.ಸಿ.ತಮ್ಮಣ್ಣ, ಸಂಸದ ಡಾ.ಸಿ.ಎನ್.ಮಂಜುನಾಥ ಸಹಿತ ಕುಟುಂಬದ ಇತರ ಸದಸ್ಯರು ಕಬಳಿಸಿರುವ 71.30 ಎಕರೆ ಗೋಮಾಳವನ್ನು ಸರ್ಕಾರ ತಕ್ಷಣ ವಶಪಡಿಸಿಕೊಳ್ಳಬೇಕು. ಒತ್ತುವರಿ ಮಾಡಿಕೊಂಡ ಎಲ್ಲರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಒತ್ತುವರಿಗೆ ನೆರವಾದ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಹಿರೇಮಠ ಆಗ್ರಹಿಸಿದರು.

ಸುತ್ತೂರು ಶಾಲೆ, ಉಚಿತ ಹಾಸ್ಟೆಲ್ ಪ್ರವೇಶಕ್ಕೆ ಅರ್ಜಿ

ಮೈಸೂರು: ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ಶಾಲೆ ಹಾಗೂ ಉಚಿತ ವಿದ್ಯಾರ್ಥಿನಿಲಯಕ್ಕೆ 2025–26ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕನ್ನಡ ಮಾಧ್ಯಮದ 1ರಿಂದ 8ನೇ ತರಗತಿ ಮತ್ತು ಇಂಗ್ಲಿಷ್ ಮಾಧ್ಯಮದ 1, 5, 6 ಹಾಗೂ 8ನೇ ತರಗತಿಗಳಿಗೆ ಪ್ರವೇಶಕ್ಕೆ ಅವಕಾಶವಿದೆ. ಗ್ರಾಮೀಣ ಪ್ರದೇಶದ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಬಾಲಕ, ಬಾಲಕಿಯರಿಗೆ ಪ್ರವೇಶ ನೀಡಲಾಗುವುದು.

ಅರ್ಜಿ ನಮೂನೆಯನ್ನು ಏಪ್ರಿಲ್ 2ರಿಂದ ಶಾಲೆ, ಕಚೇರಿಯಲ್ಲಿ ಖುದ್ದಾಗಿ ಪಡೆಯಬಹುದು ಅಥವಾ https://jssschoolsuttur.org/ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಯ ಜೊತೆಗೆ ಅಗತ್ಯ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ– ‘ಆಡಳಿತಾಧಿಕಾರಿ, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ–571129’ ವಿಳಾಸಕ್ಕೆ ಮೇ 15ರೊಳಗೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 74114 86938 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಮಕ್ಕಳಿಗೆ ಮಾಸ್ಕ್ ಅನಿವಾರ್ಯತೆ ಸೃಷ್ಟಿಸಬಾರದು’

ನವದೆಹಲಿ (ಪಿಟಿಐ): ಇಂಗಾಲ ಹೊರಸೂಸುವಿಕೆ ಮೇಲೆ ನಿಯಂತ್ರಣ ಇರಬೇಕು, ಶುದ್ಧ ಇಂಧನ ತಂತ್ರಜ್ಞಾನದ ಮೇಲೆ ಹೆಚ್ಚಿನ ಹೂಡಿಕೆ ಆಗಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿಕ್ರಮನಾಥ್ ಹೇಳಿದರು.

ಬೆಳೆಯುವ ಮಕ್ಕಳು ಹೊರಗೆ ಆಟವಾಡುವಾಗ ಮಾಸ್ಕ್ ಧರಿಸಬೇಕಾದ ಸ್ಥಿತಿಯನ್ನು ಸೃಷ್ಟಿಸುವುದು ಸರಿಯಲ್ಲ. ಆರ್ಥಿಕ ಬೆಳವಣಿಗೆ ಹಾಗೂ ಪರಿಸರದ ಒಳಿತಿನ ನಡುವೆ ಸಮತೋಲನದ ಮಾರ್ಗ ಅನ್ವೇಷಿಸಬೇಕು ಎಂದರು.

‘ಚನ್ನಮ್ಮ ಸಮಾಧಿ ‘ರಾಷ್ಟ್ರೀಯ ಸ್ಮಾರಕ’ವೆಂದು ಘೋಷಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿರುವ ವೀರ ರಾಣಿ ಕಿತ್ತೂರು ಚನ್ನಮ್ಮ ಅವರ ಸಮಾಧಿಯನ್ನು ‘ಪ್ರಾಚೀನ ಸ್ಮಾರಕಗಳು, ಐತಿಹಾಸಿಕ ತಾಣಗಳು ಮತ್ತು ಅವಶೇಷಗಳ ಕಾಯ್ದೆ– 1958’ರ ಅಡಿಯಲ್ಲಿ ರಾಷ್ಟ್ರೀಯ ಮಹತ್ವದ ಸ್ಮಾರಕವೆಂದು ಘೋಷಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಕಿತ್ತೂರು ಚನ್ನಮ್ಮ ಸಮಾಧಿಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಸಶಸ್ತ್ರ ಪ್ರತಿರೋಧವನ್ನು ಮುನ್ನಡೆಸಿದ ಮಹಿಳೆಯರಲ್ಲಿ ರಾಣಿ ಚನ್ನಮ್ಮ ಒಬ್ಬರಾಗಿದ್ದಾರೆ. ಅವರ ಶೌರ್ಯ ಮತ್ತು ಅದಮ್ಯ ಚೈತನ್ಯವು ರಾಷ್ಟ್ರದಾದ್ಯಂತ ನವಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಅಪ್ರತಿಮ ನಾಯಕಿಯ ಸಮಾಧಿ ಕೇವಲ ವಿಶ್ರಾಂತಿ ಸ್ಥಳವಲ್ಲ, ಬದಲಾಗಿ ದೇಶದ ಸ್ವಾತಂತ್ರ್ಯ ಹೋರಾಟದ ಅವಿನಾಭಾವ ಚೈತನ್ಯವನ್ನು ಸಂಕೇತಿಸುವ ಪವಿತ್ರ ಸ್ಥಳ. ಈ ಸ್ಥಳವನ್ನು ರಾಷ್ಟ್ರೀಯವಾಗಿ ಮಹತ್ವದ ಸ್ಮಾರಕವೆಂದು ಘೋಷಿಸಬೇಕು. ಇದು ಪರಂಪರೆಯನ್ನು ಸಂರಕ್ಷಿಸುವಲ್ಲಿ ಮತ್ತು ರಾಷ್ಟ್ರಕ್ಕೆ ಕಿತ್ತೂರು ಚನ್ನಮ್ಮ ನೀಡಿದ ಕೊಡುಗೆಯನ್ನು ಗೌರವಿಸುವಲ್ಲಿ ಸ್ಮರಣೀಯ ಹೆಜ್ಜೆಯಾಗಿದೆ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ರಾಣಿ ಚನ್ನಮ್ಮ ಸಮಾಧಿಯ ಸಂರಕ್ಷಣೆ ಮತ್ತು ಅಭಿವೃದ್ಧಿಯ ಅಗತ್ಯವಿದ್ದು, ರಾಷ್ಟ್ರೀಯ ಪ್ರಾಮುಖ್ಯತೆಯ ಸ್ಮಾರಕವೆಂದು ಮೌಲ್ಯಮಾಪನ ಮಾಡುವ ಮತ್ತು ಘೋಷಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಸಂಸ್ಕೃತಿ ಸಚಿವಾಲಯ ಮತ್ತು ಭಾರತೀಯ ಪುರಾತತ್ವ ಇಲಾಖೆಗೆ ನಿರ್ದೇಶನ ನೀಡಬೇಕು ಎಂದೂ ಅವರು ಮನವಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸರ್ಕಾರಿ ಹುದ್ದೆಗಳಿಗೆ ನಕಲಿ ನೇಮಕಾತಿ ಪತ್ರ: ಇಬ್ಬರ ಬಂಧನ

ಕಲಬುರಗಿ: ಸರ್ಕಾರಿ ಹುದ್ದೆಗಳಿಗೆ ನಕಲಿ ನೇಮಕಕಾತಿ ಆದೇಶ ಪತ್ರ ನೀಡಿ ಜನರನ್ನು ವಂಚಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ತಾಲ್ಲೂಕಿನ ಮೇಳಕುಂದಾ (ಬಿ) ಗ್ರಾಮದ ನಾಗೇಶ ಲಕ್ಷ್ಮಣ ಸುಂಕನ, ಬೆಳಗಾವಿ ಜಿಲ್ಲೆಯ ಸವದತ್ತಿಯ ಅಭಿಷೇಕ ಸುಭಾಶ ಮಾತಾಡೆ ಬಂಧಿತರು.

ಅಡ್ಡೂರು ಶ್ರೀನಿವಾಸುಲು

‘ಇವರು ಆರು ತಿಂಗಳಲ್ಲಿ 11 ಜನರಿಗೆ ₹14.55 ಲಕ್ಷ ವಂಚಿಸಿದ್ದಾರೆ. ಇಬ್ಬರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ನ್ಯಾಯಾಂಗ ಬಂಧನ ವಿಧಿಸಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘54 ವಿವಿಧ ಹುದ್ದೆಗಳ ನಕಲಿ ನೇಮಕಾತಿ ಆದೇಶ ಪತ್ರಗಳು, 4 ಮೊಬೈಲ್ ಫೋನ್, ₹47 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ನಿರುದ್ಯೋಗಿಗಳೊಂದಿಗೆ ಸಂಪರ್ಕ ಸಾಧಿಸುವುದು ನಾಗೇಶನ ಕೆಲಸವಾಗಿತ್ತು. ಅಭಿಷೇಕ ನಕಲಿ ನೇಮಕಾತಿ ಆದೇಶ ಪತ್ರ ಸೃಷ್ಟಿಸಿ ಕೊಡುತ್ತಿದ್ದ. ಕಲಬುರಗಿ, ಬೀದರ್, ಧಾರವಾಡ ಸೇರಿ ವಿವಿಧೆಡೆಯ ಜನ ವಂಚನೆಗೊಳಗಾಗಿದ್ದಾರೆ’ ಎಂದು ತಿಳಿಸಿದರು.

ಮಠದ ಸ್ವಾಮೀಜಿಗೆ ಕುರ್‌ಆನ್ ಉಡುಗೊರೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಪಂಚಗಣಾಧೀಶ್ವರ ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಅವರಿಗೆ ಶನಿವಾರ ಮುಸ್ಲಿಂ ಮುಖಂಡರು ಕುರ್‌ಆನ್ ಗ್ರಂಥವನ್ನು ಉಡುಗೊರೆ ನೀಡಿ, ಯುಗಾದಿ ಹಬ್ಬದ ಶುಭಾಶಯವನ್ನು ಕೋರಿದರು.

ಮಂಗಳೂರಿನ ಧರ್ಮಗುರು ಮಕ್ಬೂದ್ ಉಮ್ರಿ ಮಾತನಾಡಿ, ‘ಕುರ್‌ಆನ್ ಗ್ರಂಥವು ಮನುಷ್ಯನ ಜೀವನ ಸಾಗಿಸುವ ಕ್ರಮಗಳ ಬಗ್ಗೆ ತಿಳಿಸುತ್ತದೆ. ಯಾರೂ ಮೇಲಲ್ಲ, ಕೀಳಲ್ಲ. ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸುತ್ತದೆ’ ಎಂದರು.

ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ‘ದೇವನೊಬ್ಬ ನಾಮ ಹಲವು. ಮುಸ್ಲಿಮರಲ್ಲಿ ಉಪಪಂಗಡಗಳಿವೆ. ಎಲ್ಲರೂ ಕುರ್‌ಆನ್ ಓದುತ್ತಾರೆ. ರಂಜಾನ್ ಮಾಸಾಚರಣೆಯ ಶಿಸ್ತು, ಉಪವಾಸಕ್ಕೆ ವಿಶೇಷ ಮಹತ್ವ ಇದೆ. ಈದ್ ಶುಭಾಶಯಗಳು’ ಎಂದರು.

ಮುಖಂಡರಾದ ವೈ.ಡಿ.ಅಣ್ಣಪ್ಪ, ಪ್ರಶಾಂತ್ ಪಾಟೀಲ, ಕೆರೆಗುಡಿಹಳ್ಳಿ ಹಾಲೇಶ್, ಐ.ಸಲಾಂ, ರಹಮತ್ ಉಲ್ಲಾ, ಅಬ್ದುಲ್ ಫತೀರ್, ಅಬ್ದುಲ್ ಸಮದ್, ರೆಹಮಾನ್, ನವೀದ್, ರೆಹಾನ್, ಎ.ಬಿ.ಮಂಜುನಾಥ ಗೌಡ ಇದ್ದರು.

ಕೆರೆಯಲ್ಲಿ ಮುಳುಗಿ ಮೂವರು ಸಾವು

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಕಾಮನಹಳ್ಳಿಯಲ್ಲಿ ಹಸು ತೊಳೆಯಲು ಕೆರೆಗೆ ಇಳಿದಿದ್ದ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟರು. ವಿನೋದ್ (17), ಬಸವೇಗೌಡ (45) ಹಾಗೂ ಮುದ್ದೇಗೌಡ (48) ಮೃತರು.

‘ಯುಗಾದಿ ಹಬ್ಬದ ಪ್ರಯುಕ್ತ ಹಸುವನ್ನು ತೊಳೆಯಲು ಶನಿವಾರ ಬೆಳಿಗ್ಗೆ ವಿನೋದ್ ಕೆರೆಗೆ ತೆರಳಿದ್ದ. ಹಸು ಆತನನ್ನು ನೀರಿನ ಮಧ್ಯಕ್ಕೆ ಎಳೆದೊಯ್ದಾಗ ಆಯತಪ್ಪಿ ನೀರಿನಲ್ಲಿ ಮುಳುಗಿದ್ದಾನೆ. ಪಕ್ಕದಲ್ಲಿ ತಮ್ಮ ದನ ತೊಳೆಯುತ್ತಿದ್ದ ಮುದ್ದೇಗೌಡ ಹಾಗೂ ಅವರ ಬಾಮೈದ ಬಸವೇಗೌಡ ಇಬ್ಬರೂ ವಿನೋದ್ ರಕ್ಷಣೆಗೆ ಹೋಗಿದ್ದಾರೆ. ಅವರೂ ನೀರಿನಲ್ಲಿ ಮುಳುಗಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಅಗ್ನಿಶಾಮಕ ದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಮೇಲೆತ್ತಿದರು. ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಚಾರಣಾ ತಂಡ ಸರ್ಕಾರಕ್ಕೆ ಸಲ್ಲಿಸಿದ 230 ಪುಟಗಳ ವರದಿಯಲ್ಲಿ ಉಲ್ಲೇಖ

‘ರನ್ಯಾ ರಾವ್‌ಗೆ ಶಿಷ್ಟಾಚಾರ ಸೌಲಭ್ಯ: ಮಲತಂದೆಗೆ ಅರಿವಿತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ಮಲ ಮಗಳು ರನ್ಯಾ ರಾವ್ ಶಿಷ್ಟಾಚಾರ ನಿಯಮಗಳಡಿ ಸಿಗುವ ಸೌಲಭ್ಯ ಬಳಸಿಕೊಂಡದ್ದು, ಡಿಜಿಪಿ ರಾಮಚಂದ್ರ ರಾವ್ ಅವರ ಗಮನಕ್ಕೆ ಬಂದಿತ್ತು. ಆದರೆ, ರನ್ಯಾ ಅವರಿಗೆ ಶಿಷ್ಟಾಚಾರ ಸೌಲಭ್ಯ ಕಲ್ಪಿಸುವಂತೆ ರಾಮಚಂದ್ರ ರಾವ್ ಅವರೇ ಸೂಚಿಸಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರ ಸಿಕ್ಕಿಲ್ಲ’ ಎಂಬುದಾಗಿ ವಿಚಾರಣಾ ತಂಡವು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮಾಡಿಕೊಂಡು ಬಂದಿದ್ದ ರನ್ಯಾ ರಾವ್ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಅವರ ಪಾತ್ರ ಬಗ್ಗೆ ತನಿಖೆ ನಡೆಸಿ ಏಳು ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರವು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರ ನೇತೃತ್ವದಲ್ಲಿ ವಿಚಾರಣಾ ತಂಡ ರಚಿಸಿತ್ತು. ಮೂರು ವಾರ ತನಿಖೆ ನಡೆಸಿದ ಗೌರವ್ ನೇತೃತ್ವದ ತಂಡವು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ 230 ಪುಟಗಳ ವರದಿ ಸಲ್ಲಿಸಿದೆ ಎಂದು ಗೊತ್ತಾಗಿದೆ.

‘ವರದಿ ಸ್ವೀಕರಿಸಿರುವ ಮುಖ್ಯ ಕಾರ್ಯದರ್ಶಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರ ಗಮನಕ್ಕೆ ತಂದಿದ್ದಾರೆ. ಅವರು ವರದಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ರಾಮಚಂದ್ರ ರಾವ್

ರನ್ಯಾ ರಾವ್

‘ರನ್ಯಾ ರಾವ್ ಅವರು ಶಿಷ್ಟಾಚಾರ ಸೌಲಭ್ಯವನ್ನು ಪಡೆದುಕೊಂಡಿದ್ದರೂ ಅವರನ್ನು ತಪಾಸಣೆ ಮಾಡಲು ಕಸ್ಟಮ್ಸ್ ಅಧಿಕಾರಿಗಳಿಗೆ ಯಾವುದೇ ನಿರ್ಬಂಧ ಇರಲಿಲ್ಲ. ಶಿಷ್ಟಾಚಾರ ಸೌಲಭ್ಯ ಪಡೆದಿದ್ದರೂ ವಿಮಾನ ನಿಲ್ದಾಣಗಳಲ್ಲಿ ಯಾವುದೇ ಅಧಿಕಾರಿ ಅಥವಾ ಅವರ ಕುಟುಂಬದವರಿಗೆ ಕಸ್ಟಮ್ಸ್ ವಿನಾಯಿತಿ ಇರುವುದಿಲ್ಲ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ದೇವನಹಳ್ಳಿಯಲ್ಲಿ ಇರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ರಾವ್ ಅವರು ಹಲವು ಬಾರಿ ಶಿಷ್ಟಾಚಾರ ಪಡೆದಿದ್ದಾರೆ. ಅಲ್ಲದೇ ಪೊಲೀಸ್ ವಾಹನವನ್ನೂ ಬಳಕೆ ಮಾಡಿಕೊಂಡಿದ್ದಾರೆ. ಇದು ಸಹ ರಾಮಚಂದ್ರ ರಾವ್ ಅವರಿಗೆ ಗೊತ್ತಿತ್ತು. ಸರ್ಕಾರಿ ವಾಹನ ಬಳಸದಂತೆ ತಮ್ಮ ಮಗಳಿಗೆ ನಿರ್ಬಂಧಿಸಿದ್ದರು ಎಂಬುದಕ್ಕೆ ಪುರಾವೆ ಸಿಕ್ಕಿಲ್ಲ ಎಂಬ ಅಂಶ ವರದಿಯಲ್ಲಿದೆ. ಅಲ್ಲದೇ ರನ್ಯಾ ರಾವ್ ಅವರು ಹಲವು ಬಾರಿ ಸರ್ಕಾರಿ ಕಾರು ಬಳಸಿದ್ದಾರೆ ಎಂಬುದು ವಿಮಾನ ನಿಲ್ದಾಣದ ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ದುಬೈನಿಂದ 14.2 ಕೆ.ಜಿ ಚಿನ್ನವನ್ನು ಕಳ್ಳ ಸಾಗಣೆ ಮೂಲಕ ತಂದಿದ್ದರು ಎಂಬ ಆರೋಪದ ಮೇರೆಗೆ ರನ್ಯಾ ರಾವ್ ಅವರನ್ನು ರೆವಿನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ಇದಕ್ಕೂ ಮೊದಲು ಅವರನ್ನು ತಪಾಸಣೆ ನಡೆಸಲು ಕಸ್ಟಮ್ಸ್ ಅಧಿಕಾರಿಗಳಿಗೆ ಯಾವುದೇ ನಿರ್ಬಂಧ ಇರಲಿಲ್ಲ’ ಎಂಬ ಅಂಶ ವರದಿಯಲ್ಲಿದೆ.

ತಂದೆಯ ಸಾವಿನ ನೋವಿನಲ್ಲೂ ಪರೀಕ್ಷೆ ಬರೆದ ವಿದ್ಯಾರ್ಥಿ

ಹೊಸಪೇಟೆ (ವಿಜಯನಗರ): ನಗರದ ತುಂಗಭದ್ರ ಅಣೆಕಟ್ಟೆಯ ಸಂತ ಜೋಸೆಫ್ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಹರಿಧರನ್, ತಂದೆಯ ಸಾವಿನ ದುಃಖದಲ್ಲೂ ಶನಿವಾರ ‘ಸಮಾಜ ವಿಜ್ಞಾನ’ ವಿಷಯದ ಪರೀಕ್ಷೆ ಬರೆದರು.

ಇವರ ತಂದೆ ಸೆಲ್ವಕುಟ್ಟಿ ಮೂತ್ರಪಿಂಡಕ್ಕೆ ಸಂಬಂಧಿಸಿ ತಮಿಳುನಾಡಿನ ಧರ್ಮಪುರಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಶುಕ್ರವಾರ ಮೃತಪಟ್ಟರು. ಹರಿಧರನ್ ಆಸ್ಪತ್ರೆಗೆ ತೆರಳಿ, ಅಂತಿಮದರ್ಶನ ಪಡೆದು, ಶನಿವಾರ ಮರಳಿ ಬಂದು ಪರೀಕ್ಷೆ ಬರೆದರು’ ಎಂದು ಸ್ಥಳೀಯರು ತಿಳಿಸಿದರು.

‘ವಿವಿ: ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ’

ಮಂಗಳೂರು: ‘ರಾಜ್ಯದ ಏಳು ವಿಶ್ವವಿದ್ಯಾಲಯಗಳ ಸ್ಥಿತಿಗತಿ ಅಧ್ಯಯನಕ್ಕೆ ರಚನೆ ಆಗಿರುವ ಸಂಪುಟ ಉಪಸಮಿತಿಯು ವರದಿ ಸಲ್ಲಿಸಿದ ಬಳಿಕ, ಸಂಪುಟ ಸಭೆಯಲ್ಲಿ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಹೇಳಿದರು.

ಶನಿವಾರ ಇಲ್ಲಿ ಆಯೋಜಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ 43ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ವಿ.ವಿಗಳಿಗೆ ಸರ್ಕಾರ ಸ್ವಾಯತ್ತತೆ ನೀಡಿದೆ. ನಿರಂತರ ಆರ್ಥಿಕ ನೆರವು ನೀಡಲಾಗದು. ಈ ನಡುವೆ ವಿ.ವಿಗಳನ್ನು ಉಳಿಸುವುದು ಕೂಡ ನಮ್ಮ ಜವಾಬ್ದಾರಿ. ವಿ.ವಿಗಳ ವ್ಯವಸ್ಥೆಯನ್ನು ಮತ್ತೆ ಸೃಷ್ಟಿಸುವುದು ಸುಲಭವಲ್ಲ. ಸರ್ಕಾರ ಎಲ್ಲ ವಿಚಾರಗಳನ್ನು ಚರ್ಚಿಸಿ ತೀರ್ಮಾನಿಸಲಿದೆ’ ಎಂದು ಅವರು ತಿಳಿಸಿದರು.

'ಡಲ್ಲೇವಾಲ್ ನಿರಶನ ಅಂತ್ಯಗೊಳಿಸಿಲ್ಲ'

ಜಗಜೀತ್ ಸಿಂಗ್ ಡಲ್ಲೇವಾಲ್

ಚಂಡೀಗಢ (ಪಿಟಿಐ): 'ಪಂಜಾಬ್‌ನ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಅವರು ಅನಿರ್ದಿಷ್ಟಾವಧಿ ಉಪವಾಸವನ್ನು ಅಂತ್ಯಗೊಳಿಸಿಲ್ಲ' ಎಂದು ಅವರ ನಿಕಟವರ್ತಿ, ರೈತ ನಾಯಕ ಅಭಿಮನ್ಯು ಕೊಹಾರ್ ಶನಿವಾರ ತಿಳಿಸಿದ್ದಾರೆ.

'ರಾಜ್ಯದ ಪೊಲೀಸರು ಕಳೆದ ವಾರ ಬಂಧಿಸಿದ್ದ ಎಲ್ಲ ರೈತರನ್ನು ವಿವಿಧ ಜೈಲುಗಳಿಂದ ಬಿಡುಗಡೆ ಮಾಡಿದ ಬಳಿಕ ಅವರು ಒಂದು ಲೋಟ ನೀರನ್ನು ಕುಡಿದಿದ್ದಾರೆ. ರೈತರ ಬಿಡುಗಡೆ ಬಳಿಕ ನೀರನ್ನಷ್ಟೇ ಕುಡಿಯುತ್ತೇನೆ ಎಂದು ಅವರು ಮೊದಲೇ ತಿಳಿಸಿದ್ದರು' ಎಂದು ಹೇಳಿದರು.

'ಅನಿರ್ದಿಷ್ಟಾವಧಿ ಉಪವಾಸವನ್ನು ಡಲ್ಲೇವಾಲ್ ಅವರು ಅಂತ್ಯಗೊಳಿಸಿದ್ದಾರೆ ಎಂದು ತಪ್ಪು ಅಭಿಪ್ರಾಯವನ್ನು ಮೂಡಿಸಲಾಗುತ್ತಿದೆ. ಇದು, ಸರಿಯಲ್ಲ. ಅವರು ಉಪವಾಸ ಸತ್ಯಾಗ್ರಹ ಮುಂದುವರಿಸಿದ್ದಾರೆ' ಎಂದು ಹೇಳಿದರು.

ಎಲ್2: ಎಂಪುರಾನ್: ಮಾರ್ಪಾಡಿಗೆ ಮುಂದಾದ ಚಿತ್ರ ನಿರ್ಮಾಪಕರು

ಪ್ರಜಾವಾಣಿ ವಾರ್ತೆ


ಮೋಹನ್‌ಲಾಲ್

ತಿರುವನಂತಪುರ: ನಟ ಮೋಹನ್‌ಲಾಲ್ ಅವರ 'ಎಲ್2: ಎಂಪುರಾನ್' ಚಿತ್ರದ ವಿರುದ್ಧ ಬಿಜೆಪಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ (ಆರ್‌ಎಸ್‌ಎಸ್) ತೀವ್ರ ಟೀಕೆ ವ್ಯಕ್ತವಾಗಿರುವ ನಡುವೆ ಚಿತ್ರದಲ್ಲಿ ಕೆಲ ಬದಲಾವಣೆ ಮಾಡಲು ಚಿತ್ರ ನಿರ್ಮಾಪಕರು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಚಿತ್ರದ 17 ವಿವಿಧ ದೃಶ್ಯಗಳಲ್ಲಿ ಬದಲಾವಣೆ ಮಾಡಲು ಯೋಜಿಸಲಾಗಿದ್ದು, 'ಬಾಬಾ ಬಜರಂಗಿ' ಎಂದು ಇರುವ ಪಾತ್ರದ ಹೆಸರನ್ನು ಬದಲಿಸಲಾಗುತ್ತದೆ. ಮಾರ್ಪಾಡು ಮಾಡಿದ ಬಳಿಕ ಚಿತ್ರವನ್ನು ಸೆನ್ಸಾರ್ ಮಂಡಳಿಗೆ ಕಳುಹಿಸಲಾಗುವುದು ಎಂದು ಚಿತ್ರರಂಗದ ಮೂಲಗಳು ತಿಳಿಸಿವೆ.

ನಿರ್ಮಾಪಕರು ಈ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಸಿನಿಮಾ ಕುರಿತು ವ್ಯಕ್ತವಾಗಿರುವ ಟೀಕೆಗಳ ಕುರಿತು ಮಾತನಾಡಲು ನಿರಾಕರಿಸಿದ ಚಿತ್ರಕಥೆಗಾರ ಮುರಳಿ ಗೋಪಿ ಅವರು, 'ನಾನೀಗ ಮೌನವಾಗಿರಲು ನಿರ್ಧರಿಸಿದ್ದೇನೆ' ಎಂದರು.

'ಹಿಂದೂ ವಿರೋಧಿ'

'ನಟ ಮೋಹನ್‌ಲಾಲ್ ಪ್ರಮುಖ ಪಾತ್ರದಲ್ಲಿರುವ 'ಎಲ್2: ಎಂಪುರಾನ್' ಚಲನಚಿತ್ರವು ಹಿಂದೂ ವಿರೋಧಿ ಮತ್ತು ಬಿಜೆಪಿ ವಿರೋಧಿ ಭಾವನೆ ಬೆಳೆಸುವ ಮಾಧ್ಯಮವಾಗಿದೆ' ಎಂದು ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ನಿಯತಕಾಲಿಕವು ಲೇಖನ ಪ್ರಕಟಿಸಿದೆ.

'ಈಗಾಗಲೇ ನಾಶಗೊಂಡಿರುವ ಭಾರತವನ್ನು ಈ ಚಲನಚಿತ್ರವು ಇನ್ನಷ್ಟು ವಿಭಜಿಸಲಿದೆ. ಗುಜರಾತ್‌ನ ಗೋಧ್ರಾ ನಂತರದ ಘಟನೆಗಳನ್ನು ಆಧರಿಸಿದ 'ಸೂಕ್ಷ್ಮ ವಸ್ತು'ವನ್ನು ಹೊಂದಿದೆ. ಚಿತ್ರ ವಿಭಜನೆಯ ಮನಸ್ಥಿತಿ ಹೊಂದಿರುವುದು ಸ್ಪಷ್ಟವಾಗಿದೆ' ಎಂದೂ ಲೇಖನ ವ್ಯಾಖ್ಯಾನಿಸಿದೆ.

ಕೊಳೆತ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆ

ನವದೆಹಲಿ (ಪಿಟಿಐ): ದೆಹಲಿಯ ಶಾಹದರಾದ ಫ್ಲಾಟ್‌ವೊಂದರಲ್ಲಿ ಮಹಿಳೆಯೊಬ್ಬರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಶುಕ್ರವಾರ ಪತ್ತೆಯಾಗಿದೆ. ಪ್ರಕರಣ ಸಂಬಂಧ, ಅಂಜಲಿ ಅವರು ವಾಸವಿದ್ದ ಮನೆಯ ಮಾಲೀಕ ವಿವೇಕಾನಂದ ಮಿಶ್ರಾ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 37/2024–25 ದಿನಾಂಕ: 28–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ:5054–03–337–0–17–160 ರ.ಹೆ.ನವೀಕರಣ, 5054–04–337–0–01–154 ಜಿಲ್ಲಾ ರಸ್ತೆಗಳು–ಸುಧಾರನೆಗಳು, 5054–04–337–0–01–154 ರಾಜ್ಯ ಹೆದ್ದಾರಿ – ಸುಧಾರಣೆಗಳು ಅಡಿಯಲ್ಲಿನ ಒಟ್ಟು 4 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW – 3 & 4ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.200.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 4 ಕಾಮಗಾರಿಗಳಿಗೆ (ಇಂ ಸಂಖ್ಯೆ: 19465(2ನೇಕರೆ), ದಿನಾಂಕ:08.04.2025, ಇಂ,ಸಂಖ್ಯೆ: 19502(2ನೇಕರೆ), ದಿನಾಂಕ:09.04.2025, ಇಂ,ಸಂಖ್ಯೆ:19413, 18635 ದಿನಾಂಕ: 15.04.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಬೆಂಗಳೂರು ಪ್ರಾದೇಶಿಕ ವೃತ್ತ
ಜಾರಕಬಂಡೆ ಅರಣ್ಯ ವಸತಿ ಸಂಕೀರ್ಣ, ಕಮ್ಮಗೊಂಡನಹಳ್ಳಿ, ಬೆಂಗಳೂರು–560015.

ಪ್ರಕಟಣೆ

ಪ್ರ.ಮು.ಅ.ಸಂ.(ಅಪಮು), ಬೆಂಗಳೂರು ರವರ ಕಛೇರಿ ಅಧಿಸೂಚನೆ ದಿನಾಂಕ: 17.11.2023ರ ಅನ್ವಯ ಬೆಂಗಳೂರು ವೃತ್ತದ 49 ಗಸ್ತು ಅರಣ್ಯ ಪಾಲಕ ಗ್ರೂಪ್ 'ಸಿ' ಹುದ್ದೆಗಳಿಗೆ ನೇರ ನೇಮಕಾತಿ

ಬೆಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ **49 ಗಸ್ತು** ಅರಣ್ಯ ಪಾಲಕ (ಅರಣ್ಯ ರಕ್ಷಕ) **ಗ್ರೂಪ್ 'ಸಿ' ಹುದ್ದೆಗಳಿಗೆ ನೇರ ನೇಮಕಾತಿ** ಕುರಿತು, ದಿನಾಂಕ: 14.08.2024 ರಂದು 1:20 (ಹುದ್ದೆ:ಅಭ್ಯರ್ಥಿ) ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಸದರಿ ಅರ್ಹ ಅಭ್ಯರ್ಥಿಗಳಿಗೆ ದೈಹಿಕ, ವೈದ್ಯಕೀಯ ಅರ್ಹತಾ ಪರೀಕ್ಷೆಯನ್ನು ಮತ್ತು ದಾಖಲಾತಿಗಳ ಪರಿಶೀಲನೆ ನಡೆಸಲು ವೇಳಾಪಟ್ಟಿಯನ್ನು **https://kfdrecruitment.in** ರಲ್ಲಿ ಪ್ರಕಟಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಲು ತಿಳಿಸಿದೆ.

ಸಹಿ/–
ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ವೃತ್ತ, ಬೆಂಗಳೂರು

DIPR/CP/YC/5972/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ,
2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ 'ಬಿ' ಮುಖ್ಯರಸ್ತೆ,
ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾಅ(ಜಿಆರ್‌ಎನ್)/ಟೆಂಡರ್/ಜಿಎಲ್–15/2024–25 ದಿನಾಂಕ: 29–03–2025

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ದ್ವಿ–ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ–ಲಕೋಟೆ ಕಾಮಗಾರಿಗಳು
1	ಗೋವಿಂದರಾಜನಗರ ಮತಕ್ಷೇತ್ರದ ಮೈದಾನದಲ್ಲಿ ಜಿಮ್ ಉಪಕರಣಗಳನ್ನು ಒದಗಿಸುವುದು ಹಾಗೂ ಇತರೆ ಸುಂದರೀಕರಣ ಕೆಲಸಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,40,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **15–04–2025 ರಂದು 16.00 ಗಂಟೆವರೆಗೆ.** 3) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **16–04–2025 ರಂದು 16.30 ಗಂಟೆಯ ನಂತರ.** 4) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಕೆಪಿಪಿ ಪೋರ್ಟಲ್ ಮೂಲಕ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗೋವಿಂದರಾಜನಗರ ವಿಭಾಗ, ಬಿಬಿಎಂಪಿ.

ಛತ್ತೀಸಗಢದ ಸುಕ್ಮಾ, ಬಿಜಾಪುರದಲ್ಲಿ ನಡೆದ ಎನ್‌ಕೌಂಟರ್

18 ಮಂದಿ ನಕ್ಸಲರು ಸಾವು

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಹಾಗೂ ಬಿಜಾಪುರದಲ್ಲಿ ಭದ್ರತಾ ಪಡೆಗಳು ಶನಿವಾರ ನಡೆಸಿದ ಮಾವೋವಾದಿ ನಿಗ್ರಹ ಕಾರ್ಯಾಚರಣೆಯಲ್ಲಿ 11 ಮಂದಿ ಮಹಿಳಾ ನಕ್ಸಲರು ಸೇರಿದಂತೆ 18 ಮಂದಿ ಮೃತಪಟ್ಟಿದ್ದಾರೆ. ಈ ವೇಳೆ ಇಬ್ಬರು ಯೋಧರು ಗಾಯಗೊಂಡಿದ್ದಾರೆ.

ಪ್ರಧಾನಿ ಮೋದಿ ಅವರು ಭಾನುವಾರ ರಾಜ್ಯಕ್ಕೆ ಭೇಟಿ ನೀಡಲಿದ್ದು, ಮುನ್ನಾದಿನ ಈ ಎನ್‌ಕೌಂಟರ್ ನಡೆದಿದೆ.

'ಕೆರ್ಲಾಪಾಲ್ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಬೆಳಿಗ್ಗೆ 8 ಗಂಟೆಗೆ ಶೋಧ ಕಾರ್ಯ ನಡೆಸುತ್ತಿದ್ದ ವೇಳೆ ಗುಂಡಿನ ಚಕಮಕಿ ನಡೆಯಿತು. ಸ್ಥಳದಿಂದ 18 ಮಂದಿ ನಕ್ಸಲರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಬಸ್ತಾರ್ ವಿಭಾಗದ ಐಜಿಪಿ ಪಿ.ಸುಂದರರಾಜ್ ತಿಳಿಸಿದರು.

'ಕೆರ್ಲಾಪಾಲ್ ಪ್ರದೇಶದಲ್ಲಿ ನಕ್ಸಲರಿದ್ದಾರೆ ಎಂಬ ಖಚಿತ ಮಾಹಿತಿ ಆಧರಿಸಿ, ಶುಕ್ರವಾರದಂದೇ ಡಿಆರ್‌ಜಿ ಹಾಗೂ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಯೋಧರು ಕಾರ್ಯಾಚರಣೆ ಆರಂಭಿಸಿದ್ದರು. ಶನಿವಾರ ಬೆಳಿಗ್ಗೆ ಎರಡು ಕಡೆಗಳಲ್ಲಿ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ಇಬ್ಬರು ಡಿಆರ್‌ಜಿ ಸಿಬ್ಬಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದರು.

'ಎನ್‌ಕೌಂಟರ್‌ನಲ್ಲಿ ಮಾವೋವಾದಿ ಹಿರಿಯ ಕಮಾಂಡರ್ ಕುದಾಮಿ ಜಗದೀಶ್ ಕೂಡ ಮೃತಪಟ್ಟಿದ್ದಾರೆ. ಈತನ ಸುಳಿವು ನೀಡಿದವರಿಗೆ ₹25 ಲಕ್ಷ ಬಹುಮಾನ ಘೋಷಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'2013ರ ಝೀರಮ್ ಕಣಿವೆಯಲ್ಲಿ ನಡೆದ ದಾಳಿಯಲ್ಲಿ ಹಲವು ಕಾಂಗ್ರೆಸ್ ನಾಯಕರ ಸಾವಿಗೂ ಕಾರಣನಾಗಿದ್ದ, ರಾಜ್ಯದ ವಿವಿಧೆಡೆ, ಡಜನ್‌ಗೂ ಅಧಿಕ ದಾಳಿಗಳನ್ನು ನಡೆಸಿದ್ದ' ಎಂದರು.

ಬಿಜಾಪುರ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಕ್ಸಲರೊಬ್ಬರು ಮೃತಪಟ್ಟಿದ್ದಾರೆ.

'ಎನ್‌ಕೌಂಟರ್ ನಡೆದ ಸ್ಥಳದಲ್ಲಿ ಎಕೆ-47 ರೈಫಲ್, ಎಸ್‌ಎಲ್‌ಆರ್ ರೈಫಲ್, ಇನ್ಸಾಸ್ ರೈಫಲ್ ಸೇರಿದಂತೆ ಶಸ್ತ್ರಾಸ್ತ್ರಗಳು ಪತ್ತೆಯಾಗಿವೆ' ಎಂದು ಸುಂದರರಾಜ್ ಹೇಳಿದರು.

15 ನಕ್ಸಲರು ಶರಣು: ಛತ್ತೀಸಗಢದ ದಂತೇವಾಡದಲ್ಲಿ 15 ನಕ್ಸಲರು ಪೊಲೀಸರಿಗೆ ಶರಣಾಗಿದ್ದಾರೆ.


ಛತ್ತೀಸಗಢದ ಸುಕ್ಮಾದಲ್ಲಿ ಭದ್ರತಾ ಪಡೆಗಳು ಶನಿವಾರ ನಡೆಸಿದ ಎನ್‌ಕೌಂಟರ್ ಬಳಿಕ ನಕ್ಸಲರ ಮೃತದೇಹವನ್ನು ಹೊತ್ತುತಂದ ಯೋಧರು –ಪಿಟಿಐ ಚಿತ್ರ

ಶಸ್ತ್ರಾಸ್ತ್ರ ಹಾಗೂ ಹಿಂಸೆಯಿಂದ ಯಾವುದೇ ಬದಲಾವಣೆ ತರಲು ಸಾಧ್ಯವಿಲ್ಲ. ಶಾಂತಿ ಹಾಗೂ ಅಭಿವೃದ್ಧಿಯಿಂದ ಮಾತ್ರ ಸಾಧ್ಯ
ಅಮಿತ್ ಶಾ, ಕೇಂದ್ರ ಗೃಹ ಸಚಿವ
(ನಕ್ಸಲ ವಿರುದ್ಧ ಎನ್‌ಕೌಂಟರ್ ನಡೆದ ಬಳಿಕ ನೀಡಿದ ಪ್ರತಿಕ್ರಿಯೆ)

ಮತ್ತೊಬ್ಬ ಪೊಲೀಸ್ ಮೃತದೇಹ ಪತ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ನಡೆದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಶನಿವಾರ ಪೊಲೀಸ್, ಮತ್ತೊಬ್ಬರ ಮೃತದೇಹವು ಸಿಕ್ಕಿದೆ. ಇದುವರೆಗೆ ಹುತಾತ್ಮರಾದ ಪೊಲೀಸರ ಸಂಖ್ಯೆ 5ಕ್ಕೇರಿದೆ.

ಗುರುವಾರ ಬೆಳಗ್ಗೆಯಿಂದಲೇ ಎರಡು ಕಡೆಗಳಲ್ಲಿ ಭಾರಿ ಗುಂಡಿನ ಚಕಮಕಿ ನಡೆದಿತ್ತು. ಈ ವೇಳೆ ಡಿಎಸ್‌ಪಿ ಸೇರಿದಂತೆ, ಐದು ಮಂದಿ ಪೊಲೀಸರು ಗಾಯಗೊಂಡಿದ್ದರು.

ಎನ್‌ಕೌಂಟರ್ ನಡೆದ ಸ್ಥಳವೂ ಸೇರಿದಂತೆ ಸುತ್ತಲಿನ ಜಾಗಗಳಲ್ಲಿ ಪೊಲೀಸರು ವ್ಯಾಪಕ ಶೋಧ ಕಾರ್ಯ ನಡೆಸುತ್ತಿದ್ದು, ಬಾಕಿ ಉಳಿದ ಉಗ್ರರನ್ನು ಹೊಡೆದುರುಳಿಸಲು ಕಾರ್ಯತಂತ್ರ ರೂಪಿಸಿದ್ದಾರೆ. ರಾಜಬಾಗ್‌ನ ಘಾಟಿ ಜುಥಾನಾ ಪ್ರದೇಶದ ಜಾಖೋಲೆ ಗ್ರಾಮದಲ್ಲಿ ಹೊಸತಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

'ಭಾರತ ವಿರೋಧಿ ಸಂಘಟನೆಗಳಿಂದ ಕಾಮ್ರಾಗೆ ದೇಣಿಗೆ'

ಮುಂಬೈ (ಪಿಟಿಐ): ಮಹಾರಾಷ್ಟ್ರ ದಲುಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಬಗ್ಗೆ ಅಪಹಾಸ್ಯ ಮಾಡಿ ವಿವಾದಕ್ಕೆ ಸಿಲುಕಿರುವ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ವಿರುದ್ಧ ಮತ್ತೊಂದು ಗಂಭೀರ ಆರೋಪ ಕೇಳಿಬಂದಿದೆ. ಕಾಮ್ರಾ ಅವರು 'ಭಾರತ ವಿರೋಧಿ' ವಿದೇಶಿ ಸಂಘಟನೆಗಳಿಂದ ಹಣ ಪಡೆದಿದ್ದಾರೆ ಎಂದು ಶಿವಸೇನಾ ನಾಯಕ ಸಂಜಯ್ ನಿರುಪಮ್ ಶನಿವಾರ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಾಮ್ರಾ ಅವರು ಕೆನಡಾ, ಆಸ್ಟ್ರೇಲಿಯಾ, ಕತಾರ್, ಸೌದಿ ಅರೇಬಿಯಾ ಹಾಗೂ ಅಮೆರಿಕದಲ್ಲಿನ ಸಂಘಟನೆಗಳಿಂದ ₹4 ಕೋಟಿ ದೇಣಿಗೆ ಪಡೆದಿದ್ದಾರೆ. ದೇಣಿಗೆ ನೀಡಿರುವ ಬಹುತೇಕರು ಒಂದೇ ಧರ್ಮದವರು. ಕಾಮ್ರಾಗೆ ನೆರವು ನೀಡುವಂತೆ ದೇಣಿಗೆ ನೀಡಿರುವವರಿಗೆ 'ಫತ್ವಾ' ಹೊರಡಿಸಲಾಗಿತ್ತೇ' ಎಂದು ಪ್ರಶ್ನಿಸಿದ್ದಾರೆ.

ಚಿಣ್ಣರ ಪ್ರಾರ್ಥನೆ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ಮಡಿದವರ ಆತ್ಮಕ್ಕೆ ಶಾಂತಿ ಕೋರಿ ಅಮೃತಸರದಲ್ಲಿ ಶಾಲಾ ಮಕ್ಕಳು ಶನಿವಾರ ಮೇಣದ ಬತ್ತಿ ಬೆಳಗಿ ಪ್ರಾರ್ಥಿಸಿದರು. –ಎಎಫ್‌ಪಿ ಚಿತ್ರ

ಸುದ್ದಿ 2 ನಿಮಿಷ

'ಬ್ಯಾಂಕ್‌ಗಳನ್ನು ಕಲೆಕ್ಷನ್ ಏಜೆಂಟ್ ಮಾಡಿದ ಮೋದಿ'

ನವದೆಹಲಿ (ಪಿಟಿಐ): ಎಟಿಎಂನಲ್ಲಿ ಗ್ರಾಹಕರು ನಗದು ಪಡೆಯುವುದರ ಮೇಲಿನ ಶುಲ್ಕವನ್ನು ಹೆಚ್ಚಿಸಲು ಬ್ಯಾಂಕ್‌ಗಳಿಗೆ ಆರ್‌ಬಿಐ ಅವಕಾಶ ನೀಡಿರುವ ಬಗ್ಗೆ ಮೋದಿ ಸರ್ಕಾರವನ್ನು ಶನಿವಾರ ಟೀಕಿಸಿರುವ ಕಾಂಗ್ರೆಸ್, 'ಜನರ ಹಣವನ್ನು ಕೊಳ್ಳೆಹೊಡೆಯಲು ಬ್ಯಾಂಕ್‌ಗಳನ್ನು 'ಕಲೆಕ್ಷನ್ ಏಜೆಂಟ್'ಗಳನ್ನಾಗಿ ಮಾಡಲಾಗಿದೆ' ಎಂದು ಹೇಳಿದೆ.

'ಸಂಕಟವೊಡ್ಡುವ ಬೆಲೆ ಏರಿಕೆ ಮತ್ತು ನಿರಂತರ ಲೂಟಿಯು ಬಿಜೆಪಿಯ ಮಂತ್ರವಾಗಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಉಳಿತಾಯ ಖಾತೆ ಮತ್ತು ಜನಧನ್ ಖಾತೆಯಲ್ಲಿ ಕನಿಷ್ಠ ಠೇವಣಿ ಮೊತ್ತ ಹೊಂದಿರದ ಕಾರಣಕ್ಕೆ 2018ರಿಂದ 2024ರ ಅವಧಿಯಲ್ಲಿ ₹43,500 ಕೋಟಿಯಷ್ಟು ಹಣವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಕೊಳ್ಳೆಹೊಡೆದಿದೆ' ಎಂದು ಖರ್ಗೆ ಆರೋಪಿಸಿದ್ದಾರೆ.

'ಇತರ ಶುಲ್ಕದ ಹೆಸರಿನಲ್ಲಿ ಬ್ಯಾಂಕ್‌ಗಳು ಗ್ರಾಹಕರ ಹಣವನ್ನು ಪಡೆದುಕೊಳ್ಳುತ್ತಿವೆ. ಈ ಕುರಿತಾದ ದತ್ತಾಂಶಗಳನ್ನು ಕೇಂದ್ರ ಸರ್ಕಾರವು ಸಂಸತ್ತಿಗೆ ತಿಳಿಸುವ ಪದ್ಧತಿಯಿತ್ತು. ಆದರೆ ಈಗ ಆರ್‌ಬಿಐ ಈ ಕುರಿತಾದ ದತ್ತಾಂಶಗಳನ್ನು ಸಂಗ್ರಹಿಸುತ್ತಿಲ್ಲ' ಎಂದು ಹೇಳಿದರು.



'ಬಿಜೆಪಿ ಸ್ವಜನಪಕ್ಷಪಾತದಿಂದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಕಷ್ಟ'

ನವದೆಹಲಿ (ಪಿಟಿಐ): 'ಕೇಂದ್ರದ ಬಿಜೆಪಿ ಸರ್ಕಾರದ ಸ್ವಜನಪಕ್ಷಪಾತ ಹಾಗೂ ತಪ್ಪು ನಿರ್ವಹಣೆಯಿಂದಾಗಿ ಭಾರತದ ಬ್ಯಾಂಕಿಂಗ್ ವಲಯವು ಸಂಕಷ್ಟದಲ್ಲಿದೆ. ಇದರಿಂದ, ಕೆಳಹಂತದ ನೌಕರರು ಒತ್ತಡದ ಸ್ಥಿತಿಗೆ ಸಿಲುಕಿದ್ದಾರೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಬಿಜೆಪಿ ಸರ್ಕಾರವು 'ಬಿಲಿಯನೇರ್ ಸ್ನೇಹಿತ'ರ ₹16 ಲಕ್ಷ ಕೋಟಿ ಸಾಲವನ್ನು ರೈಟ್‌ಆಫ್ ಮಾಡಿದೆ. ಸರ್ಕಾರದ ಆರ್ಥಿಕ ತಪ್ಪು ನಿರ್ವಹಣೆಯಿಂದ ಸಾವಿರಾರು ಪ್ರಾಮಾಣಿಕ ಉದ್ಯೋಗಿಗಳ ಜೀವನಕ್ಕೆ ಕುತ್ತು ಬಂದಿದೆ' ಎಂದು 'ಎಕ್ಸ್'ನಲ್ಲಿ ದೂರಿದ್ದಾರೆ.

ಐಸಿಐಸಿಐ ಬ್ಯಾಂಕ್‌ನ 782 ನೌಕರರ ನಿಯೋಗವನ್ನು ಶುಕ್ರವಾರ ಸಂಸತ್ ಭವನದಲ್ಲಿ ಭೇಟಿಯಾದ ವಿಡಿಯೊವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಾಕಿ ಈ ವಿಷಯ ಪ್ರಸ್ತಾಪಿಸಿದ್ದಾರೆ.

'ಒತ್ತಾಯಪೂರ್ವಕವಾಗಿ ವರ್ಗಾವಣೆ, ಸೂಕ್ತ ನಿಯಮವಿಲ್ಲದೇ ವಜಾ ಪ್ರಕ್ರಿಯೆಯಿಂದ ಇಬ್ಬರು ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದಿದ್ದಾರೆ.

'ಸಂಸತ್ತಿನಲ್ಲಿ ಚರ್ಚೆಗೆ ಕೇಂದ್ರ ಸರ್ಕಾರ ಅಡ್ಡಿ'

ವಯನಾಡ್ (ಪಿಟಿಐ): ಸಂಸತ್ತಿನಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಕೇಂದ್ರ ಸರ್ಕಾರವು ಅಡ್ಡಿಪಡಿಸುತ್ತಿದೆ. ಅಲ್ಲದೆ, ಯಾವುದೇ ವಿಷಯದ ಬಗ್ಗೆ ಸಮಗ್ರ ಚರ್ಚೆಯನ್ನು ತಡೆಹಿಡಿಯುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಆರೋಪಿಸಿದ್ದಾರೆ.

'ತನ್ನ ತಂತ್ರಗಳನ್ನು ಬಳಸಿ ಚರ್ಚೆಯನ್ನು ತಡೆಹಿಡಿಯಲು ಎಲ್ಲ ಯತ್ನಗಳನ್ನು ಮಾಡುತ್ತಿದೆ' ಎಂದರು.

ಕೆಲವು ಸಂದರ್ಭಗಳಲ್ಲಿ ಪ್ರತಿಪಕ್ಷಗಳು ಸಂಸತ್ತನ್ನು ಹಾಳು ಮಾಡುತ್ತಿವೆ ಎಂಬುದಾಗಿ ಆರೋಪಿಸಲಾಗುತ್ತಿದೆ. ಆದರೆ, ಈ ಸರ್ಕಾರವೇ ಸಂಸತ್ತಿನ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದೆ ಎಂದು ದೂರಿದರು.

'ಬಿಜೆಪಿ-ಎಐಎಡಿಎಂಕೆ ಮೈತ್ರಿ ಚರ್ಚೆ'

2026ಕ್ಕೆ ತಮಿಳುನಾಡಿನಲ್ಲಿ ಎನ್‌ಡಿಎ ಮೈತ್ರಿ ಸರ್ಕಾರ: ಶಾ

ಪ್ರಜಾವಾಣಿ ವಾರ್ತೆ

ಚೆನ್ನೈ: ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಎಐಎಡಿಎಂಕೆ ಜೊತೆ ಮೈತ್ರಿಗಾಗಿ ಉಭಯ ಪಕ್ಷಗಳೊಂದಿಗೆ (ಬಿಜೆಪಿ-ಎಐಎಡಿಎಂಕೆ) ಮಾತುಕತೆ ಆರಂಭವಾಗಿದೆ ಎಂಬ ವಿಚಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ.

2026ರಲ್ಲಿ ತಮಿಳುನಾಡು ವಿಧಾನಸಭೆ ಚುನಾವಣೆ ನಡೆಯಲಿದೆ.

ಇತ್ತೀಚೆಗೆ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾಗ ರಾಜಕೀಯದ ಬಗ್ಗೆ ಚರ್ಚಿಸಿಲ್ಲ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಹೇಳಿದ್ದರು. ಅದರ ಬೆನ್ನಲ್ಲೇ ಹೊರಬಿದ್ದಿರುವ ಅಮಿತ್ ಶಾ ಅವರ ಈ ಹೇಳಿಕೆಯು ರಾಜಕೀಯ ವಲಯದಲ್ಲಿ ಮಹತ್ವ ಪಡೆದಿದೆ.

ವಾಹಿನಿಯೊಂದು ಏರ್ಪಡಿಸಿದ ಶೃಂಗದಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಶಾ, 'ತಮಿಳುನಾಡು ರಾಜಕೀಯ ವಿಚಾರವಾಗಿ ನಮ್ಮ ಸ್ನೇಹಿತ ಎಐಎಡಿಎಂಕೆ ನಾಯಕರೊಂದಿಗೆ ರಾಜ್ಯ ಬಿಜೆಪಿ ನಾಯಕರು ಮಾತುಕತೆ ನಡೆಸುತ್ತಿದ್ದಾರೆ. ಈ ಕುರಿತು ಅಂತಿಮ ನಿರ್ಧಾರಕ್ಕೆ ಬಂದಮೇಲೆ ಬಹಿರಂಗಗೊಳಿಸಲಾಗುವುದು' ಎಂದರು.

2026ರ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಡಿಎಂಕೆ ಆಡಳಿತವು ಕೊನೆಗಾಣಲಿದ್ದು, ಎನ್‌ಡಿಎ ನೇತೃತ್ವದ ಹೊಸ ಸರ್ಕಾರ ರಚನೆಯಾಗಲಿದೆ ಎಂದಿದ್ದಾರೆ.

'ಮಣಿಪುರ: ಸಕಾಲದಲ್ಲಿ ರಾಷ್ಟ್ರಪತಿ ಆಳ್ವಿಕೆ'

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಶಾಂತಿ ಮರುಸ್ಥಾಪಿಸಲು ಸೂಕ್ತ ಸಮಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿದೆ. ಶಾಶ್ವತವಾಗಿ ಶಾಂತಿ ಸ್ಥಾಪಿಸಲು ಮೈತೇಯಿ ಮತ್ತು ಕುಕಿ ಸಮುದಾಯಗಳೊಂದಿಗೆ ಸರ್ಕಾರ ಮಾತುಕತೆ ನಡೆಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ.

ಮಣಿಪುರದಲ್ಲಿ ಕೇಂದ್ರ ಆಡಳಿತ ಹೇರಿಕೆಯಲ್ಲಿ ವಿಳಂಬವಾಗಿದೆಯೇ ಎಂದು ಕೇಳಿದಾಗ, 'ದೂರ ಕುಳಿತು ಅಭಿಪ್ರಾಯ ಹೇಳುವುದು ಸುಲಭ. ಎರಡೂ ಸಮುದಾಯಗಳು ಒಪ್ಪಿಕೊಳ್ಳದಿದ್ದರೆ, ರಾಷ್ಟ್ರಪತಿ ಆಳ್ವಿಕೆ ಯಶಸ್ವಿಯಾಗುತ್ತಿರಲಿಲ್ಲ' ಎಂದಿದ್ದಾರೆ.

'ಜಮ್ಮು-ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ': ಈ ಹಿಂದೆ ನೀಡಿದ ಭರವಸೆಯಂತೆ ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸಲಾಗುವುದು ಎಂದು ಅಮಿತ್ ಶಾ ಅವರು ತಿಳಿಸಿದ್ದಾರೆ. ಆದರೆ, ಯಾವಾಗ ರಾಜ್ಯ ಸ್ಥಾನಮಾನ ನೀಡಲಾಗುತ್ತದೆ ಎಂಬುದನ್ನು ಸಾರ್ವಜನಿಕ ವೇದಿಕೆಯಲ್ಲಿ ಬಹಿರಂಗಪಡಿಸುವುದಿಲ್ಲ ಎಂದಿದ್ದಾರೆ.

ಮಸೀದಿಗೆ ಹೋದ ಹಿಂದೂ ವ್ಯಾಪಾರಿ ಶುದ್ಧೀಕರಣಕ್ಕೆ ಒತ್ತಡ

ಅಲಿಗಢ (ಪಿಟಿಐ): ಉತ್ತರ ಪ್ರದೇಶದ ಅಲಿಗಢದ ಮಸೀದಿಯೊಂದರ ಪ್ರಾರ್ಥನೆಯಲ್ಲಿ ಹಿಂದೂ ವ್ಯಾಪಾರಿಯೊಬ್ಬರು ಸ್ವಯಂ ಪ್ರೇರಿತವಾಗಿ ಭಾಗಿಯಾಗಿದ್ದು ಭಾರಿ ವಿವಾದದ ಕಿಡಿ ಹೊತ್ತಿಸಿದೆ. ಹಿಂದೂ ವ್ಯಕ್ತಿಗೆ ಸ್ವಯಂ ಶುದ್ಧೀಕರಣ ಮಾಡಿಕೊಳ್ಳುವಂತೆ ಬಲಪಂಥೀಯ ಸಂಘಟನೆಗಳ ಮುಖಂಡರು ಒತ್ತಡ ಹೇರಿದ್ದಾರೆ.

ಬಹು ಧರ್ಮೀಯರು ವಾಸಿಸುವ ಮಮೂ ಭಾಂಜಾ ಪ್ರದೇಶದಲ್ಲಿ ಅಂಗಡಿ ನಡೆಸುತ್ತಿದ್ದ ಸುನಿಲ್ ರಜನಿ ಗುರುವಾರ ಸಂಜೆ ನೆರೆಯ ಮುಸ್ಲಿಮರ ಜೊತೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಯಾಗಿದ್ದ ವಿಡಿಯೊ ಹರಿದಾಡಿತ್ತು.

ಮಸೀದಿಯಿಂದ ಹೊರ ಬರುತ್ತಿದ್ದಂತೆ ರಜನಿ ಅವರನ್ನು ಬೆದರಿಸಿದ್ದ ಹಿಂದೂ ಸಂಘಟನೆಗಳ ಸದಸ್ಯರು, ಇದೊಂದು ಪ್ರಚೋದನೆ ಎಂದು ತಕ್ಷಣವೇ ಗಂಗಾಜಲ ಪ್ರೋಕ್ಷಿಸಿ ಸ್ವಯಂ 'ಶುದ್ಧೀಕರಣ'ಕ್ಕೆ ಯತ್ನಿಸಿದ್ದರು.

'ರಜನಿಯು ಧರ್ಮಬಾಹಿರ ಕೃತ್ಯ ಮಾಡಿದ್ದು, ಬಹಿರಂಗವಾಗಿ ಕ್ಷಮೆ ಕೇಳಬೇಕು. ದೇಗುಲದಲ್ಲಿ ಶುದ್ಧೀಕರಣ ಮಾಡಿಸಿಕೊಳ್ಳಬೇಕು' ಎಂದು ಭಾರತೀಯ ಜನತಾ ಯುವ ಮೋರ್ಚಾ- (ಬಿಜೆವೈಎಮ್) ಮುಖಂಡ ಮೋನು ಅಗರ್ವಾಲ್ ಮಾಧ್ಯಮಗಳ ಮುಂದೆ ಆಗ್ರಹಿಸಿದ್ದಾರೆ.

ಈವರೆಗೂ ಶುದ್ಧೀಕರಣದ ವಿಚಾರವಾಗಿ ಯಾವುದೇ ಅಧಿಕೃತ ದೂರು ದಾಖಲಾಗಿಲ್ಲ.

ಹೊಟ್ಟೆಯಲ್ಲೇ ಹತ್ತಿಯುಂಡೆ ಬಿಟ್ಟ ವೈದ್ಯೆ

ಮೀರತ್ (ಪಿಟಿಐ): ಸಿಸೇರಿಯನ್ (ಶಸ್ತ್ರ-ಚಿಕಿತ್ಸೆ) ಮೂಲಕ ಹೆರಿಗೆ ಮಾಡಿಸಿದ ವೈದ್ಯೆಯೊಬ್ಬರು ರಕ್ತದ ಕಲೆ ಒರೆಸಲು ಬಳಸಿದ ಹತ್ತಿಯ ಉಂಡೆಯನ್ನು ಮಹಿಳೆ ಹೊಟ್ಟೆಯಲ್ಲೇ ಬಿಟ್ಟಿದ್ದ ಘಟನೆ ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದಿದೆ.

ಈ ಸಂಬಂಧ ರಜನಿ ಶರ್ಮಾ ನೀಡಿದ ದೂರಿನ ಮೇರೆಗೆ ನ್ಯಾಯಾಲಯ ನೀಡಿದ ಆದೇಶದ ಮೇರೆಗೆ ಈ ನಿರ್ಲಕ್ಷ್ಯ ತೋರಿದ ವೈದ್ಯೆ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'2018ರ ಜೂನ್ 30ರಂದು ನಾನು ಸಿರೋಹಿ ನರ್ಸಿಂಗ್ ಹೋಂನಲ್ಲಿ ಹೆಣ್ಣುಮಗುವಿಗೆ ಜನ್ಮ ನೀಡಿದ್ದೆ. ಆಗ ಡಾ. ಶಿಖಾ ಜೈನ್ ಅವರು ಶಸ್ತ್ರಚಿಕಿತ್ಸೆ ನಡೆಸಿದ್ದರು. ಆ ಬಳಿಕ ನನಗೆ ಆಗಾಗ ವಿಪರೀತ ಹೊಟ್ಟೆನೋವು ಕಾಣಿಸಿಕೊಳ್ಳಲಾರಂಭಿಸಿತು. ಪರಿಸ್ಥಿತಿ ತೀರ ಹದಗೆಟ್ಟಾಗ ನಾನು ವೈದ್ಯಕೀಯ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೆ. ಆಗ, ವೈದ್ಯೆ ಡಾ. ಶಿಖಾ ಜೈನ್ ಅವರ ನಿರ್ಲಕ್ಷ್ಯದಿಂದ ನನ್ನ ಹೊಟ್ಟೆಯಲ್ಲೇ ಬಿಟ್ಟಿದ್ದ ಅರಳೆಯಿಂದ ಹೊಟ್ಟೆನೋವು ಕಾಣಿಸಿಕೊಳ್ಳುತ್ತಿತ್ತು ಎಂಬುದು ಗೊತ್ತಾಗಿದೆ' ಎಂದು ರಜನಿ ಶರ್ಮಾ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಖುಲಾಸೆಗೆ ಲಾಲು, ರಾಬ್ಡಿ, ತೇಜಸ್ವಿ ಮನವಿ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ಆಹಾರ ಪೂರೈಕೆ ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ)ಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಖುಲಾಸೆಗೊಳಿಸುವಂತೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಅವರ ಪತ್ನಿ ರಾಬ್ಡಿ ದೇವಿ ಮತ್ತು ಮಗ ತೇಜಸ್ವಿ ಯಾದವ್ ಅವರು ನ್ಯಾಯಾಲಯಕ್ಕೆ ಶನಿವಾರ ಮನವಿ ಮಾಡಿದ್ದಾರೆ.

'ಸಿಬಿಐ ನಮ್ಮನ್ನು ಸುಮ್ಮನೆ ಆಯ್ಕೆ ಮಾಡಿದೆ, ನಮ್ಮ ವಿರುದ್ಧದ ಆರೋಪ ಸುಳ್ಳು' ಎಂದು ಮೂವರೂ ಆರೋಪಿಗಳು ವಿಶೇಷ ನ್ಯಾಯಾಧೀಶರಾದ ವಿಶಾಲ್ ಗೋಗ್ನೆ ಅವರನ್ನು ಕೋರಿದ್ದಾರೆ.

'ಐಆರ್‌ಸಿಟಿಸಿಗೆ ಸೇರಿದ ಹೋಟೆಲ್‌ನ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. 2004ರಿಂದ 2014ರವರೆಗೆ ಇದರಲ್ಲಿ ಅಕ್ರಮ ನಡೆದಿದೆ. ಲಾಲು ಪ್ರಸಾದ್ ಮತ್ತು ಅವರ ಕುಟುಂಬಸ್ಥರು ಭ್ರಷ್ಟಾಚಾರ ನಡೆಸಿರುವುದಕ್ಕೆ ಸಾಕ್ಷ್ಯಗಳಿವೆ' ಎಂದು ಸಿಬಿಐ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 21ಕ್ಕೆ ಮುಂದೂಡಲಾಗಿದೆ.

ಎಂಬಿಎ ಉತ್ತರ ಪತ್ರಿಕೆ ನಾಪತ್ತೆ

ತಿರುವನಂತಪುರ (ಪಿಟಿಐ): ಕೇರಳ ವಿಶ್ವವಿದ್ಯಾಲಯವೊಂದರ ಬೋಧಕರ ಬಳಿಯಿದ್ದ 71 ಎಂಬಿಎ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ನಾಪತ್ತೆಯಾಗಿವೆ. ಇದು ರಾಜಕೀಯ ತಿರುವು ಪಡೆದಿದ್ದು, ಮರು ಪರೀಕ್ಷೆ ನಡೆಸುವ ತೀರ್ಮಾನಕ್ಕೆ ವಿರೋಧ ಪಕ್ಷ ಯುನೈಟೆಡ್ ಡೆಮಾಕ್ರಟಿಕ್ ಫೆಡರೇಷನ್ (ಯುಡಿಎಫ್) ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಪ್ರಕರಣ ರಾಜ್ಯ ಸರ್ಕಾರದ ದುರಾಡಳಿತ ಮತ್ತು ಉನ್ನತ ಶಿಕ್ಷಣದಲ್ಲಿ ಮಿತಿಮೀರಿದ ರಾಜಕೀಯಕ್ಕೆ ಉದಾಹರಣೆ ಎಂದು ಯುಡಿಎಫ್ ನಾಯಕ ಸತೀಶನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

2022–24ನೇ ಬ್ಯಾಚ್‌ನ 'ಪ್ರಾಜೆಕ್ಟ್ ಫೈನಾನ್ಸ್' ವಿಷಯದ ಮೂರನೇ ಸೆಮಿಸ್ಟರ್ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕಾಗಿ ಪಾಲಕ್ಕಾಡ್ ಮೂಲದ ಬೋಧಕ ಪ್ರಮೋದ್ ಎಂಬುವವರಿಗೆ ನೀಡಲಾಗಿತ್ತು. ಬೈಕ್‌ನಲ್ಲಿ ತೆರಳುತ್ತಿದ್ದಾಗ ಉತ್ತರ ಪತ್ರಿಕೆಗಳು ಕಳೆದುಹೋಗಿವೆ ಎಂದು ವಿಶ್ವವಿದ್ಯಾಲಯಕ್ಕೆ ಅವರು ಮಾಹಿತಿ ನೀಡಿದ್ದರು.

ಕೋರ್ಸ್ ಮುಗಿದರೂ ಫಲಿತಾಂಶ ಘೋಷಿಸದೇ ಪ್ರಕರಣ ಮುಚ್ಚಿಹಾಕುವ ಯತ್ನ ನಡೆದಿದೆ. ಪರೀಕ್ಷೆ ನಡೆದ 10 ತಿಂಗಳ ನಂತರ ಮರು ಪರೀಕ್ಷೆ ತಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ವಿವಿ ಸೂಚಿಸುತ್ತಿದೆ. ವಿವಿ ಮಾಡಿದ ತಪ್ಪಿಗೆ ವಿದ್ಯಾರ್ಥಿಗಳು ಶಿಕ್ಷೆ ಅನುಭವಿಸಬೇಕೆ ಎಂದು ಸತೀಶನ್ ಪ್ರಶ್ನಿಸಿದ್ದಾರೆ.

ಉನ್ನತ ಶಿಕ್ಷಣ ಸಚಿವೆ ಆರ್. ಬಿಂದು ಪ್ರತಿಕ್ರಿಯಿಸಿ, 'ಇದು ಬೋಧಕರೊಬ್ಬರ ನಿರ್ಲಕ್ಷ್ಯ. ಉದ್ದೇಶಪೂರ್ವಕವಾಗಿಯೇ ಉತ್ತರ ಪತ್ರಿಕೆ ನಾಪತ್ತೆ ಮಾಡಿರಬಹುದು. ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಾನೂನು ಕ್ರಮ ಜರುಗಿಸಲಿದೆ' ಎಂದಿದ್ದಾರೆ.

ಮನೆಯಲ್ಲಿ ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆ ಅವಕಾಶ ನೀಡಿದ್ದೇ ವಿವಿಯ ಲೋಪ. ಕಾನೂನು ರೀತಿ ಇದನ್ನು ಎದುರಿಸಲು ಸಿದ್ಧ ಎಂದು ಪ್ರಮೋದ್ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ದೇವಸ್ಥಾನಕ್ಕೆ ಹಾನಿ: ಪ್ರತಿಭಟನೆ

ಜೈಪುರ (ಪಿಟಿಐ): ರಾಜಸ್ಥಾನದ ಟೋಂಕ್ ರಸ್ತೆಯಲ್ಲಿರುವ ತೇಜಾಜಿ ದೇವಸ್ಥಾನದಲ್ಲಿರುವ ಮೂರ್ತಿ ಭಗ್ನಗೊಳಿಸಲಾಗಿದೆ ಎಂದು ಆರೋಪಿಸಿ ಸ್ಥಳೀಯ ನಾಗರಿಕರು, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಸದಸ್ಯರ ಜೊತೆಗೂಡಿ ಶನಿವಾರ ಪ್ರತಿಭಟಿಸಿದರು.

ಟೋಂಕ್ ರಸ್ತೆ ತಡೆದು ಪ್ರತಿಭಟನೆ ನಡೆಸಿದ ಹಿಂದೂಪರ ಸಂಘಟನೆಗಳು, ಈ ಕೃತ್ಯವೆಸಗಿದವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಗಲಭೆಕೋರರನ್ನು ಚದುರಿಸಲು ಪೊಲೀಸರು ಲಘು ಬಲಪ್ರಯೋಗ ಮಾಡಿದರು. ಕೆಲವು ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಉದ್ರಿಕ್ತರ ಗುಂಪೊಂದು ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚಲು ಯತ್ನಿಸಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪರೀಕ್ಷೆಗೆ ನಿರಾಕರಣೆ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರತಾಪಗಢ (ಪಿಟಿಐ): ಉತ್ತರ ಪ್ರದೇಶದ ಪ್ರತಾಪಗಢ ಜಿಲ್ಲೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ವಾರ್ಷಿಕ ಪರೀಕ್ಷೆ ಬರೆಯಲು ಶಾಲಾ ಆಡಳಿತ ಮಂಡಳಿ ಅನುಮತಿ ನೀಡದೆ, ಅವಮಾನಿಸಿದ್ದಕ್ಕೆ ಬೇಸತ್ತು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕಮಲಾ ಶರಣ್ ಯಾದವ್ ಇಂಟರ್ ಕಾಲೇಜಿನ ವಿದ್ಯಾರ್ಥಿನಿ ರಿಯಾ ಪ್ರಜಾಪತಿ (17) ಬಾಕಿ ₹800 ಶುಲ್ಕ ಪಾವತಿಸದ ಕಾರಣ ಪರೀಕ್ಷಾ ಪ್ರವೇಶಪತ್ರ ನೀಡಿಲ್ಲ ಎಂದು ಆಕೆಯ ತಾಯಿ ಪೂನಂ ದೇವಿ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.

17 ವರ್ಷಗಳಷ್ಟು ಹಿಂದಿನ ಪ್ರಕರಣ • ತನಿಖೆ ನಡೆಸಿದ್ದ ಸಿಬಿಐ

ನಗದು ಪತ್ತೆ ಪ್ರಕರಣ: ನ್ಯಾ. ನಿರ್ಮಲ್ ಯಾದವ್ ನಿರ್ದೋಷಿ

ಚಂಡೀಗಢ (ಪಿಟಿಐ): ನ್ಯಾಯಮೂರ್ತಿಯೊಬ್ಬರ ಮನೆ ಬಾಗಿಲಿನಲ್ಲಿ ನಗದು ಪತ್ತೆಯಾದ ಪ್ರಕರಣವು ದೇಶದ ನ್ಯಾಯಾಂಗದಲ್ಲಿ ಭಾರಿ ಸಂಚಲನ ಸೃಷ್ಟಿಸಿದ 17 ವರ್ಷಗಳ ನಂತರ ಸಿಬಿಐ ವಿಶೇಷ ನ್ಯಾಯಾಲಯವು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಿರ್ಮಲ್ ಯಾದವ್ ಹಾಗೂ ನಾಲ್ಕು ಮಂದಿ ಇತರರನ್ನು ದೋಷಮುಕ್ತಗೊಳಿಸಿದೆ.

₹15 ಲಕ್ಷ ನಗದು ಇರುವ ಪೊಟ್ಟಣವನ್ನು 2008ರ ಆಗಸ್ಟ್ 13ರಂದು ನ್ಯಾಯಮೂರ್ತಿ ನಿರ್ಮಲ್‌ಜಿತ್ ಕೌರ್ ನಿವಾಸಕ್ಕೆ ತಪ್ಪಾಗಿ ತಲುಪಿಸಲಾಗಿತ್ತು. ಪ್ರಭಾವ ಬೀರಲು ನ್ಯಾಯಮೂರ್ತಿ ಯಾದವ್ ಅವರಿಗೆ ತಲುಪಿಸಬೇಕಿದ್ದ ಹಣ ಇದಾಗಿತ್ತು ಎಂದು ಆರೋಪಿಸಲಾಗಿತ್ತು.

ಪ್ರಕರಣದ ಬಗ್ಗೆ ಚಂಡೀಗಢ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಇದಾದ ನಂತರ ಎಫ್‌ಐಆರ್ ದಾಖಲಿಸಲಾಗಿತ್ತು. ನಂತರ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲಾಯಿತು.

ಸಿಬಿಐ ವಿಶೇಷ ನ್ಯಾಯಾಲಯದ ಆದೇಶದ ಬಗ್ಗೆ ಪ್ರತಿಕ್ರಿಯಿಸಿರುವ ನ್ಯಾಯಮೂರ್ತಿ ನಿರ್ಮಲ್ ಯಾದವ್, 'ನಾನು ತಪ್ಪು ಮಾಡಿರಲಿಲ್ಲ. ನ್ಯಾಯಾಂಗ ವ್ಯವಸ್ಥೆಯಲ್ಲಿ ನನಗೆ ನಂಬಿಕೆ ಇದೆ' ಎಂದು ಹೇಳಿದ್ದಾರೆ.

'ನ್ಯಾಯಮೂರ್ತಿ ಯಾದವ್ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಲಾಗಿತ್ತು' ಎಂದು ಅವರ ಪರ ವಕೀಲ ವಿಶಾಲ್ ಗರ್ಗ್ ನರ್ವಾಣ ಹೇಳಿದ್ದಾರೆ.

'ಖುದ್ದು ಹಾಜರಿಯಿಂದ ನನಗೆ ವಿನಾಯಿತಿ ಇತ್ತು... ನನಗೆ ನಿವೃತ್ತಿಗೆ ಮೊದಲು ಜೀವನದಲ್ಲಿ ಭಾರಿ ನಿರೀಕ್ಷೆಗಳು ಇದ್ದವು. ಅತ್ಯುನ್ನತ ನ್ಯಾಯಾಲಯಕ್ಕೆ ಪದೋನ್ನತಿ ಹೊಂದಬೇಕು ಎಂಬ ಬಯಕೆ ಇತ್ತು. ಆದರೆ ಇದರ ಕಾರಣದಿಂದಾಗಿ ನನಗೆ ಆಗಲಿಲ್ಲ... ನನಗೆ ವಿಷಾದ ಇಲ್ಲ, ಈ ಸಮಯವನ್ನು ನಾವು ಧನಾತ್ಮಕವಾಗಿ ಕೆಲಸ ಮಾಡಲು ಬಳಸಿಕೊಂಡಿದ್ದೇನೆ' ಎಂದು ಯಾದವ್ ಅವರು ಹೇಳಿದ್ದಾರೆ.

'ನಾನು ನೋವು ತಿಂದಿರುವುದು ನಿಜ. ಆದರೆ ವಿಧಿ ಆ ರೀತಿ ಇತ್ತು... ನ್ಯಾಯಾಂಗ ವ್ಯವಸ್ಥೆ ನ್ಯಾಯ ಕೊಟ್ಟಿದೆ' ಎಂದು ಅವರು ಹೇಳಿದ್ದಾರೆ.

ಈ ಪ್ರಕರಣದಲ್ಲಿ ನ್ಯಾಯಮೂರ್ತಿ ಯಾದವ್ ಹೆಸರು ಕೇಳಿಬಂದ ನಂತರ ಅವರನ್ನು ಉತ್ತರಾಖಂಡ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಯಿತು. 2009ರ ಡಿಸೆಂಬರ್‌ನಲ್ಲಿ ಸಿಬಿಐ ಪರಿಸಮಾಪ್ತಿ ವರದಿ ಸಲ್ಲಿಸಿತು. ಆದರೆ ಅದನ್ನು ನ್ಯಾಯಾಲಯ ತಿರಸ್ಕರಿಸಿ, ಮರುತನಿಖೆಗೆ ಆದೇಶಿಸಿತ್ತು.

ಯಾದವ್ ವಿರುದ್ಧ ಕ್ರಮ ಜರುಗಿಸಲು ಸಿಬಿಐ ಅನುಮತಿ ಕೋರಿದಾಗ, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಿಬಿಐಗೆ ಅನುಮತಿ ನೀಡಿದ್ದರು. ಅನುಮತಿಗೆ 2011ರ ಮಾರ್ಚ್‌ನಲ್ಲಿ ರಾಷ್ಟ್ರಪತಿ ಅನುಮೋದನೆ ನೀಡಿದ್ದರು.

ನ್ಯಾಯಮೂರ್ತಿ ಯಾದವ್ ಅವರ ನಿವೃತ್ತಿಯ ದಿನವೇ ಅವರ ವಿರುದ್ಧ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಕೆ.ಆರ್.ಮಾರುಕಟ್ಟೆಯಲ್ಲಿ ಹೂವು ಖರೀದಿಗೆ ಶನಿವಾರ ಜನರು ಜಮಾಯಿಸಿದ್ದರಿಂದ ಜನದಟ್ಟಣೆ ಉಂಟಾಗಿತ್ತು —ಚಿತ್ರ; ಎಂ.ಎಸ್.ಮಂಜುನಾಥ್

ಯುಗಾದಿ ಮಾರುಕಟ್ಟೆಯಲ್ಲಿ ಖರೀದಿ ಭರಾಟೆ

ಬೇವು–ಬೆಲ್ಲದ ಹಬ್ಬಕ್ಕೆ ಭರದ ಸಿದ್ಧತೆ ಹೂವಿನ ಬೆಲೆಯಲ್ಲಿ ಕೊಂಚ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಮುನ್ನಾ ದಿನವಾದ ಶನಿವಾರ ನಗರದ ವಿವಿಧ ಮಾರುಕಟ್ಟೆಗಳಲ್ಲಿ ಹಣ್ಣು, ಹೂವು ಸೇರಿದಂತೆ ಹಬ್ಬದ ಆಚರಣೆಗೆ ಅತ್ಯಗತ್ಯವಾಗಿ ಬೇಕಾದ ವಸ್ತುಗಳ ಖರೀದಿಯ ಭರಾಟೆ ಜೋರಾಗಿತ್ತು.

ನಗರದ ಪ್ರಮುಖ ರಸ್ತೆಗಳ ಇಕ್ಕೆಲಗಳಲ್ಲಿಯೂ ಮಾವು ಮತ್ತು ಬೇವಿನ ಹೂವಿನ ರಾಶಿ ಇರಿಸಲಾಗಿದ್ದು, ಜನರು ಸಂಭ್ರಮದಿಂದ ಖರೀದಿಸಿದ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿತ್ತು. ಕೆ.ಆರ್.ಮಾರುಕಟ್ಟೆ, ಯಶವಂತಪುರ, ಗಾಂಧಿ ಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್.ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ವಿವಿಧೆಡೆ ಮಾರುಕಟ್ಟೆಯಲ್ಲಿ ಜನಜಂಗುಳಿ ಇತ್ತು.

ನಗರದ ಬಟ್ಟೆ ಅಂಗಡಿಗಳು, ಆಭರಣ ಮಳಿಗೆಗಳಲ್ಲೂ ಖರೀದಿ ಜೋರಾಗಿತ್ತು. ಹಬ್ಬದ ಹಿನ್ನೆಲೆಯಲ್ಲಿ ಎರಡು–ಮೂರು ದಿನಗಳಿಂದ ಹೂವಿನ ವ್ಯಾಪಾರ ಗರಿಗೆದರಿದ್ದು, ಮಲ್ಲಿಗೆ, ಗುಲಾಬಿ ಸೇರಿದಂತೆ ಕೆಲ ಹೂವಿನ ದರಗಳು ಕೊಂಚ ಏರಿಕೆಯಾಗಿವೆ.

‘ಈ ಬಾರಿ ಕನಕಾಂಬರ ಹೂವಿನ ಬೆಳೆ ಚೆನ್ನಾಗಿ ಬಂದಿದ್ದು, ಬೇಡಿಕೆಗಿಂತ ಪೂರೈಕೆ ಹೆಚ್ಚಾಗಿದೆ. ಇದರಿಂದಾಗಿ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ಬಾರಿ ಬೆಲೆ ಸ್ವಲ್ಪ ಕಡಿಮೆಯಿದೆ. ಹೂ, ಹಣ್ಣು, ತರಕಾರಿಗಳು ಬಿಸಿಲಿಗೆ ಹೆಚ್ಚು ದಿನ ಉಳಿಯುತ್ತಿಲ್ಲ. ಆದ್ದರಿಂದ ಈ ಬಾರಿ ಅಷ್ಟಾಗಿ ದರ ಏರಿಕೆಯಾಗಿಲ್ಲ’ ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆ ವ್ಯಾಪಾರಿಗಳು.

ಎರಡು ತಿಂಗಳ ಹಿಂದೆ ಸಗಟು ದರದಲ್ಲಿ ಕೆ.ಜಿ.ಗೆ ₹ 100ರಿಂದ ₹120 ಇದ್ದ ಏಲಕ್ಕಿ ಬಾಳೆ ಹಣ್ಣು, ಈಗ ₹ 50ರಿಂದ ₹ 70ಕ್ಕೆ ಮಾರಾಟವಾಗುತ್ತಿದೆ. ಪಚ್ಚ ಬಾಳೆ ಹಣ್ಣು ಕೆ.ಜಿ.ಗೆ ₹20ರಿಂದ ₹30 ಇದೆ.

ಮಲ್ಲೇಶ್ವರ ಮಾರುಕಟ್ಟೆಯಲ್ಲಿ ಜನರು ಹೂವುಗಳನ್ನು ಖರೀದಿಸಿದರು —ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬಾಳೆ ಎಲೆ, ಹಣ್ಣು, ತರಕಾರಿ ವ್ಯಾಪಾರಿಗಳಿಗೂ ಬಿಸಿಲ ಧಗೆ ತಟ್ಟಿದೆ.

‘ನಗರವಾಸಿಗಳಲ್ಲಿ ಹಲವರು ಊರುಗಳಿಗೆ ತೆರಳಿದ್ದಾರೆ. ತಿಂಗಳಾಂತ್ಯಕ್ಕೆ ಹಬ್ಬ ಬಂದಿದ್ದರಿಂದ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಗ್ರಾಹಕರ ಸಂಖ್ಯೆ ಕಡಿಮೆಯಿದೆ. ಇದರಿಂದಾಗಿ ಮಾರುಕಟ್ಟೆಗಳಲ್ಲಿ ವ್ಯಾಪಾರ ಕಡಿಮೆ ಆಗಿದೆ. ಮಲ್ಲಿಗೆ ಮೊಗ್ಗು, ಗುಲಾಬಿ ದರವು ಕಳೆದ ಮೂರು ದಿನಗಳಿಂದ ಏರಿಕೆ ಕಂಡಿದ್ದು, ಉಳಿದ ಹೂವುಗಳ ದರವು ಈ ಬಾರಿ ಹೆಚ್ಚಳವಾಗಿಲ್ಲ’ ಎಂದು ಕೆ.ಆರ್.ಮಾರುಕಟ್ಟೆ ಸಗಟು ಹೂವು ಮಾರಾಟಗಾರರ ಸಂಘದ ಅಧ್ಯಕ್ಷ ದಿವಾಕರ್ ತಿಳಿಸಿದರು.

ಯುಗಾದಿ ವಿಶೇಷ (ದರ ₹ಗಳಲ್ಲಿ)	
ಬೇವು	20ರಿಂದ 30 (ಕಂತೆಗೆ)
ಮಾವಿನ ಸೊಪ್ಪು	20ರಿಂದ 30 (ಕಂತೆಗೆ)
ಹೂವಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)	
ಮಲ್ಲಿಗೆ ಮೊಗ್ಗು	1,000-1,400
ಕನಕಾಂಬರ	800
ಕಾಕಡ	600
ಸೇವಂತಿಗೆ	150-250
ಗುಲಾಬಿ	250
ಸುಗಂಧರಾಜ	200
ಚೆಂಡು ಹೂವು	40-50
ಹಣ್ಣಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)	
ದಾಳಿಂಬೆ	150-250
ಸೇಬು	130-200
ಕಿತ್ತಳೆ	100-120
ದ್ರಾಕ್ಷಿ	80-90
ಏಲಕ್ಕಿ ಬಾಳೆಹಣ್ಣು	50-70
ಕರ್ಬೂಜ	30
ಕಲ್ಲಂಗಡಿ	20-30
ತರಕಾರಿ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)	
ಬೆಳ್ಳುಳ್ಳಿ	120-150
ಈರುಳ್ಳಿ	30-35
ಹಸಿ ಮೆಣಸು	70-80
ಶುಂಠಿ	80
ಹುರಳಿಕಾಯಿ	40
ಬದನೆ	30
ಆಲೂಗಡ್ಡೆ	30
ಮೂಲಂಗಿ	30
ಟೊಮೆಟೊ	12-20

‘ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರ’

ಇನ್‌ಸ್ಪೆಕ್ಟರ್ ಹುದ್ದೆಗೆ ಆಡಳಿತ ವಿಭಾಗದವರ ಪ್ರವೇಶ

ಪ್ರಜಾವಾಣಿ ವಾರ್ತೆ

ದೂರು ನೀಡಿದ ನಿರುದ್ಯೋಗಿ ಪದವೀಧರರ ಒಕ್ಕೂಟ

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿ ಆಡಳಿತ ವಿಭಾಗದ ಹುದ್ದೆಗಳಲ್ಲಿರುವವರು (ನಾನ್ ಎಕ್ಸಿಕ್ಯೂಟಿವ್) ತರಾತುರಿಯಲ್ಲಿ ಡಿಪ್ಲೊಮಾ ಪಡೆದು ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಬಡ್ತಿ ಪಡೆಯುತ್ತಿದ್ದಾರೆ. ಭ್ರಷ್ಟಾಚಾರ ಮತ್ತು ರಾಜಕೀಯ ಪ್ರಭಾವದಿಂದ ಈ ರೀತಿ ಮಾಡಲಾಗಿದೆ ಎಂದು ಡಿಪ್ಲೊಮಾ/ಬಿ.ಇ. ಆಟೊಮೊಬೈಲ್ ನಿರುದ್ಯೋಗಿ ಪದವೀಧರರ ಒಕ್ಕೂಟ ಧ್ವನಿ ಎತ್ತಿದ್ದು, ರಾಜ್ಯಪಾಲರಿಗೆ ದೂರು ನೀಡಿದೆ.

ಆಡಳಿತ ವಿಭಾಗದಲ್ಲಿ ದ್ವಿತೀಯ ದರ್ಜೆ ಹಾಗೂ ಪ್ರಥಮದರ್ಜೆ ಸಹಾಯಕರು. ಕಚೇರಿ ಅಧೀಕ್ಷಕ, ಲೆಕ್ಕಾಧಿಕಾರಿ, ಆಡಳಿತಾಧಿಕಾರಿ... ಹೀಗೆ ಹುದ್ದೆಗಳಿರುತ್ತವೆ. ಇವುಗಳಿಗೆ ಪಿಯುಸಿ, ಡಿಗ್ರಿ ಮಾಡಿಕೊಂಡವರು ಆಯ್ಕೆಯಾಗುತ್ತಾರೆ. ಇಲ್ಲಿ ಬಡ್ತಿಯನ್ನು ಅದೇ ವಿಭಾಗದಲ್ಲಿ ನೀಡಬೇಕು. ಅನುಷ್ಠಾನ(ಎಕ್ಸಿಕ್ಯೂಟಿವ್) ವಿಭಾಗದಲ್ಲಿ ಮೋಟಾರು ವಾಹನ ನಿರೀಕ್ಷಕ, ಹಿರಿಯ ಮೋಟಾರು ವಾಹನ ನಿರೀಕ್ಷಕ, ಎಆರ್‌ಟಿಒ, ಆರ್‌ಟಿಒ, ಜಂಟಿ ಆಯುಕ್ತ, ಆಯುಕ್ತ ಹುದ್ದೆಗಳಿರುತ್ತವೆ. ಡಿಪ್ಲೊಮಾ/ಬಿ.ಇ. ಆಟೊಮೊಬೈಲ್ ಮಾಡಿಕೊಂಡವರು ದೇಹದಾರ್ಢ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ನೇಮಕ ಆಗಿರುತ್ತಾರೆ.

ಆಡಳಿತ ವಿಭಾಗದಲ್ಲಿಯೂ ಡಿಪ್ಲೊಮಾ ಮಾಡಿದವರಿದ್ದರೆ ಅವರಿಗೂ ಅನುಷ್ಠಾನ ವಿಭಾಗಕ್ಕೆ ಬರಲು ಅವಕಾಶವನ್ನು ನೀಡಿ 2022ರಲ್ಲಿ ಆದೇಶ ಹೊರಡಿಸಲಾಗಿತ್ತು. ಇದೇ ಆದೇಶವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ಒಕ್ಕೂಟದ ಗುರುಪ್ರಸಾದ್ ಆರೋಪಿಸಿದ್ದಾರೆ.

‘ಆಡಳಿತ ವಿಭಾಗದ ಹುದ್ದೆಗಳಿಗೆ ಸೇರುವಾಗ ಅವರು ಡಿಪ್ಲೊಮಾ ಮಾಡಿರುವುದಿಲ್ಲ. ಖಾಸಗಿ ಆಟೊಮೊಬೈಲ್ ಕಂಪನಿಗಳಲ್ಲಿ, ಸರ್ವಿಸ್ ಸೆಂಟರ್‌ಗಳಲ್ಲಿ ಕೆಲಸ ಮಾಡುತ್ತಿರುವವರು ಡಿಪ್ಲೊಮಾ ಕಲಿಯಲು ತಾಂತ್ರಿಕ ಸಂಜೆ ಕಾಲೇಜುಗಳಲ್ಲಿ ಅವಕಾಶ ಇದೆ. ಸಾರಿಗೆ ಇಲಾಖೆಯ ಆಡಳಿತ ವಿಭಾಗದಲ್ಲಿರುವವರು ಯಾವುದೋ ಖಾಸಗಿ ಕಂಪನಿಯಿಂದ ಪತ್ರ ತೆಗೆದುಕೊಂಡು ಹೋಗಿ ಸಂಜೆ ಕಾಲೇಜುಗಳಿಗೆ ಪ್ರವೇಶ ಪಡೆಯುತ್ತಾರೆ. ಎರಡು ವರ್ಷದಲ್ಲಿ ಡಿಪ್ಲೊಮಾ ಪ್ರಮಾಣಪತ್ರ ಪಡೆಯುತ್ತಾರೆ. ನಿಜವಾಗಿ ಡಿಪ್ಲೊಮಾ ಮಾಡುವರು ಕೋರ್ಸ್ ಮುಗಿಸಿ ಆಟೊಮೊಬೈಲ್ ಸಂಸ್ಥೆಗಳಲ್ಲಿ, ಗ್ಯಾರೇಜ್, ಸರ್ವಿಸ್ ಸೆಂಟರ್‌ಗಳಲ್ಲಿ ಒಂದು ವರ್ಷ ಕೆಲಸ ಮಾಡಬೇಕು. ಈ ನೌಕರರು ಹೇಗೆ ಪ್ರಮಾಣ ಪತ್ರ ಪಡೆಯುತ್ತಾರೆ ಎಂಬುದೇ ಗೊತ್ತಾಗುತ್ತಿಲ್ಲ’ ಎಂದು ಹೇಳಿದ್ದಾರೆ.

‘ಆಡಳಿತ ವಿಭಾಗದ ಹುದ್ದೆಯಲ್ಲಿರುವ ಒಂಬತ್ತು ನೌಕರರು ಸಮವಸ್ತ್ರ ಧರಿಸುವ ಹುದ್ದೆಗಳಿಗೆ ಬಡ್ತಿ ಪಡೆದಿದ್ದಾರೆ. ಇದು ಭ್ರಷ್ಟಾಚಾರ ಮತ್ತು ರಾಜಕೀಯ ಪ್ರಭಾವದಿಂದ ಆಗಿದೆ’ ಎಂದು ಗುರುಪ್ರಸಾದ್ ಅವರು ರಾಜ್ಯಪಾಲರಿಗೆ, ವಿಧಾನಸಭೆ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಿಗೆ ದೂರು ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅರ್ಚನಾ ವಿಶೇಷ ಡಿ.ಸಿ

ಬೆಂಗಳೂರು: ಬಿಬಿಎಂಪಿ ವಲಯ ಆಯುಕ್ತೆ ಎಂ.ಎಸ್. ಅರ್ಚನಾ ಅವರನ್ನು ಬೆಂಗಳೂರು ನಗರ ಜಿಲ್ಲೆಯ (ಉತ್ತರ) ವಿಶೇಷ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕ ಎಂ. ಕೂರ್ಮಾ ರಾವ್ ಅವರನ್ನು ಶಾಲಾ ಶಿಕ್ಷಣ ಇಲಾಖೆಯ ಬಿಸಿಯೂಟ ಯೋಜನೆಯ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಅಧ್ಯಕ್ಷ ಎಚ್. ಬಸವರಾಜೇಂದ್ರ ಅವರಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತರ ಹೆಚ್ಚುವರಿ ಹೊಣೆ ನೀಡಲಾಗಿದೆ.

ಗಮಕ ಫಾಲ್ಗುಣ ಸಮಾರಂಭ

ಬೆಂಗಳೂರು: ನಗರದ ವಿದ್ಯಾಗಣಪತಿ ಗಮಕ ಶಿಕ್ಷಣಾಲಯ ವತಿಯಿಂದ ಗಮಕ ಫಾಲ್ಗುಣ ಸಮಾರಂಭವನ್ನು ಆಯೋಜಿಸಲಾಗಿತ್ತು.

ಸಿರಿ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ವಿದ್ಯಾ ಗಣಪತಿ ಗಮಕ ಶಿಕ್ಷಣಾಲಯ ಜಂಟಿಯಾಗಿ ಕುಮಾರವ್ಯಾಸ ಮಂಟಪದಲ್ಲಿ ಆಯೋಜಿಸಿದ್ದ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಉದ್ಘಾಟಿಸಿದರು.

ಇದೇ ವೇಳೆ ಗಮಕ ಕಲೆಯ ಬೆಳವಣಿಗೆ ಕುರಿತು ಮಾತನಾಡಿದರು. ಶಿಕ್ಷಣಾಲಯದ ಅಧ್ಯಕ್ಷ ಎಚ್.ಎಸ್. ಬಾಲಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಲಾಯಿತು.

ಗಮಕ ವಿದ್ವಾಂಸರಾದ ಎಂ.ಆರ್.ಸತ್ಯನಾರಾಯಣ, ಜಲಜಾರಾಜು, ಸಾಹಿತಿ ಗೋವಿಂದರಾಜು, ಜೋತಿಷಿ ಎಸ್. ಅಂಬುಜಾ ಪ್ರಕಾಶ್, ಕಾರ್ಯಕ್ರಮ ಸಂಯೋಜಕಿ ಎಂ.ಭಾರತಿ ಪ್ರಕಾಶ್, ಶೈಲಜಾರಾವ್ ಭಾಗವಹಿಸಿದ್ದರು.

‘ಕ್ಷಯರೋಗ ನಿರ್ಮೂಲನೆ ಗುರಿ’

ಬೆಂಗಳೂರು: ಬಿಬಿಎಂಪಿಯನ್ನು 2025ರಲ್ಲಿ ಕ್ಷಯಮುಕ್ತ ಆಗಿಸಲು ಎಲ್ಲರೂ ಶ್ರಮವಹಿಸಿ ಕಾರ್ಯನಿರ್ವಹಿಸಬೇಕು ಎಂದು ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದಿನ್ ಮದನಿ ಹೇಳಿದರು.

ವಿಶ್ವ ಕ್ಷಯ ರೋಗ ದಿನಾಚರಣೆ ಅಂಗವಾಗಿ ಪಾಲಿಕೆಯ ಆರೋಗ್ಯ ವಿಭಾಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕ್ಷಯ ರೋಗ (ಟಿಬಿ) ನಿರ್ಮೂಲನೆ ಆರೋಗ್ಯ ಸಿಬ್ಬಂದಿಯಿಂದ ಮಾತ್ರ ಸಾಧ್ಯವಿಲ್ಲ. ನಾಗರಿಕರು ಕೈ ಜೋಡಿಸಿದರೆ ಮಾತ್ರ ತ್ವರಿತಗತಿಯಲ್ಲಿ ಕ್ಷಯ ರೋಗವನ್ನು ನಿರ್ಮೂಲನೆ ಮಾಡಬಹುದು’ ಎಂದರು.

‘ನಾಗರಿಕರಿಗೆ ಕ್ಷಯ ರೋಗದ ಕುರಿತು ಹೆಚ್ಚು ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಕ್ಷಯರೋಗ ಬಂದವರು ಔಷಧಗಳನ್ನು ಸರಿಯಾಗಿ ತೆಗೆದುಕೊಂಡರೆ ಮಾತ್ರ ನಿರ್ಮೂಲನೆ ಆಗಲು ಸಾಧ್ಯ. ಆದ್ದರಿಂದ ಕ್ಷಯ ರೋಗ ಬಂದವರು ಆರು ತಿಂಗಳು ಔಷಧಗಳನ್ನು ತಪ್ಪದೆ ಪಡೆದುಕೊಳ್ಳಬೇಕು. ಈ ಸಂಬಂಧ ನಾಗರಿಕರಲ್ಲಿ ಹೆಚ್ಚು ಅರಿವು ಮೂಡಿಸುವ ಕೆಲಸ ಮಾಡಬೇಕು’ ಎಂದು ಅವರು ಹೇಳಿದರು.

ಅಧಿಕಾರಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸೂಚನೆ

‘ಅರಣ್ಯ ಇಲಾಖೆಯಲ್ಲಿ ಕನ್ನಡ ಘಟಕ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಕನ್ನಡಿಗರ ಹಿತ ಕಾಯಲು ಕೂಡಲೇ ಕನ್ನಡ ಘಟಕವನ್ನು ಸ್ಥಾಪಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಅರಣ್ಯ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ಶನಿವಾರ ನಡೆಸಿದ ಅವರು, ‘ಕನ್ನಡಿಗರು ತಮ್ಮದೇ ನೆಲದಲ್ಲಿ ಅನಾಥ ಪ್ರಜ್ಞೆಯಿಂದ ನರಳದಿರಲು, ಕನ್ನಡ ಪರ ನಿಲುವುಗಳು ಅಗತ್ಯ. ಕಾಲಕಾಲಕ್ಕೆ ಕನ್ನಡ ಭಾಷೆ, ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು.’ ಎಂದು ಹೇಳಿದರು.

ಮೈಸೂರಿನ ಮೃಗಾಲಯದ ಜಾಲತಾಣವೂ ಸೇರಿದಂತೆ ಇಲಾಖೆಯ ವಿವಿಧ ಕಚೇರಿಗಳ ಜಾಲತಾಣಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡದಿರುವ ಅಂಶವನ್ನು ಉಲ್ಲೇಖಿಸಿದ ಬಿಳಿಮಲೆ, ‘ಜಾಲತಾಣದಲ್ಲಿ ಕನ್ನಡವನ್ನು ಆದ್ಯತೆಯ ಭಾಷೆಯನ್ನಾಗಿ ಬಳಸಬೇಕು. ಕೂಡಲೇ ಈ ಬಗ್ಗೆ ವ್ಯವಸ್ಥೆಯನ್ನು ರೂಪಿಸಬೇಕು’ ಎಂದು ಸೂಚಿಸಿದರು.

ಕನ್ನಡ ಕಡೆಗಣನೆ: ‘ಸಾರ್ವಜನಿಕರೊಂದಿಗೆ ಸ್ಪಂದಿಸುವ ಪತ್ರ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಕನ್ನಡ ಬಳಕೆಗೆ ಮುಂದಾಗಬೇಕು. ಇಲಾಖೆಯ ಜಾಲತಾಣಗಳಲ್ಲಿ ಇರುವ ಆದೇಶಗಳು, ಸುತ್ತೋಲೆಗಳು ಇಂಗ್ಲಿಷ್ ಭಾಷೆಯಲ್ಲಿದ್ದು, ಕೂಡಲೇ ಇದನ್ನು ಸರಿಪಡಿಸಬೇಕು’ ಎಂದು ನಿರ್ದೇಶಿಸಿದರು.

‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬೇಕು. ಇಲಾಖೆಗೆ ಸೇರಿದ ಕಚೇರಿಗಳು, ಸಾರ್ವಜನಿಕ ಸಂಪರ್ಕ ಸ್ಥಳಗಳು ಸೇರಿ ಕೆಲವೆಡೆ ಇನ್ನೂ ನಾಮಫಲಕದಲ್ಲಿ ಶೇ 60 ರಷ್ಟು ಕನ್ನಡ ಬಳಕೆಯಾಗಿಲ್ಲ. ಈ ಬಗ್ಗೆ ಕ್ರಮವಹಿಸಿ, ಕನ್ನಡಕ್ಕೆ ಆದ್ಯತೆ ನೀಡಬೇಕು’ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಕೆ. ಅಮರನಾರಾಯಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಸದಸ್ಯರಾದ ವಿ.ಪಿ. ನಿರಂಜನಾರಾಧ್ಯ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಟಿ.ಎಸ್. ಫಣಿಕುಮಾರ್, ಅಖಿಲ ಕರ್ನಾಟಕ ಶ್ರೀಗಂಧ ಮತ್ತು ಒಣ ಕೃಷಿ ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಛಾಯಾ ಎ.ಎಂ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ವನ್ಯಜೀವಿ ಪರಿಪಾಲಕ ಸುಭಾಷ್ ಕೆ. ಮಾಲ್ಖಡೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಸೀಮಾ ಗರ್ಗ್ ಉಪಸ್ಥಿತರಿದ್ದರು.

ಸಭೆಯಲ್ಲಿ ಪುರುಷೋತ್ತಮ ಬಿಳಿಮಲೆ ಮಾತನಾಡಿದರು. ಅರಣ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

‘ಪಾರಿಭಾಷಿಕ ಪದಕೋಶ ರಚಿಸಿ’

‘ತಾಂತ್ರಿಕತೆಯನ್ನು ಆಡಳಿತ ವ್ಯವಸ್ಥೆಯಲ್ಲಿ ಹೊಂದಿರುವ ಕೆಲವು ಇಲಾಖೆಗಳಲ್ಲಿ ಅರಣ್ಯ ಇಲಾಖೆಯು ಒಂದಾಗಿದ್ದು, ಸಾರ್ವಜನಿಕರು ಈ ಇಲಾಖೆಯೊಂದಿಗೆ ವ್ಯವಹರಿಸುವ ಸಂದರ್ಭದಲ್ಲಿ ಇಲ್ಲಿನ ಪದ ಬಳಕೆಯ ಕುರಿತಂತೆ ಹೆಚ್ಚಿನ ಜಾಗೃತಿ ಹೊಂದಿರಬೇಕಾಗುತ್ತದೆ. ಆಡಳಿತ ವ್ಯವಸ್ಥೆಯ ಭಾಗವಾಗಿರುವ ಅಧೀನ ಅಧಿಕಾರಿ ಸಿಬ್ಬಂದಿಗೂ ಇಲಾಖೆಯ ತಾಂತ್ರಿಕ ಅಂಶಗಳ ಅರಿವು ಅವಶ್ಯ ಇರುತ್ತದೆ. ಆದ್ದರಿಂದ ಅರಣ್ಯ ಇಲಾಖೆ ಕೂಡಲೇ ಪಾರಿಭಾಷಿಕ ಪದಕೋಶ ರಚನೆಗೆ ಮುಂದಾಗಬೇಕು’ ಎಂದು ಪುರುಷೋತ್ತಮ ಬಿಳಿಮಲೆ ಅಧಿಕಾರಿಗಳಿಗೆ ಸೂಚಿಸಿದರು.

ಗುರುಗ್ರಾಮದಲ್ಲಿ ಯಶಸ್ವಿ, ಬೆಂಗಳೂರಿನಲ್ಲೂ ಆರಂಭ

ಔಷಧ ಪೂರೈಕೆಗೆ ಡ್ರೋನ್

ಪ್ರಜಾವಾಣಿ ವಾರ್ತೆ

ಬೆಂಗಳೂರು (ಪಿಟಿಐ): ನಗರದಲ್ಲಿ ವಾಹನ ದಟ್ಟಣೆಯಲ್ಲಿ ತ್ವರಿತವಾಗಿ ಔಷಧಿಗಳು ಹಾಗೂ ಇತರ ವೈದ್ಯಕೀಯ ಪರಿಕರಗಳನ್ನು ವಾಣಿಜ್ಯ ಡ್ರೋನ್‌ಗಳ ಮೂಲಕ ಕಳುಹಿಸುವ ವ್ಯವಸ್ಥೆ ಮೂರು ವರ್ಷಗಳ ನಂತರ ಆರಂಭವಾಗಿದೆ.

ಈ ಕುರಿತು ಮಾಹಿತಿ ನೀಡಿದ ದೆಹಲಿ ಮೂಲದ ಸ್ಕೈ ಏರ್ ಕಂಪನಿಯ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಂಕಿತ್ ಕುಮಾರ್, ‘ನಗರದ ಕೋಣನಕುಂಟೆ ಮತ್ತು ಕನಕಪುರ ರಸ್ತೆಗಳಲ್ಲಿ ಈ ಸೌಲಭ್ಯ ಸದ್ಯಕ್ಕೆ ಲಭ್ಯವಿದೆ’ ಎಂದಿದ್ದಾರೆ.

‘ಗುರುಗ್ರಾಮದ ಸೆಕ್ಟರ್ 92ರಲ್ಲಿ ಡ್ರೋನ್ ಸೌಲಭ್ಯ ಆರಂಭಗೊಂಡಿತು. 7.5 ಕಿ.ಮೀ. ದೂರವನ್ನು ರಸ್ತೆ ಮೂಲಕ ಕ್ರಮಿಸಲು ಕನಿಷ್ಠ 15 ನಿಮಿಷ ಬೇಕು. ಆದರೆ, ಡ್ರೋನ್ ಮೂಲಕ ಕೇವಲ 3 ರಿಂದ 4 ನಿಮಿಷಗಳು ಸಾಕು. ವಾಣಿಜ್ಯ ಡ್ರೋನ್‌ಗೆ ಉತ್ತಮ ಪ್ರತಿಕ್ರಿಯೆ ಇದ್ದು, ಗುರುಗ್ರಾಮದಲ್ಲಿ ಕಳೆದ ಒಂದು ವರ್ಷದಲ್ಲಿ ಸುಮಾರು 10 ಲಕ್ಷ ಡೆಲಿವರಿಯನ್ನು ಪೂರ್ಣಗೊಳಿಸಿದ್ದೇವೆ. ಇದರ ಯಶಸ್ಸಿನಲ್ಲೇ ಡ್ರೋನ್ ಸೌಲಭ್ಯವನ್ನು ಬೆಂಗಳೂರಿಗೂ ವಿಸ್ತರಿಸಲಾಗಿದೆ’ ಎಂದಿದ್ದಾರೆ.

‘ಬೇಡಿಕೆ ಮತ್ತು ಮೂಲಸೌಕರ್ಯ ಆಧರಿಸಿ ಮಾರ್ಗ ನಿರ್ಧರಿಸಲಾಗುತ್ತದೆ. ಈ ಡ್ರೋನ್‌ಗಳು ಅನುಮೋದಿತ ಮಾರ್ಗಗಳಲ್ಲಿ ಸಮುದ್ರ ಮಟ್ಟದಿಂದ 120 ಮೀಟರ್ ಎತ್ತರದಲ್ಲಿ ಹಾರಬಹುದು. ಸೇನಾ ನೆಲೆಯ ಮೇಲೆ ಹಾರಾಟ ನಡೆಸುವಂತಿಲ್ಲ. ಆದರೆ, ನಾವು ಆಯ್ಕೆ ಮಾಡಿಕೊಂಡಿರುವ ಪ್ರದೇಶಗಳಲ್ಲಿ ಯಾವುದೇ ಸೇನಾ ನೆಲೆಗಳಿಲ್ಲದಿದ್ದರೂ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಈ ಪ್ರದೇಶದಲ್ಲಿದೆ. ಅವರೊಂದಿಗೆ ಸಮನ್ವಯ ಸಾಧಿಸುವ ವಿಶ್ವಾಸವಿದೆ’ ಎಂದು ಕುಮಾರ್ ಮಾಹಿತಿ ನೀಡಿದ್ದಾರೆ.

‘ಈ ಡ್ರೋನ್ 20 ಮೀಟರ್ ಎತ್ತರದಿಂದ ವಸ್ತುಗಳನ್ನು ಇಳಿಸಬಲ್ಲದು. ಇದಕ್ಕಾಗಿ ಸ್ಕೈ ವಿಂಚ್ ಎಂಬ ವ್ಯವಸ್ಥೆ ಅಳವಡಿಸಲಾಗಿದೆ’ ಎಂದಿದ್ದಾರೆ.

‘ಸ್ಕೈಏರ್ ಕಂಪನಿಯು ಬ್ಲೂಡಾರ್ಟ್, ಡಿಟಿಡಿಸಿ, ಶಿಪ್‌ರಾಕೆಟ್ ಮತ್ತು ಇಕಾಮ್ ಎಕ್ಸ್‌ಪ್ರೆಸ್‌ನಂಥ ಕಂಪನಿಗಳನ್ನು ತನ್ನ ಗ್ರಾಹಕರನ್ನಾಗಿ ಹೊಂದಿದೆ. ಶೀಘ್ರದಲ್ಲಿ ಬನ್ನೇರುಘಟ್ಟ ಪ್ರದೇಶಕ್ಕೂ ಸೌಲಭ್ಯ ವಿಸ್ತರಿಸಲಿದ್ದೇವೆ. ಜತೆಗೆ ಆಹಾರವನ್ನೂ ಡ್ರೋನ್ ಮೂಲಕ ತಲುಪಿಸುವ ವ್ಯವಸ್ಥೆಯನ್ನೂ ಜಾರಿಗೆ ತರಲಿದ್ದೇವೆ’ ಎಂದು ಕುಮಾರ್ ತಿಳಿಸಿದ್ದಾರೆ.

ಬೆಂಗಳೂರು ಮೂಲದ ಸ್ಕಾನ್‌ಡ್ರೋನ್ ಎಂಬ ಕಂಪನಿಯು ಗರಿಷ್ಠ 200 ಕೆ.ಜಿ. ತೂಕವನ್ನು ಹೊತ್ತು ಸಾಗುವ ಡ್ರೋನ್ ಪರಿಚಯಿಸುವುದಾಗಿ ಘೋಷಿಸಿತ್ತು.

ಮುಖ್ಯಾಂಶಗಳು

- ನಗರದಲ್ಲಿ ಕೇವಲ ಏಳು ನಿಮಿಷಗಳಲ್ಲಿ ಸಾಗಣೆ ಸಾಧ್ಯ
- 10 ಕೆ.ಜಿ ತೂಕ ಹೊರುವ, ಡ್ರೋನ್
- 520 ಗ್ರಾಂ ಇಂಗಾಲ ಹೊರಸೂಸುವಿಕೆಗೆ ತಡೆ

ಕೊಂಬೆ ತೆರವು ನಗರದ ಚಿನ್ನಸ್ವಾಮಿ ಕ್ರೀಡಾಂಗಣ ಬಳಿಯ ಮಹಾತ್ಮಗಾಂಧಿ ವೃತ್ತದ ಸಿಗ್ನಲ್ ಬಳಿ ಶನಿವಾರ ರಾತ್ರಿ ಮರವೊಂದರ ಬೃಹತ್ ಕೊಂಬೆ ಆಟೊ ಹಾಗೂ ಎರಡು ದ್ವಿಚಕ್ರ ವಾಹನಗಳ ಮೇಲೆ ಬಿದ್ದ ಪರಿಣಾಮ ವಾಹನಗಳು ಜಖಂಗೊಂಡವು. ಸಂಚಾರ ಪೊಲೀಸ್ ಸಿಬ್ಬಂದಿ ಕೊಂಬೆಗಳನ್ನು ತೆರವುಗೊಳಿಸಿದರು - ಪ್ರಜಾವಾಣಿ ಚಿತ್ರ

ಸೂರ್ಯಗ್ರಹಣ: ಆಹಾರ ಸೇವಿಸಿ ಜನರಲ್ಲಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಢನಂಬಿಕೆ ವಿರೋಧಿ ಒಕ್ಕೂಟದ ಕಾರ್ಯಕರ್ತರು ಶನಿವಾರ ಸೂರ್ಯಗ್ರಹಣದ ವೇಳೆ ನಗರದಲ್ಲಿ ಆಹಾರ ಸೇವಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.

ಗ್ರಹಣಕ್ಕೆ ಸಂಬಂಧಿಸಿದಂತೆ ಮೂಢನಂಬಿಕೆಗಳನ್ನು ತೊಡೆದು ಹಾಕಿ, ವೈಚಾರಿಕ ಅರಿವು ಮೂಡಿಸಲು ಪುರಭವನ ಎದುರು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಹಣ್ಣು, ಹೋಳಿಗೆ, ಸಮೋಸ, ಪುಲಾವ್, ತಂಪು ಪಾನೀಯ ನೀಡುವ ಮೂಲಕ ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವಂತೆ ಅರಿವು ಮೂಡಿಸಿದರು.

ಈ ವೇಳೆ ಮಾತನಾಡಿದ ನಟ ಚೇತನ್, ‘ಸೂರ್ಯ ಮತ್ತು ಚಂದ್ರಗಹಣಗಳ ಬಗ್ಗೆ ಜನರಲ್ಲಿ ಭಯ ಹುಟ್ಟಿಸಲಾಗಿದೆ. ಗ್ರಹಣ ವೇಳೆ ಆಹಾರ ಸೇವಿಸುವುದು, ಹೊರಗೆ ಹೋಗುವುದರಿಂದ ತೊಂದರೆಯಾಗುತ್ತದೆ ಎಂದು ಬಿಂಬಿಸಲಾಗಿದೆ. ಆದರೆ, ಇದು ಸುಳ್ಳು. ವೈಜ್ಞಾನಿಕ ಕ್ಷೇತ್ರದಲ್ಲಿ ಭಾರತ ಸಾಕಷ್ಟು ಪ್ರಗತಿ ಸಾಧಿಸಿದರೂ ಮೂಢನಂಬಿಕೆ ಆಚರಣೆ ಇನ್ನೂ ನಿಂತಿಲ್ಲ’ ಎಂದರು.

‘ಅಮೆರಿಕ, ಚೀನಾ, ರಷ್ಯಾ ನಮಗೆ ಮಾದರಿಯಲ್ಲ. ಮೂಢನಂಬಿಕೆ ಆಚರಣೆ ಇಲ್ಲದ ಫಿನ್‌ಲ್ಯಾಂಡ್, ನಮಗೆ ಮಾದರಿ’ ಎಂದರು.

ವಿಚಾರವಾದಿ ಎಚ್.ಸಿ.ಉಮೇಶ್ ಮಾತನಾಡಿ, ‘ಸೂರ್ಯ ಮತ್ತು ಚಂದ್ರಗ್ರಹಣ ಎಂಬುದು ಪ್ರಕೃತಿಯ ವಿಸ್ಮಯ. ಶುಭ ಸಮಾರಂಭ ಮಾಡುವುದರಿಂದ ಯಾವುದೇ ತೊಂದರೆ ಇಲ್ಲ. ಸಂಪ್ರದಾಯದ ಹೆಸರಿನಲ್ಲಿ ಮೌಢ್ಯ ಬಿತ್ತಲಾಗುತ್ತಿದೆ. ಗಗನಯಾನಿ ಸುನಿತಾ ವಿಲಿಯಮ್ಸ್ ನಮಗೆ ಮಾದರಿ’ ಎಂದರು.

‘ಮೌಢ್ಯ ಎಂಬುದು ಬೆಕ್ಕು ಅಡ್ಡ ಬಂದರೆ ಅನಿಷ್ಟ ಎಂಬಂತಹ ಚಿಕ್ಕ ಪುಟ್ಟ ನಂಬಿಕೆಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಸಮಾಜದ ಎಲ್ಲಾ ಕ್ಷೇತ್ರಗಳನ್ನು ಆವರಿಸಿದೆ’ ಎಂದರು.

ಒಕ್ಕೂಟದ ಮುಖಂಡರಾದ ಡಿ. ನರಸಿಂಹಮೂರ್ತಿ, ಎಂ.ಯುವರಾಜ್, ಎಚ್.ಆರ್.ಸ್ವಾಮಿ, ಬೈರೇಗೌಡ, ಬಿ.ಟಿ. ಲಲಿತಾ ನಾಯ್ಕ್, ಮಲ್ಲು ಕುಂಬಾರ ಹಾಜರಿದ್ದರು.

ಮೂಢನಂಬಿಕೆ ವಿರೋಧಿ ಒಕ್ಕೂಟದ ಕಾರ್ಯಕರ್ತರು ನಗರದ ಪುರಭವನದ ಎದುರು ಶನಿವಾರ ಸೂರ್ಯಗ್ರಹಣ ವೇಳೆ ಆಹಾರ ಸೇವಿಸಿದರು

ನಗರದಲ್ಲಿ ಇಂದು

ಯುಗಾದಿ ಆಚರಣೆ: ಪಂಚಾಂಗ ಶ್ರವಣ: ರಂಗನಾಥ ಕೇಶವ ಮೂರ್ತಿ, ವಿಶೇಷ ಭಜನೆ, ಆಯೋಜನೆ: ಶ್ರೀಸತ್ಯ ಸಾಯಿ ಬಾಬಾ ಆಶ್ರಮ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 5ರಿಂದ ಸಂಜೆ 6.20

‘ಆರ್ಗ್ಯಾನಿಕ್’ ಸಂತೆ: ಅತಿಥಿ: ಸಿದ್ದರಾಮೇಶ್, ಕಲಾ ಪ್ರದರ್ಶನ: ಮಮತಾ ಭಾಸ್ಕರ್ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 9.30

‘ಬೇವು ಬೆಲ್ಲ ಬಲ್ಲವರೆಲ್ಲ’ ಮಾತು–ಮಂಥನ–ಗಾಯನದ ಉತ್ಸವ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಮುಖ್ಯ ಅತಿಥಿಗಳು: ಎಲ್.ಎನ್. ಮುಕುಂದರಾಜ್, ಪಿ. ಸೀನ, ಕಾ.ವೆಂ. ಶ್ರೀನಿವಾಸಮೂರ್ತಿ, ಮೈಕೊ ಶಂಕರ್, ಆಯೋಜನೆ: ಪದ–ಚಿರಂತ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

119ನೇ ರಾಮೋತ್ಸವ: ಉದ್ಘಾಟನೆ: ಬಿ.ಎನ್. ಸುಬ್ಬರಾವ್, ಸಿ.ವಿ. ತಿರುಮಲರಾವ್, ಗಣೇಶ ಭಟ್ಟ, ಗಾಯನ: ಆನಂದ್ ಬಿ.ಎಸ್., ಪಿಟೀಲು: ರಘುರಾಮ್, ಮೃದಂಗ: ಸಿ. ಚಲುವರಾಜು, ಘಟ: ಗುರುಮೂರ್ತಿ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, 5ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6

32ನೇ ಶ್ರೀರಾಮನವಮಿ ಸಂಗೀತೋತ್ಸವ: ಉದ್ಘಾಟನೆ: ರಮೇಶ್ ಸ್ವಾಮಿ, ಗಾಯನ: ಐಶ್ವರ್ಯ ವಿದ್ಯಾ ರಘುನಾಥ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6

ಯುಗಾದಿ–ರಂಜಾನ್ ಸೌಹಾರ್ದ ಸಂಭ್ರಮ: ಅಧ್ಯಕ್ಷತೆ: ಎ.ಎಂ. ರವಿಚಂದ್ರನ್, ಅತಿಥಿಗಳು: ಮಾವಳ್ಳಿ ಶಂಕರ್, ಕೆ.ಎಸ್. ವಿಮಲ, ಸೈಯದ್ ಶಫೀವುಲ್ಲಾ ಸಾಹೇಬ್, ಜಗದೀಶ್ ರೆಡ್ಡಿ, ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಮಾವಳ್ಳಿ ಮುನಿಕೃಷ್ಣ, ಮಾವಳ್ಳಿ ಅರವಿಂದ್, ಡಿ.ಆರ್. ಕೃಷ್ಣ, ಶಶಿಕಲಾ ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಕುವೆಂಪು ಪ್ರತಿಮೆ ಮುಂದೆ, ಲಾಲ್‌ಬಾಗ್ ಪಶ್ಚಿಮ ದ್ವಾರ, ಸಂಜೆ 6

ಶ್ರೀರಾಮನವಮಿ ಆನಂದ ನರ್ತನ ಉತ್ಸವ: ಉದ್ಘಾಟನೆ: ಲಲಿತಾ ಶ್ರೀನಿವಾಸನ್, ಆಯೋಜನೆ ಹಾಗೂ ಸ್ಥಳ: ಕಲಾನಿಧಿ ಆರ್ಟ್ಸ್ ಅಕಾಡೆಮಿ, ಸೂರ್ಯವಂಶಿ ಲೇಔಟ್, ಯಲಹಂಕ, ಸಂಜೆ 6

ಪಂಚಾಂಗ ಶ್ರವಣ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ವ್ಯಾಸಮಧ್ವ ಸಂಶೋಧನಾ ಪ್ರತಿಷ್ಠಾನ, ಸ್ಥಳ: ವ್ಯಾಸಮಧ್ವ ಸಭಾಂಗಣ, ಪಾಜಕ, #89/24, 3ನೇ ಅಡ್ಡರಸ್ತೆ , ಹನುಮಂತನಗರ, ಸಂಜೆ 6.30

ವಸಂತ ನವರಾತ್ರಿ ಶ್ರೀರಾಮೋತ್ಸವ: ಗಾಯನ: ರಚನಾ ಶರ್ಮಾ, ಪಿಟೀಲು: ಸೀತಾರಾಮ್, ಮೃದಂಗ: ಸುಧೀಂದ್ರ ಆಪ್ಟೆ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ದೀಪೋತ್ಸವ ಹಾಗೂ ಪಂಚಾಂಗ ಶ್ರವಣ: ವೇಣುಗೋಪಾಲಾಚಾರ್ಯ, ಆಯೋಜನೆ: ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 6.30

ಪಂಚಾಂಗ ಶ್ರವಣ: ಬ್ರಹ್ಮಣ್ಯಾಚಾರ್ಯ, ಆಯೋಜನೆ: ಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

‘ಯುಗಾದಿ’ ಉದ್ಘಾಟನೆ ಸಮಾರಂಭ: ಮುಖ್ಯ ಅತಿಥಿ: ಗೋರಕ್ಷ ಗಡೀಲ್ಕರ್, ಉಪಸ್ಥಿತಿ: ಶ್ರೀಚಂದ್ ಟಿ. ರಾಜ್‌ಪಾಲ್, ಆಯೋಜನೆ ಹಾಗೂ ಸ್ಥಳ: ಶ್ರೀ ಸಾಯಿ ಆಧ್ಯಾತ್ಮಿಕ ಕೇಂದ್ರ, ತ್ಯಾಗರಾಜನಗರ, ಸಂಜೆ 7

ಹೋಳಿ ಸಂಗೀತ ಉತ್ಸವ: ಗಾಯನ: ಸಂಗೀತಾ ಕಟ್ಟಿ, ತಬಲಾ: ಸಾವನಿ ತಲ್ವಾಲ್ಕರ್, ಹಾರ್ಮೋನಿಯಂ: ನೀತಾ, ಆಯೋಜನೆ: 3ಪಿ ಇನ್ವೆಸ್ಟ್‌ಮೆಂಟ್ ಮ್ಯಾನೇಜರ್ಸ್, ಸ್ಥಳ: ಪತ್ತಿ ಸಭಾಂಗಣ, ಬಸವನಗುಡಿ, ಸಂಜೆ 6.30

ಸಂಗೀತಾ ಕಟ್ಟಿ

ನಗರದಲ್ಲಿ ನಾಳೆ

ಬ್ರಹ್ಮರಥೋತ್ಸವ: ಶಿಲಾಮಯ ರಾಜಗೋಪುರ ಉದ್ಘಾಟನೆ: ಸಾನ್ನಿಧ್ಯ: ಸುವಿದ್ಯೇಂದ್ರ ಸ್ವಾಮೀಜಿ, ಪಲ್ಲಕ್ಕಿ ಉತ್ಸವ, ಆಯೋಜನೆ ಹಾಗೂ ಸ್ಥಳ: ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ಯಲಹಂಕ, ಬೆಳಿಗ್ಗೆ 9.30

ಋತು ಗಾನ–ವ್ಯಾಖ್ಯಾನ: ಆರ್. ಗಣೇಶ್, ಋತು ಗಾನ: ರವೀಂದ್ರ ಗುರುರಾಜ ಕಾಟೋಟಿ, ಗುರುಮೂರ್ತಿ ವೈದ್ಯ, ಸಿದ್ಧಾರ್ಥ ಬೆಳ್ಮಣ್ಣು, ರೇಷ್ಮಾ ಭಟ್ಟ, ಆಯೋಜನೆ: ಸಪ್ತಕ ಬೆಂಗಳೂರು, ಬಿಜಾಪುರೆ ಹಾರ್ಮೋನಿಯಂ ಫೌಂಡೇಷನ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಎಂ.ಡಿ.ಪಲ್ಲವಿ

‘ಯುಗಾದಿ’ ಭಕ್ತಿ ಗೀತೆಗಳು: ಎಂ.ಡಿ. ಪಲ್ಲವಿ, ಆಯೋಜನೆ ಹಾಗೂ ಸ್ಥಳ: ಶ್ರೀ ಸಾಯಿ ಆಧ್ಯಾತ್ಮಿಕ ಕೇಂದ್ರ, ತ್ಯಾಗರಾಜನಗರ, ಸಂಜೆ 6.30

ಯುಗಾದಿ ಸಂಭ್ರಮ: ಕರ್ನಾಟಕ ಸಂಗೀತ: ತಿರುಮಲೆ ಶ್ರೀನಿವಾಸ್ ಮತ್ತು ತಂಡ, ಪಂಚಾಂಗ ಶ್ರವಣ: ಸುದರ್ಶನ ಶರ್ಮ, ಭರತನಾಟ್ಯ: ಪ್ರವೀಣ್ ಕುಮಾರ್ ಮತ್ತು ಚಿತ್ಕಲಾ ತಂಡ, ಆಯೋಜನೆ ಹಾಗೂ ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

32ನೇ ಶ್ರೀರಾಮನವಮಿ ಸಂಗೀತೋತ್ಸವ: ನೃತ್ಯ: ತನ್ಮಯಿ, ಗಾಯನ: ರಾಮಕೃಷ್ಣಮೂರ್ತಿ, ಪಿಟೀಲು: ವಿಟ್ಟಲ್ ರಂಗನ್, ಮೃದಂಗ: ವಿಜಯ್ ನಟೇಶನ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15

ಕೃತಜ್ಞತಾ ನೃತ್ಯೋತ್ಸವ: ಉದ್ಘಾಟನೆ: ರಾಜು ಎನ್., ಟಿ.ಡಿ. ರಾಜೇಂದ್ರ, ಸತ್ಯನಾರಾಯಣ ರಾಜು, ಗಜೇಂದ್ರ ಕುಮಾರ್, ಆಯೋಜನೆ: ಚಂದ್ರಗುರು ಸ್ಕೂಲ್ ಡ್ಯಾನ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

119ನೇ ರಾಮೋತ್ಸವ: ‘ನಳೋಪಾಖ್ಯಾನ’ದ ಬಗ್ಗೆ ಪ್ರವಚನ: ಕಲ್ಲಾಪುರ ಪವಮಾನಾಚಾರ್, ಗಾಯನ: ರಚನಾ ಶರ್ಮಾ, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣ ರಾವ್, ಘಟ: ಸಚಿನ್ ದೇವೀಪ್ರಸಾದ್, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, 5ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6

ಶ್ರೀರಾಮನವಮಿ ಆನಂದ ನರ್ತನ ಉತ್ಸವ: ನೃತ್ಯ ಪ್ರದರ್ಶನ: ಸೋನಿಯಾ ರಾಮಾನುಜಂ, ಶ್ವೇತಾ ರಾಜೇಶ್, ಆಯೋಜನೆ ಹಾಗೂ ಸ್ಥಳ: ಕಲಾನಿಧಿ ಆರ್ಟ್ಸ್ ಅಕಾಡೆಮಿ, ಸೂರ್ಯವಂಶಿ ಲೇಔಟ್, ಯಲಹಂಕ, ಸಂಜೆ 6

ವಸಂತ ನವರಾತ್ರಿ ಶ್ರೀರಾಮೋತ್ಸವ: ದ್ವಂದ್ವ ಪಿಟೀಲು ವಾದನ: ಎಂ.ಎಸ್. ಗೋವಿಂದಸ್ವಾಮಿ, ಎಂ.ಎಸ್.ಜಿ. ಉಮಾ ಶಂಕರ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಭೂಕಂಪನ: ಸಹಾಯ ಕೋರಿದ ಮ್ಯಾನ್ಮಾರ್ ಸೇನಾ ಆಡಳಿತ • 139 ಮಂದಿ ನಾಪತ್ತೆ

1,600 ದಾಟಿದ ಸಾವಿನ ಸಂಖ್ಯೆ

ಬ್ಯಾಂಕಾಕ್/ಮಾಂಡಲೆ (ಎಪಿ/ಎಎಫ್‌ಪಿ): ಮ್ಯಾನ್ಮಾರ್‌ನಲ್ಲಿ ಸಂಭವಿಸಿದ 7.7 ತೀವ್ರತೆಯ ಭೂಕಂಪನದಿಂದಾಗಿ 1,644 ಮಂದಿ ಮೃತಪಟ್ಟಿದ್ದಾರೆ. ಭೂಕಂಪನದ ಪರಿಣಾಮಕ್ಕೆ ಕುಸಿದುಬಿದ್ದ ಕಟ್ಟಡಗಳ ಅವಶೇಷಗಳ ಅಡಿಯಿಂದ ನೂರಾರು ಜನರ ಮೃತದೇಹಗಳನ್ನು ಶನಿವಾರ ಹೊರತೆಗೆಯಲಾಗಿದೆ.

3,408 ಜನರಿಗೆ ಗಾಯಗಳಾಗಿವೆ, 139 ಮಂದಿ ನಾಪತ್ತೆಯಾಗಿದ್ದಾರೆ ಎಂದು ಮ್ಯಾನ್ಮಾರ್‌ನ ಮಿಲಿಟರಿ ಸರ್ಕಾರ ಹೇಳಿದೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಮ್ಯಾನ್ಮಾರ್‌ನಲ್ಲಿ ನಾಗರಿಕ ಕಲಹ ವರ್ಷಗಳಿಂದ ಇದೆ. ಹೀಗಾಗಿ, ದೇಶದ ಎಲ್ಲ ಕಡೆಗಳಿಗೆ ತೆರಳುವುದು ಅಪಾಯಕಾರಿಯಾಗಿದೆ. ಇದು ಪರಿಹಾರ ಕಾರ್ಯ ಕೈಗೊಳ್ಳುವವರಿಗೆ ಸಮಸ್ಯೆ ತಂದೊಡ್ಡಿದೆ.

ಮ್ಯಾನ್ಮಾರ್‌ನ ರಾಜಧಾನಿ ನೇಪೀಡಾದಲ್ಲಿ ಹಾನಿಗೀಡಾದ ರಸ್ತೆಗಳನ್ನು ಸರಿಪಡಿಸುವ ಕಾರ್ಯ ಸಾಗಿದೆ. ವಿದ್ಯುತ್ ಮತ್ತು ಇಂಟರ್ನೆಟ್ ಸೇವೆಗಳು ನಗರದ ಬಹುತೇಕ ಕಡೆ ಕಡಿತಗೊಂಡಿವೆ.

ಥಾಯ್ಲೆಂಡ್‌ನಲ್ಲಿ ಹಾನಿ: ನೆರೆಯ ಥಾಯ್ಲೆಂಡ್‌ನಲ್ಲಿ 1.7 ಕೋಟಿ ಜನರು ವಾಸಿಸುವ ಗ್ರೇಟರ್ ಬ್ಯಾಂಕಾಕ್ ಪ್ರದೇಶ ಸೇರಿ ಹಲವೆಡೆ ಹಾನಿ ಉಂಟಾಗಿದೆ. ಇಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕಾಕ್‌ನಲ್ಲಿ 47 ಮಂದಿ ನಾಪತ್ತೆಯಾಗಿದ್ದಾರೆ. ಕುಸಿದುಬಿದ್ದ ಕಟ್ಟಡಗಳ ಅವಶೇಷಗಳನ್ನು ತೆರವು ಮಾಡಲು ಭಾರಿ ಗಾತ್ರದ ಯಂತ್ರಗಳನ್ನು ಶನಿವಾರ ತರಲಾಗಿದೆ.

ನೆರವಿಗೆ ಯಾಚನೆ: ಮ್ಯಾನ್ಮಾರ್‌ನಲ್ಲಿ ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವವರು ಸಹ ಸಹಾಯ ಯಾಚಿಸುತ್ತಿದ್ದಾರೆ. ಕುಸಿದ ಕಟ್ಟಡಗಳ ಅಡಿಯಲ್ಲಿ ಸಿಲುಕಿರುವವರನ್ನು ರಕ್ಷಿಸುವ ಕೆಲಸದಲ್ಲಿ ಅವರು ತೊಡಗಿದ್ದಾರೆ.

ಭೂಕಂಪನದ ನಡುವೆ ಜೀವ ಉಳಿಸಿಕೊಂಡವರು ಹತ್ತಿರದ ಮರಗಳಡಿ ರಾತ್ರಿ ಕಳೆದಿದ್ದಾರೆ. ಕುಸಿದ ಕಟ್ಟಡಗಳ ಆಸುಪಾಸಿನಲ್ಲಿ ರಕ್ಷಣಾ ಕಾರ್ಯಕರ್ತರು ಗಟ್ಟಿ ದನಿಯಲ್ಲಿ ಕೂಗುತ್ತಿದ್ದಾರೆ. ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಯಾರದ್ದಾದರೂ ದನಿ ಕೇಳಿಬರಬಹುದು ಎಂಬುದು ಅವರ ನಿರೀಕ್ಷೆ.

ಮ್ಯಾನ್ಮಾರ್‌ನ ಮಿಲಿಟರಿ ಆಡಳಿತವು ಈ ಬಾರಿ ನೆರವು ಬೇಕು ಎಂದು ವಿಶ್ವ ಸಮುದಾಯದ ಎದುರು ಬೇಡಿಕೆ ಮಂಡಿಸಿದೆ. ಇದು ಭೂಕಂಪನದ ತೀವ್ರತೆಯನ್ನು ಹೇಳುತ್ತಿದೆ.

ನೆರವಿನ ಹಸ್ತ ಚಾಚಿದ ಭಾರತ

ನವದೆಹಲಿ (ಪಿಟಿಐ): ಮ್ಯಾನ್ಮಾರ್‌ನಲ್ಲಿ ನೆರವು ಕಾರ್ಯಾಚರಣೆಗೆ ಕೈಜೋಡಿಸಲು ರಾಷ್ಟ್ರೀಯ ವಿಪತ್ತು ಪರಿಹಾರ ಪಡೆಯ (ಎನ್‌ಡಿಆರ್‌ಎಫ್) 80 ಮಂದಿಯ ತುಕಡಿಯನ್ನು ಭಾರತವು ಕಳುಹಿಸಲಿದೆ. 'ಆಪರೇಷನ್ ಬ್ರಹ್ಮ' ಅಡಿಯಲ್ಲಿ ಈ ತುಕಡಿಯನ್ನು ರವಾನಿಸಲಾಗುತ್ತಿದೆ.

ನೆರೆಯ ಮ್ಯಾನ್ಮಾರ್ ಮತ್ತು ಥಾಯ್ಲೆಂಡ್ ದೇಶಗಳು ಭೂಕಂಪನದಿಂದ ನಲುಗಿದ ನಂತರ 'ಆಪರೇಷನ್ ಬ್ರಹ್ಮ' ಹೆಸರಿನಲ್ಲಿ ನೆರವಿನ ಹಸ್ತ ಚಾಚಿರುವ ಭಾರತವು, ಮ್ಯಾನ್ಮಾರ್‌ಗೆ 15 ಟನ್‌ಗಳಷ್ಟು ಪರಿಹಾರ ಸಾಮಗ್ರಿ ರವಾನಿಸಿದೆ.

ಡೇರೆಗಳು, ಹೊದಿಕೆ, ಸೇವಿಸಲು ಸಿದ್ಧವಾಗಿರುವ ಊಟ, ನೀರು ಶುದ್ಧೀಕರಣ ಯಂತ್ರ, ಸೌರದೀಪಗಳು, ವಿದ್ಯುತ್ ಜನರೇಟರ್‌ಗಳು, ಅಗತ್ಯ ಔಷಧಗಳನ್ನು ಹೊತ್ತ ವಾಯುಪಡೆಯ ವಿಮಾನವು ಮ್ಯಾನ್ಮಾರ್‌ನ ಯಾಂಗೂನ್ ನಗರಕ್ಕೆ ತೆರಳಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇನ್ನೂ ಎರಡು ವಿಮಾನಗಳಲ್ಲಿ ಅಗತ್ಯ ವಸ್ತುಗಳನ್ನು ಭಾರತದಿಂದ ಕಳುಹಿಸಲಾಗುತ್ತದೆ. ಜೊತೆಗೆ, ನೌಕಾಪಡೆಯ ಎರಡು ಹಡಗುಗಳು ಕೂಡ ನೆರವಿಗೆ ಮ್ಯಾನ್ಮಾರ್‌ನತ್ತ ಧಾವಿಸಲಿವೆ.

ಮ್ಯಾನ್ಮಾರ್‌ಗೆ ನೆರವಿನ ಸಾಮಗ್ರಿಗಳನ್ನು ಒಯ್ಯುತ್ತಿರುವ ಎನ್‌ಡಿಆರ್‌ಎಫ್ ಸಿಬ್ಬಂದಿ – ಪಿಟಿಐ ಚಿತ್ರ

ಮೋದಿ ಮಾತುಕತೆ: ಮ್ಯಾನ್ಮಾರ್‌ನ ಮಿಲಿಟರಿ ಸರ್ಕಾರದ ಮುಖ್ಯಸ್ಥ ಮಿನ್ ಆಂಗ್ ಹ್ಲಾಯಿಂಗ್ ಅವರ ಜೊತೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಮಾತನಾಡಿದ್ದಾರೆ, ಭಾರತವು ಮ್ಯಾನ್ಮಾರ್‌ನ ನೆರವಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದ್ದಾರೆ.

ನೀರಿಗಾಗಿ ಜಲಮಂಡಳಿ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕುಡಿಯುವ ನೀರು ಪೂರೈಕೆ ವಿಳಂಬ ಖಂಡಿಸಿ ಜಲಮಂಡಳಿ ಕಚೇರಿ ಎದುರು ವಳಗೆರೆ ಹಳ್ಳಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ನೇತೃತ್ವದಲ್ಲಿ ನಿವಾಸಿಗಳು, ವಿಶ್ವೇಶ್ವರಯ್ಯ ಬಡಾವಣೆಯಲ್ಲಿರುವ ಜಲಮಂಡಳಿ ಕಾರ್ಯ ನಿರ್ವಾಹಕ ಎಂಜಿನಿಯರ್ ಕಚೇರಿ ಎದುರು ಪ್ರತಿಭಟನೆ ನಡೆಸಿ, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಕೂಡಲೇ ನೀರು ಪೂರೈಸಬೇಕು ಎಂದು ಆಗ್ರಹಿಸಿ ಸಹಾಯಕ ಎಂಜಿನಿಯರ್(ಎಇ) ಮಲ್ಲಿಕಾರ್ಜುನ ಅವರಿಗೆ ಮನವಿ ಸಲ್ಲಿಸಿದರು.

'ಪೂನಂ ಮಹಲ್, ಬೆತೆಸ್ಡಾ ಶಾಲೆ ಬಳಿಯ ವಸತಿ ಸಮುಚ್ಚಯಗಳು, ಜ್ಞಾನಭಾರತಿ ಬಡಾವಣೆ, ಶಾಂತಿ ವಿಲಾಸ ಬಡಾವಣೆಯಲ್ಲಿರುವ ಸುಮಾರು 25ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್ ಹಾಗೂ ಮನೆಗಳಿಗೆ ನೀರು ಪೂರೈಕೆ ಸ್ಥಗಿತಗೊಳಿಸಲಾಗಿದೆ. ಸಾವಿರಕ್ಕೂ ಹೆಚ್ಚು ಕುಟುಂಬಗಳು ಜೀವನ ನಿರ್ವಹಣೆಗೆ ಕೊಳವೆ ಬಾವಿಯನ್ನೇ ಆಶ್ರಯಿಸಿವೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಬಿರು ಬೇಸಿಗೆಗೆ ಅಂತರ್ಜಲ ಕೂಡ ಕಡಿಮೆಯಾಗುತ್ತಿದ್ದು, ದುಬಾರಿ ಹಣ ನೀಡಿ ನೀರು ಖರೀದಿ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಜಲಮಂಡಳಿ ನೀರು ಸರಬರಾಜಿಗೆ ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದರು.

'ಕೆಂಗೇರಿ ಸುತ್ತಮುತ್ತಲ ಪ್ರದೇಶಗಳಿಗೆ ನೀರು ಸರಬರಾಜು ಮಾಡುತ್ತಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ' ಎಂದು ಜಲಮಂಡಳಿಯ ಕಿರಿಯ ಎಂಜಿನಿಯರ್ ನಾಗರತ್ನ ಹೇಳಿದರು.

ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಕದರಪ್ಪ ಮಾತನಾಡಿ, 'ಆರು ತಿಂಗಳ ಹಿಂದೆಯೇ ಸಮಸ್ಯೆ ಕುರಿತು ಮನವಿ ಸಲ್ಲಿಸಲಾಗಿತ್ತು. ಅಧಿಕಾರಿಗಳು ಗಮನ ಹರಿಸದ ಕಾರಣ ಜನರು ನೀರಿಗಾಗಿ ಪರದಾಡುವಂತಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಇ ಮಲ್ಲಿಕಾರ್ಜುನ ಮಾತನಾಡಿ, 'ಇಲ್ಲಿನ ಬಡಾವಣೆಗಳಿಗೆ ಕಾವೇರಿ ಕುಡಿಯುವ ನೀರು ಪೂರೈಕೆಗೆ ಯೋಜನೆ ರೂಪಿಸಲಾಗಿದೆ. ಮೇ ತಿಂಗಳ ಮೊದಲ ವಾರ ವಸತಿ ಸಮುಚ್ಚಯ, ಇತರೆ ಮನೆಗಳಿಗೆ ಕಾವೇರಿ ಕುಡಿಯುವ ನೀರು ಪೂರೈಸಲು ಕ್ರಮ ವಹಿಸಲಾಗುವುದು' ಎಂದು ಭರವಸೆ ನೀಡಿದರು.

ಪ್ರತಿಭಟನೆ ವೇಳೆ ರಾಮದಾಸ್, ವಿನಯ್ ಹೆಗಡೆ, ಮಹಾಲಕ್ಷ್ಮೀ, ಸರ್ವೇಶ್, ಶ್ರೀಪಾದ್, ನಾಗೇಶ್, ಮಂಜುನಾಥ್ ಹಾಜರಿದ್ದರು.

ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ಸದಸ್ಯರು ಸಹಾಯಕ ಎಂಜಿನಿಯರ್ ಮಲ್ಲಿಕಾರ್ಜುನ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಒಕ್ಕೂಟದ ಅಧ್ಯಕ್ಷ ಕದರಪ್ಪ, ಎಇಇ ದೀಪಕ್ ಮತ್ತಿತರರು ಇದ್ದಾರೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

HRD & Admin

CARING & Mature Human Relations Executive Stress Free Meaningful Work BANJARA ACADEMY Call 8861421666 banjarahh@gmail.com

Graphic Designers

AD AGENCY requires GRAPHIC DESIGNER 1-2years Experience in CoralDraw, Other Designing Tools, Speed typing in Kannada, English. 9845597155 enquiry@spoorthiads.com

General

PRAKASH POWER PLANNING Pvt Ltd.
SUPERGRADE ELECTRICAL CONTRACTORS
BANGALORE-560 076
www.prakashpower.net
WANTED
HARDWORKING, ENTHUSIASTIC ENGINEERS, TECHNICIANS, SAFETY OFFICERS, HELPERS
QUALIFICATION
Diploma/degree In Electrical Engineering, ITI Qualified Electricians, Welders, Nebosh Certified Safety Officers, SSSLC Pass/Fail Helpers, Experience Minimum 2 years
SALARY
negotiable comparable with peers
SEND YOUR CV TO:
satya.m@prakashpower.net
balaji.m@prakashpower.net
on whatsapp number
63638 87845

BANGALORE, KASTHURI NAGAR
WANTED
1) TALLY ACCOUNTS
2) FIELD SUPERVISORS
for Pvt Ltd Company
Age: Below 30 years
Salary: Rs. 20000 /-
Walk in Interview
No.114, 1st Floor, East of NGEF Lay Out, 2nd Main Road, Kasturi Nagar, Bangalore - 560043
Phone: 08048142577
E-mail: fumi@fumi.in

WANTED FOR Filling Boys In HPCL Prtrol Bunk In Devanahalli Contact Mob: 7619371131 080-23902062

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

TEACHERS / ADMINISTRATIVE STAFF / COMPUTER TECHNICIAN / ELECTRICIAN / SCHOOL BUS DRIVERS/ MECHANICS
REQUIRED
The Archdiocesan Board of Education (ABE), Bengaluru, requires Teachers for LKG to Degree Classes and Clerks / Accountants for its ICSE and State Board Schools. Interested Candidates should submit their Applications in the **ABE Office at Paalanaa Bhavana, Archdiocesan Pastoral Centre, No.5, Nandidurga Road, Jayamahal Extension, Benson Town P.O, Bengaluru - 560046 on or before 05.04.2025** during Office Hours between 10.00 a.m. and 4.30 p.m. on Week days; and Saturdays till 12.30 p.m.
For more details, Contact:
96117 53050 / 080-2333 3050

Marketing & Sales

WANTED BUSINESS DEVELOPMENT EXECUTIVES
Ideal candidates should be able to obtain business from Clearing & forwarding Agents, Exporters, Freight Forwarders with minimum 2 years experience.
Fresher's also considered.
Age: Below 30 years.
Salary: Rs. 25000-30000 /-
Walk in Interview
No.114, 1st Floor, East of NGEF Lay Out, 2nd Main Road, Kasturi Nagar, Bangalore - 560043
Phone: 08048142577
E-mail: fumi@fumi.in

Teachers/ Professors

WANTED TEACHERS A leading educational institution at Bangalore is in urgent requirement of teachers for all classes and faculties from LKG to PUC.Apply within 7days to:The Chairman Crescent High School & PU College,#28 Sultan Road, Briand Square Bangalore-02 superscribing the envelopment with the post applied for. Emoluments &`Perks commensurate with qualification and experience. Email: mmacrescent@gmail.com Contact: 9071120120.

TEACHERS WANTED. Wanted Experienced, M.Sc B.Ed teachers to teach ICSE and PUC Maths, Physics, Chemistry and Biology. Contact Principal- S.D.A High School and PU College. Phone: 9845606243. Email: sdapucollege@gmail.com

SRI SRI ACADEMY
Broaden the Vision... Deepen the Roots
Bangalore North
WE ARE HIRING!
JOIN THE TEAM OF PASSIONATE TEACHING
Are you qualified, trained and experienced educator ready to make a lasting impact? we are on the lookout for dynamic teachers to join our esteemed institution!
Following Faculty are required.
- Pre primary
- English (Std 5 to 8)
- Hindi (Std 1 to 8)
- Sanskrit
- Dance & Music
- Mathematics (Std 5 to 8)
- Kannada (Primary)
- Science (Std 5 to 6)
- Art & Craft

Apply Now
Qualifications:
- Relevant degree or certification in the respective subject or field.
- Teaching experience in a similar capacity.
- Passion for education and a commitment to student success.

Email your resume:
bangalore.ssabn@ssrvm.org
080-68352613/7483136256
bangalorenorth.ssa.org.in
Honnenahalli, Singanayakanahalli, Yelahanka(hobli), Bangalore-560064

ST. MARTIN'S HIGH SCHOOL, 7th Cross Behind Anjan Theatre, Magadi Road, Bangalore-23 Requires HM, Administrative Officer, Academic Supervisor, Librarian. Qualified and trained Teachers for Nursery, Primary and High School to teach all the subjects including Computers, PT, Drawing. Contact 080-23101999/ 9591990199.

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail-maxmullerpublicschool.mlayout@gmail.com

PRIMARY KANNADA Teacher needed for Chitrakoota CBSE school in Nagarbhavi Kengeri Ring Road. Immediately. Contact: 6361522604

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Computer Teacher & P.E.Teacher. STATE & ICSE Qualification: B.A./B.Sc., B.Ed, M.A./M.Sc., M.Ed, N.T.T. CP.Ed. Only English Medium Candidates need to apply

WANTED HEAD Mistress, Teachers for All`Subjects, P.T., Part-Time Yoga, Clerks with Computer Knowledge Primary/High School. J.P.Nagar: 9845042249/ 26590773

TEACHERS FOR LOWER PRIMARY, HIGH SCHOOL - ENGLISH HIGHER PRIMARY - MATHEMATICS ADMIN/FINANCE. COMPUTERS: 1TO7TH WILSON GARDEN: 9663355532

WANTED ENGLISH TEACHER for PU College and High-school. Hindi and Science Teacher for Primary 'DVS SHILPASHREE INSTITUTIONS' Magadi Main Road, Sunkadakatte. 9535305299

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ COMPUTER TEACHERS/ PHYSICAL EDUCATION Salary Rs. 20000 to 35000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470 (Google Map location MATHA'S ENGLISH HIGH SCHOOL) #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917,8277258609

HERITAGE PUBLIC SCHOOL Konanakunte requires HIGH SCHOOL TEACHERS for Maths Physics Chemistry Biology and Social. PRIMARY TEACHERS for`Maths EVS English and KG TEACHERS. Salary is not`a constraint for deserving candidates Resume can be`sent through WhatsApp`or email Mob: 9901733776. Ph:080 26322111. Email: heritagepublicschoolkk@gmail.com

SUNRISE SCHOOL Requires Experienced Lady Teachers for Nursery, Primary & High School for-all Subjects (PE-Male) Coffee Board Layout, Hebbal Contact:9008981637 Email: svsres21@gmail.com

Accounts & Finance

WANTED ACCOUNT ASSISTANT (Male)Bommanahalli, Bangalore, Send Resume to: starsilks@gmail.com

WANTED Senior Accountant & Junior Accountant Contact: 9686198499 or email: info@arkamachineries.com

Drivers

V&V GROUP Behind IIM Bannerghatta Road. Wanted immediately CAR DRIVER cum OFFICE ASSISTANT. Good Salary. Call: 98450-15353

ಕ್ಲಾಸಿಫೈಡ್ಸ್

WEEKEND CORNER

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

Factory

A LEADING bakery equipment manufacturer in Jigani is looking for experienced professionals: 1). Sales & Marketing Manager (6-8 years' experience) 2). Production Manager (CNC machine shop & fabrication expertise 8-10 Years' Experience) Assistant Manager in Stores and Purchase Contact: 9686198499 or email: info@arkamachineries.com

Multiple Vacancy

MINIMINES CLEANTECH Solutions Pvt Ltd. Doddaballpura, Bangalore 562103. We Urgently Required below positions: 1) Store & Logistics Executive/Manager. 2) Purchase Officer Experience: 2-3 years in manufacturing Industry, Any Degree, Knowledge to handle E2E Stores, Purchase, Logistics. Expert in Vendor Management, Payment Request Raising etc. 3) Mechanical/Chemical Engineer with 2-3 years experience. 4) BSC Chemistry with 2-3 Year Experience. 5) MBA Marketing Candidates for Business Development position 3-5 years experience, 6) Need CA, CFA candidate for Financial Strategy Roll. Email: hr@m-mines.com (WhatsApp) 7899216286

CNC/VMC /VTL Machine Shop Situated in Peenya Needs, Assistant Manager, Inspection Boys & Programmer cum Setter. Call: 7996998820/ 8277660933 Email: hrd@bhandariforgings.com

PUBLIC NOTICE
This is to inform the public at large that I, RAKESH RENIWAL, an adult, Indian inhabitant, presently residing at 11, Nepean Ashiana, Cumbala Hill, Mumbai – 400026, have executed a Power of Attorney(s).
I, have by virtue of the above said Power of Attorneys, have nominated, appointed and constituted **(1) Shri Shantisarup Reniwal,** an adult Indian inhabitant presently residing at 25, Ashiyana Building, 19th Floor, 1/578 J. Mehta Road, Kemps Corner, Neapeansea Road, Mumbai – 400036; **(2) Shri Sanjeev Reniwal,** an adult Indian inhabitant presently residing at 3006, 12th B Main, 8th Cross Road, Indira Nagar HAL, 2nd Stage, Bengaluru – 560038 & (3) Shri Rajeev Reniwal, an adult Indian inhabitant presently residing at 25, Ashiyana Building, 19th Floor, 1/578 J. Mehta Road, Kemps Corner, Neapeansea Road, Mumbai – 400036, Jointly, Individually and/or severally, (thereinafter referred to as "MY ATTORNEYS") to be my true and lawful ATTORNEYS for and on my behalf to do execute and perform all acts, deeds and things therein recited.
And whereas for personal reasons and consideration I have cancelled and/or revoked all the powers and/or authority thereby and there under conferred upon them Jointly, Individually and/or severally, as it had become necessary and/or expedient to revoke the said Power of Attorneys.
And by revoking these Power of Attorneys, I, intend to inform the public at large that any person(s) or Company(s) dealing with them as my Constituted Attorneys from the date hereof shall not be treated legal and lawful and I shall not be liable for any such act.
Date: 28.03.2025
Sd/-
Rakesh Reniwal
Address : 11th Floor, 25, Nepean Ashiana, Cumbala Hill, Mumbai – 400026

PUBLIC NOTICE

PUBLIC NOTICE
IN THE COURT OF HONOURABLE SUBORDINATE JUDGE, DENKANIKOTTAI
AS.No.38 / 2021
Krishnappa S/o Muniappa, R/at. Samanatham village, Thally post, Denkanikottai Taluk, Krishnagiri District.
....Appellant / 1st Defendant
Vs
Manjunath S/o Late.Narayanasamy - R8
Srinath S/o Late. Narayanasamy - R9
No.8 and 9 are residing at No.181, T.K.Nagar, Govt. Hospital, 1st Main, 1st Cross, Hosa Road, Bangalore.
.....Respondent No. 8 and 9
NOTICE
This is to inform that the above appellant /1st defendant have filed appeal memorandum of AS.No.38/2021 before the hon'ble court Denkanikottai against the decree and judgement in OS.No.40/2001 in the court of DMC, Denkanikottai. That the above appeal AS.No.38/2021 case is posted on 17.04.2025 for the appearance of Respondent No.R8 and R9 at 10.30AM before this hon'ble court either in person or through counsel, failing which the hon'ble court will pass order against you.
"By order of the court"
E.VENKATESH RAJA M.Sc., LLB., ADVOCATE & NOTARY PUBLIC, KRISHNAGIRI - 635 002.
Cell: 99437 12308, 94887 49919

CENTURY CLUB
1, Seshadri Road, Bangalore – 560 001
Ph.: 22214121/22215122/9740556482/9740556092
Email: club@centuryclub.in / Website: www.centuryclub.in
TENDER NOTIFICATION
Sealed tenders are invited from reputed Civil and Interior Contractors/Firms for the following Renovation works:
A) Renovation of Badminton Section, estimated cost Rs.51 lakhs + GST.
- Application fee Rs.7,500/- + GST

B) Renovation of Department Store to convert into Multi-purpose Party Hall, estimated cost Rs.50 lakhs + GST.
- Application fee Rs.7,500/- + GST

The Tender documents may be collected by paying an application fee by Cash/DD/IMPS between 10 am & 6 pm from the Century Club Office/Reception on all days from 02.04.2025 to 08.04.2025.
The last date for submission of Sealed Tender is on or before 5 pm on 16.04.2025. The Tenders may be put in the Drop Box at Century Club Office. The date of opening Sealed Tenders will be 6 pm on 16.04.2025 at the Office of Century Club.
Sd/- S. Balasubramaniam
Hon. Secretary

BUSINESS

Business to Business

Finance

AVAILABLE FOR All Types of Lands Karnataka & other States Wanted Investors For Properties 9739627282

ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು
MADHU PRODUCTS
NANDI Regd. Trade Mark Copy right
Manufacturers & Dealers in All kinds of NANDI BRAND Paper and Board, Office Stationery Files.
E-mail: info@madhuproducts.in Website: www.madhuproducts.in

Available at all leading stationery shops

Business Offers

Finance

HAVE YOU received NPA Notice/Auction Notice against your properties from your Bank?'To Negotiate and to Close your Loans with Banks. Call Rahul 9845076080 www.loansettlers.com

EDUCATIONAL

Admission

ADMISSIONS 2025 BA B.Com B.Sc BBA BCA MBA M.Com AMIIE B.Tech TMIIE Diploma 10th 12th: 9341273990

Training

NURSING AID Training courses with placement, Bangalore (PROVIDERS OF HOME HEALTH CARE) Contact: 8618073276, 9880165253

MORE Classifieds IN SUPPLEMENT

PERSONAL

Announcements

ANNOUNCEMENT
I, **VRIJLAL M S,** residing at VERA-305, SJR Verity, Kasavanahalli, Bengaluru South, Carmelaram, Bengaluru- 35, declare that in my daughter's **GAURI MULAKKAL** school record my name & my wife's name is mentioned as Vrijlal & Abila. Our correct names are **Vrijlal M S & Abila K Balan**, vide affidavit dated 29.03.2025, before notary A S Narayana Reddy, Bengaluru.

Change of Name

WE, SARANSSH GIRIIYA & SONAM GIRIYA R/a#64 Savera, 2nd`Floor Sannidhi Road Basavanagudi Bengaluru-04, have changed minor Son name AARAV JAIN (NEW NAME) and (OLD Name) AARAV GIRIYA vide`affidavit 28.03.2025 before Notary Hemalatha Bangalore

CHANGE OF NAME
I, **ACHUTHA NAYAK GUNAVATHI SHEDIGAR,** Residing at No.35, Shanthi Siri, 2nd Main, Talakaveri Nagar, Marathahalli, Marathahalli Colony, Bengaluru - 560037 have changed my name to **GUNAVATHI SRIDHAR** vide affidavit dated 29.03.2025 before Notary K.N. Ramadevi, Bengaluru

I, RANJNA R/a Flat#1042, Sunbeam-1 Sobha Hillview Apartment, Opposite to Home School, Talaghatpura Bengaluru-109, have changed name RANJNA ANAND vide`affidavit 28.03.2025 before`Notary Hemalatha Bengaluru.

CHANGE OF NAME
I, **ASHALATHA MALLAPUR** W/o. Bharat Arun Mallapur Residing flat #403, Classic Pride Apartment, Classic County Layout, Kommaghatta Road, Kengeri, Bangalore-560060 Declare that **ASHALATHA MALLAPUR, ASHALATHA BHARAT MALLAPUR** and **ASHA BHARAT MALLAPUR** above all names refer to one and the same person, i.e. myself only. Henceforth, i will be known as **ASHALATHA MALLAPUR** for all my future purpose. Vide affidavit dated: 27.3.2025 Sworn before Notary Ravi, Bangalore.

I, MOHAMMED THOUHID R/a#80, 1st`Cross, Yarabnagar Bengaluru-70, have changed name MOHAMMED TOUHID vide affidavit 28.03.2025 before`Notary Hemalaha Bengaluru.

I, MEGALAKOPPLU CHANDRE GOWDA UMESHA S/o. Chandre Gowda R/a Flat #406, Karishma Palace, Raja Gardenia Layout, Turahalli, Uttarahalli, Bangalore-560061 have changed my Name to MEGALAKOPPALU CHANDRE GOWDA UMESH vide affidavit dated 13.03.2025 sworn before Notary Mohammed Hussain.K., Bangalore.

I, HUSNA BANU ZABIULLA R/a#3/1 Z SQUARE, Flat T02 3rd`Floor, Hennur Main`Road, 1st Cross, Lingarajapuram Bengaluru-84, have changed name HUSNA BANU vide`affidavit 28.03.2025 before`Notary Hemalatha, Bengaluru.

I, LISSAMMA CHACKO Aged about 56 years, D/o. Joseph Kochuveettil Residing at flat No. 15, VPR Building, Between 14th & 15th cross, Hongasandra Village, Begur Road, Bangalore- 560068, Have changed my Name to LISAMMA K JOSEPH, vide affidavit dated 24/03/2025 Before Notary K.V.Mani, Bangalore -30.

ವರಿಷ್ಠರ ಪ್ರವೇಶ: ಬಿವೈವಿಗೆ ಮತ್ತೆ ಅವಕಾಶ?

• ವೈ.ಗ. ಜಗದೀಶ್

ಬಿಜೆಪಿಯೆಂಬ ಕೋಟೆಯ ಕಲ್ಲುಗಳು ಅದುರಿ, ಶಕ್ತಿ ಸ್ಥಳವೇ ಅಲ್ಲಾಡಲು ಆರಂಭಿಸಿದ ಮೇಲೆ ಆ ಪಕ್ಷದ ವರಿಷ್ಠರು, ಕುಸಿದ ಭದ್ರ ಕೋಟೆಯ ರಕ್ಷಣೆಗೆ ದುರ್ಬಲ ಖಡ್ಗ ಹಿಡಿದು ಅಖಾಡಕ್ಕೆ ಇಳಿದಿದ್ದಾರೆ. ಸುದೀರ್ಘ ಅವಧಿಯ ಮೌನದ ಬಳಿಕ ಮಧ್ಯ ಪ್ರವೇಶಿಸಿದ ವರಿಷ್ಠರು, ಐವರಿಗೆ ನೋಟಿಸ್ ನೀಡಿ, ಒಬ್ಬರನ್ನು ಉಚ್ಚಾಟನೆ ಮಾಡಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸಂಘಟನಾ ಚಟುವಟಿಕೆಯನ್ನು ಮುಂದುವರಿಸುವ 'ಉದಾರ' ಅವಕಾಶವನ್ನೂ ಕಲ್ಪಿಸಿದ್ದಾರೆ.

'ಲೋಕಸಭೆ ಚುನಾವಣೆ ಬಳಿಕ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಸಮರವೇ ಶುರುವಾಗಲಿದೆ; ಸರ್ಕಾರವೇ ಪತನವಾಗಲಿದೆ; ಚುನಾವಣೆಗೆ ಸಜ್ಜಾಗಿ' ಎಂದು ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ, ರಾಜ್ಯದ ನಾಯಕರು ತುತ್ತೂರಿ ಊದುತ್ತಲೇ ಬಂದಿದ್ದರು. ಎದುರಾಳಿ ಪಕ್ಷದಲ್ಲಿ ಅಸ್ಥಿರತೆ ಬಯಸಿದ್ದ ನಾಯಕರು, ಅಲ್ಲಾಡತೊಡಗಿದ್ದ ತಮ್ಮ ಪಕ್ಷದ ಬುಡವನ್ನೇ ಭದ್ರಗೊಳಿಸಲು ಆಗಲಿಲ್ಲ ಎಂಬ ಚರ್ಚೆ ಪಕ್ಷದ ವಲಯದಲ್ಲೇ ನಡೆಯುತ್ತಿದೆ. ಅಷ್ಟರಮಟ್ಟಿಗೆ ಬಿಜೆಪಿ ಆಂತರಿಕ ಜಗಳ ತಾರಕಕ್ಕೇರಿ, ಬೀದಿ ಕದನದ ಸ್ವರೂಪಕ್ಕೆ ತಿರುಗಿತ್ತು.

ವಿಜಯೇಂದ್ರ ಅವರನ್ನು ಪಕ್ಷದಿಂದ ಇಳಿಸಿಯೇ ಸಿದ್ಧ ಎಂದು ಪ್ರತಿಪಾದಿಸುತ್ತಿರುವ ಗುಂಪಿನ ನೇತೃತ್ವ ಯತ್ನಾಳ ಅವರದ್ದಾದರೂ ಆ ಬಣದಲ್ಲಿ ಎಲ್ಲ ಜಾತಿಯವರೂ ಇದ್ದಾರೆ. ರಾಜ್ಯವನ್ನು ಪ್ರತಿನಿಧಿಸುವ ಬಹುತೇಕ ಸಂಸದರೂ ತಮ್ಮ ಬೆಂಬಲಕ್ಕೆ ಇದ್ದಾರೆ; ಅವರು ಬಹಿರಂಗವಾಗಿ ತಮ್ಮ ನಿಲುವು ಪ್ರಕಟಿಸುತ್ತಿಲ್ಲ ಎಂಬುದು ಯತ್ನಾಳ ಬಣದವರ ಮಾತು.

ಯಡಿಯೂರಪ್ಪ ಎರಡನೇ ಬಾರಿ ಮುಖ್ಯಮಂತ್ರಿಯಾದ ಬಳಿಕ ಶುರುವಾದ ಯತ್ನಾಳ ಸಮರ ಈವರೆಗೂ ನಿಂತಿಲ್ಲ. ವಿಜಯೇಂದ್ರ ಮತ್ತು ಯಡಿಯೂರಪ್ಪ ವಿರುದ್ಧ ಯತ್ನಾಳ ಹರಿಹಾಯುತ್ತಲೇ ಬಂದಿದ್ದರು. ವಿಜಯೇಂದ್ರ ಪದಚ್ಯುತಿಯಾಗುವವರೆಗೆ ಪಕ್ಷದ ಚಟುವಟಿಕೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದ್ದರು. ಕಾಂಗ್ರೆಸ್ ಸರ್ಕಾರದ ವಿರುದ್ಧ ಹಲವು ಹಗರಣಗಳ ಆರೋಪ, ಪ್ರಮುಖರ ವಿರುದ್ಧದ ತನಿಖೆಗಳು, ಬೆಲೆ ಏರಿಕೆ, ಮಧುಬಲೆ ಪ್ರಕರಣ, ರೈತರ ಆತ್ಮಹತ್ಯೆಯಂತಹ ವಿಷಯಗಳನ್ನು ಮುಂದಿಟ್ಟು ಹೋರಾಟ ನಡೆಸಬಹುದಾದ ವಿಪುಲ ಅವಕಾಶಗಳಿದ್ದರೂ ಬಣ ಜಗಳ, ನಾಯಕತ್ವದ ಪೈಪೋಟಿಯಿಂದಾಗಿ ಯಾವ ವಿಷಯದಲ್ಲೂ ಪ್ರಬಲ ಹೋರಾಟವನ್ನು ಪಕ್ಷ ನಡೆಸಲೇ ಇಲ್ಲ. ಸಮರ್ಥ ವಿರೋಧ ಪಕ್ಷವಾಗಿ ತನ್ನ ಹೊಣೆಯನ್ನು ನಿಭಾಯಿಸುವಲ್ಲಿ ರಾಜ್ಯದ ನಾಯಕತ್ವ ವಿಫಲವಾಯಿತು. ಇದಕ್ಕೆಲ್ಲ, ಪಕ್ಷದಲ್ಲಿನ ಆಂತರಿಕ ಜಗಳವೇ ಕಾರಣ ಎಂಬುದು ದಿಟ.

'ವಿಜಯೇಂದ್ರ ಅವರಿಗೆ ಅಪ್ಪನ ಪ್ರಭಾವಳಿ ಬಿಟ್ಟರೆ ಪಕ್ಷವನ್ನು ಮುನ್ನಡೆಸುವ ನಾಯಕತ್ವ ಗುಣವಿಲ್ಲ. ದಶಕಗಳ ಕಾಲ ಪಕ್ಷವನ್ನು ಸಂಘಟಿಸಿದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಬದಲು ತಮ್ಮದೇ ನಡೆಯಬೇಕೆಂಬ ಧೋರಣೆಯನ್ನು ಹೊಂದಿದ್ದಾರೆ. ಬಿಜೆಪಿಯನ್ನು ಸಂಘಟಿಸುವ ಬದಲು, ಹಿಂದೆ ಕರ್ನಾಟಕ ಜನತಾ ಪಕ್ಷ (ಕೆಜೆಪಿ)ದಲ್ಲಿ ಗುರುತಿಸಿಕೊಂಡರವನ್ನೇ ಮುಂಚೂಣಿಗೆ ತರುವ ಯತ್ನ ನಡೆಸುವ ಅವರು, ಹಾಲಿ ಅಥವಾ ಮಾಜಿ ಶಾಸಕ, ಸಂಸದರ ಎದುರು ತಮ್ಮದೇ ಗುಂಪನ್ನು ಕಟ್ಟುತ್ತಿದ್ದಾರೆ. ಇದು ತಮ್ಮ ವರ್ಚಸ್ಸನ್ನು ವಿಸ್ತರಿಸಿಕೊಳ್ಳುವ ಯತ್ನವಾಗಿದ್ದು, ಪಕ್ಷಕ್ಕೆ ಉಪಯೋಗವಿಲ್ಲ' ಎಂಬ ದೂರನ್ನು ಯತ್ನಾಳ ಬಣ ಮಾಡುತ್ತಲೇ ಬಂದಿದೆ. ತಂದೆಯ ಪ್ರಭಾವ ಹಾಗೂ ಸಮೃದ್ಧ ಸಂಪನ್ಮೂಲ ಹೊಂದಿಸಬಹುದಾದ ಶಕ್ತಿಯೇ ವಿಜಯೇಂದ್ರ ಅವರ ಮಿತಿಯೂ ಆಗಿದೆ. ಹೀಗಾಗಿಯೇ, ಪಕ್ಷದ ಒಳಜಗಳ ವಿಕೋಪಕ್ಕೆ ಹೋಗುತ್ತಲೇ ಇದೆ.

ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ್ದ ಪಕ್ಷದ ವರಿಷ್ಠರು ಈ ವರೆಗೂ ಯಾವುದೇ ಕ್ರಮವನ್ನು ಜರುಗಿಸಿರಲಿಲ್ಲ. ಪಕ್ಷದ ಹೊರಗೆ ಕಾಲಿಟ್ಟಿರುವ ಎಸ್‌.ಟಿ. ಸೋಮಶೇಖರ್ ಹಾಗೂ ಶಿವರಾಂ ಹೆಬ್ಬಾರ್ ಅವರಿಗೆ ನೋಟಿಸ್ ಕೂಡ ನೀಡಿರಲಿಲ್ಲ. ವಿಜಯೇಂದ್ರ ಅವರು ಇಡೀ ಪಕ್ಷವನ್ನೇ ತನ್ನ ಏಕಸ್ವಾಮ್ಯಕ್ಕೆ ತೆಗೆದುಕೊಳ್ಳಲು ಅವಕಾಶ ನೀಡಬಾರದು ಎಂಬ ಆಲೋಚನೆಯೂ ವರಿಷ್ಠರದ್ದಾಗಿರಬಹುದು. ಹೀಗಾಗಿಯೇ, ಮೌನ ವಹಿಸಿತ್ತು ಎಂದೂ ಹೇಳಲಾಗುತ್ತಿದೆ.

ಯತ್ನಾಳ ಉಚ್ಚಾಟನೆ ಹಾಗೂ ಭಿನ್ನರ ಬಣದ ಮೂವರಿಗೆ ನೋಟಿಸ್ ನೀಡಿರುವುದು ವಿಜಯೇಂದ್ರ ಅವರ ಸದ್ಯದ ಮೇಲುಗೈ. ಹಾಗಂತ, ನೋಟಿಸ್ ಪಡೆದವರು ಸುಮ್ಮನೆ ಕೂರುವವರಲ್ಲ. ಆದರೆ, ವರಿಷ್ಠರು ವಿಜಯೇಂದ್ರ ಪರ ಇದ್ದಾರೆ ಎಂಬುದು ಖಚಿತವಾದರಷ್ಟೇ, ಭಿನ್ನರ ಬಣ ಮೌನಕ್ಕೆ ಸರಿದೀತು. ಯತ್ನಾಳರಿಗೆ ನೋಟಿಸ್ ನೀಡುವ ಮೂಲಕ, ವಿಜಯೇಂದ್ರಗೆ ಅವಕಾಶವನ್ನು ಕಲ್ಪಿಸಲಾಗಿದೆ. ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಂಡು ವಿಜಯೇಂದ್ರ ಹೇಗೆ ಮುನ್ನಡೆಯಲಿದ್ದಾರೆ ಎಂಬುದಷ್ಟೇ ಅವರ ಭವಿಷ್ಯವನ್ನು ನಿರ್ಧರಿಸಲಿದೆ.

ಮೋಕ್ಷ ಸಾಧ್ಯವೇ?

'ಗಜೇಂದ್ರ ಮೋಕ್ಷ'ದಂತೆ ವಿಜಯೇಂದ್ರ ಮೋಕ್ಷವೂ ಸನ್ನಿಹಿತವಾಗಿದೆಯೇ? ಗಜೇಂದ್ರ ಎಂಬ ಆನೆಯು 'ಕಮಲ'ವನ್ನು ತರಲು ಸರೋವರಕ್ಕೆ ಹೋಗಿತ್ತು. ಆಗ, ಮೊಸಳೆಯೊಂದು ಅದರ ಕಾಲನ್ನು ಬಲವಾಗಿ ಹಿಡಿದುಕೊಂಡಿತು. ಕಮಲವನ್ನು ವಿಷ್ಣುವಿಗೆ ಸಲ್ಲಿಸಿದ ಗಜೇಂದ್ರ ಮೊಸಳೆಯಿಂದ ಮುಕ್ತಿ ಪಡೆದಿದ್ದ. ವಿಜಯೇಂದ್ರರ ಕೈಗೆ ಪಕ್ಷದ ವರಿಷ್ಠರು 'ಕಮಲ' ಕೊಟ್ಟು ಬಹಳ ಕಾಲವಾಯಿತು. ಆ ಕಮಲವನ್ನು ಜನರ ಮುಂದೆ ಹಿಡಿದು ಓಡಾಡುವ ಬದಲು ಜೇಬಿನಲ್ಲಿಟ್ಟುಕೊಂಡಿದ್ದೇ, ವಿರೋಧಿಗಳು ಅವರ ಕಾಲು ಹಿಡಿದು ಎಳೆಯಲು ಕಾರಣ. ಈಗ 'ಕಮಲ'ವನ್ನು ವಿಜಯೇಂದ್ರ ಏನು ಮಾಡುವವರು ಎಂಬುದರ ಮೇಲೆ ಅವರ ಭವಿಷ್ಯ ನಿಂತಿದೆ.

ಸುದ್ದಿ ವಿಶ್ಲೇಷಣೆ

'ಉಗ್ರ ಹಿಂದುತ್ವವಾದಿಗಳು ಬದಿಗೆ'

ಯತ್ನಾಳ ಅವರನ್ನು ಉಚ್ಚಾಟಿಸುವ ಮೂಲಕ, ಕೇಸರಿ ಪಡೆಯಲ್ಲಿದ್ದ ಬಹುತೇಕ ಉಗ್ರ ಹಿಂದುತ್ವವಾದಿಗಳನ್ನು ಬದಿಗೆ ಸರಿಸಿದಂತಾಗಿದೆ. ಈಗಾಗಲೇ ಅನಂತಕುಮಾರ ಹೆಗಡೆ, ಕೆ.ಎಸ್. ಈಶ್ವರಪ್ಪ ಮೂಲೆ ಸೇರಿದ್ದಾರೆ. ಟಿಕೆಟ್ ಕೊಡದೇ ಇರುವ ಕಾರಣಕ್ಕೆ ಪ್ರತಾಪ ಸಿಂಹ, ಚಿಕ್ಕಮಗಳೂರಿನಲ್ಲಿ ಸೋತ ಬಳಿಕ ಸಿ.ಟಿ. ರವಿ, ಮತ್ತೊಮ್ಮೆ ಕೇಂದ್ರ ಸಚಿವೆಯಾದ ಬಳಿಕ ಶೋಭಾ ಕರಂದ್ಲಾಜೆ ಎಲ್ಲರೂ ತಮ್ಮ ರಾಗ ಬದಲಿಸಿದ್ದಾರೆ.

ಬೆಲೆ ಏರಿಕೆ; 2ರಿಂದ ಬಿಜೆಪಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್, ಹಾಲು, ಬಸ್ ಪ್ರಯಾಣ ದರ ಹೆಚ್ಚಳ ಸೇರಿದಂತೆ ಬೆಲೆ ಏರಿಕೆ ವಿರುದ್ಧ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಏ. 2ರಿಂದ ಅಹೋರಾತ್ರಿ ಧರಣಿ ಆರಂಭಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಬಿಜೆಪಿಯ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಶಾಸಕರು, ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು, ಜಿಲ್ಲಾ ಘಟಕಗಳ ಅಧ್ಯಕ್ಷರು, ಪಕ್ಷದ ಎಲ್ಲ ಪದಾಧಿಕಾರಿಗಳು ಧರಣಿಯಲ್ಲಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಏ.4ರಂದು ಜಿಲ್ಲಾ ಕೇಂದ್ರಗಳಲ್ಲಿ, 5ರಂದು ಎಲ್ಲ ಮಂಡಲಗಳ ಕೇಂದ್ರ ಸ್ಥಾನದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಲಿದ್ದಾರೆ ಎಂದರು.

ಶಾಸಕರ ಅಮಾನತು ಖಂಡಿಸಿ ಪ್ರತಿಭಟನೆ: ಅಧಿವೇಶನದ ಕೊನೆಯ ದಿನ ಬಿಜೆಪಿಯ 18 ಶಾಸಕರನ್ನು ಆರು ತಿಂಗಳು ಅಮಾನತು ಮಾಡಿದ ಸಭಾಧ್ಯಕ್ಷರ ಆದೇಶ ಖಂಡಿಸಿ ಏ.2ರಂದು ವಿಧಾನಸೌಧ ಮುಂಭಾಗದ ಕೆಂಗಲ್ ಪ್ರತಿಮೆಯ ಮುಂದೆ ಪ್ರತಿಭಟನೆ ನಡೆಸಲಾಗುವುದು. ನಂತರ ಸ್ವಾತಂತ್ರ್ಯ ಉದ್ಯಾನಕ್ಕೆ ತೆರಳಲಾಗುವುದು ಎಂದರು.

18 ಶಾಸಕರ ಅಮಾನತು ಆದೇಶ ಹಿಂಪಡೆಯುವವರೆಗೆ ಬಿಜೆಪಿಯ ಶಾಸಕರು, ವಿಧಾನಪರಿಷತ್ ಸದಸ್ಯರು ಸದನ ಸಮಿತಿಯ ಸಭೆಗಳಿಗೆ ಹಾಜರಾಗುವುದಿಲ್ಲ

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಘಟಕದ ಅಧ್ಯಕ್ಷ

'ಸೆಮಿಕ್ರಯೊಜನಿಕ್' ಪರೀಕ್ಷೆ ಯಶಸ್ವಿ

ಬೆಂಗಳೂರು (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) 2 ಸಾವಿರ ಕಿಲೊನ್ಯೂಟನ್ ಸಾಮರ್ಥ್ಯದ ಸೆಮಿಕ್ರಯೊಜನಿಕ್ ಎಂಜಿನ್‌ನ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಈ ಎಂಜಿನ್ ಅನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿದ್ದು, ಉಪಗ್ರಹ ಉಡ್ಡಯನ ವಾಹನ ತಂತ್ರಜ್ಞಾನ ವ್ಯವಸ್ಥೆ ಮಾರ್ಕ್–3ರ (ಎಲ್‌ಎಂವಿ–3) ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ಇಸ್ರೊ ಹೇಳಿದೆ.

'ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೊ ಕೇಂದ್ರದಲ್ಲಿ ಈ ಪರೀಕ್ಷೆಯನ್ನು ಶುಕ್ರವಾರ ನಡೆಸಲಾಯಿತು. 2.5 ಸೆಕೆಂಡ್‌ಗಳ ಅವಧಿಯಲ್ಲಿ ನಡೆದ ಈ ಯಶಸ್ವಿ ಪರೀಕ್ಷೆಯು, ಸೆಮಿಕ್ರಯೊಜನಿಕ್ ಎಂಜಿನ್ (ಲಿಕ್ವಿಡ್ ಆಕ್ಸಿಜನ್/ಕೆರೊಸಿನ್ ಎಂಜಿನ್) ಅಭಿವೃದ್ಧಿ ಯೋಜನೆಯ ಮಹತ್ವದ ಘಟ್ಟವಾಗಿದೆ' ಎಂದು ಇಸ್ರೊ ಶನಿವಾರ ತಿಳಿಸಿದೆ.

ಸೆಮಿಕ್ರಯೊಜನಿಕ್ ಎಂಜಿನ್ ಪರೀಕ್ಷೆ

ಸದ್ಯ ಎಲ್‌ಎಂವಿ–3 ರಾಕೆಟ್‌ಗಳಲ್ಲಿ ಬಳಸಲಾಗುತ್ತಿರುವ ಲಿಕ್ವಿಡ್ ಪ್ರೊಫೆಲೆಂಟ್ ಆಧಾರಿತ ಎಲ್110 ಎಂಜಿನ್ ಬದಲಿಗೆ, ಅಧಿಕ ಭಾರ ಹೊರುವ ಸಾಮರ್ಥ್ಯವಿರುವ ಈ ಸೆಮಿಕ್ರಯೊಜನಿಕ್ ಎಂಜಿನ್ (ಎಸ್‌ಇ2000) ಅನ್ನು ಮುಂದಿನ ದಿನಗಳಲ್ಲಿ ಅಳವಡಿಸಲಾಗುವುದು ಎಂದು ಇಸ್ರೊ ಮಾಹಿತಿ ನೀಡಿದೆ.

ಎಲ್‌ಎಂವಿ–3 ರಾಕೆಟ್‌ಗಳಲ್ಲಿ ಸೆಮಿಕ್ರಯೊಜನಿಕ್ ಎಂಜಿನ್ ಅಳವಡಿಸಿದಲ್ಲಿ, ನಭಕ್ಕೆ ಭಾರ ಹೊತ್ತೊಯ್ಯುವ ಸಾಮರ್ಥ್ಯವನ್ನು 5 ಟನ್‌ಗೆ ವೃದ್ಧಿಸಲಿದೆ ಎಂದು ತಿಳಿಸಿದೆ.

'ಕಾನೂನುಬಾಹಿರ ಮಾಹಿತಿ ಪ್ರಸಾರ ನಿರ್ಬಂಧ ಇಂದಿನ ತುರ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಅಡಿಯಲ್ಲಿ ಅಕ್ರಮ ಅಥವಾ ಕಾನೂನುಬಾಹಿರ ಮಾಹಿತಿಗಳ ಹಂಚಿಕೆಯನ್ನು ರಕ್ಷಣೆ ಮಾಡಲಾಗದು' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣ ಸಂಸ್ಥೆಗಳಿಗೆ ಆದೇಶಿಸಲು ಅವಕಾಶ ಕಲ್ಪಿಸುವುದಕ್ಕಾಗಿ, 'ಸಹಯೋಗ್ ಪೋರ್ಟಲ್' ಆರಂಭಿಸಿರುವ ಕೇಂದ್ರದ ಕ್ರಮ ಮತ್ತು ಅದರ ಬಳಕೆಯನ್ನು ಪ್ರಶ್ನಿಸಲಾದ 'ಎಕ್ಸ್' ಕಾರ್ಪ್‌ನ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಈ ಅಂಶವನ್ನು ವಿಶದಪಡಿಸಲಾಗಿದೆ.

'ಕಾನೂನುಬಾಹಿರ ವಿಷಯಗಳನ್ನು ನಿಯಂತ್ರಿಸುವುದು ಇಂದು ನಿರ್ಣಾಯಕ ಎನಿಸಿದೆ. ಇಂತಹ ವಿಚಾರಗಳ ಪ್ರಸಾರವು ಪ್ರಜಾಪ್ರಭುತ್ವದ ಪ್ರಕ್ರಿಯೆಗಳು, ಮುಕ್ತ ಮತ್ತು ದೃಢವಾದ ವಿಚಾರಗಳ ಸಮಗ್ರತೆಯನ್ನು ಹಾಳು ಮಾಡುತ್ತವೆ. ಇಂದಿನ ಅಂತರ್‌ಜಾಲದ ಯುಗದಲ್ಲಿ ಕಾನೂನುಬಾಹಿರ ವಿಷಯಗಳು ಇನ್ನಿಲ್ಲದ ವೇಗ ಪಡೆದು ಪ್ರಸಾರವಾಗುತ್ತವೆ. ಹಾಗಾಗಿ, ಎಕ್ಸ್ ಕಾರ್ಪ್ ಸಲ್ಲಿಸಿರುವ ಈ ಅರ್ಜಿಯನ್ನು ಭಾರಿ ಮೊತ್ತದ ದಂಡ ಪಾವತಿಗೆ ಆದೇಶಿಸಿ ವಜಾಗೊಳಿಸಬೇಕು' ಎಂದು ಆಕ್ಷೇಪಣೆಯಲ್ಲಿ ಕೋರಲಾಗಿದೆ.

'ಮಾಹಿತಿ ಹಂಚಿಕೆಯನ್ನು ನಿರ್ಬಂಧಿಸುವ ದಿಸೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 79(3)ರ ಅಡಿಯಲ್ಲಿ ಜಾರಿಗೆ ತರಲಾಗಿರುವ ಪೋರ್ಟಲ್, ಕಾನೂನಿನ ವೈರುಧ್ಯಗಳಿಗೆ ಸಾಕ್ಷಿಯಾಗಿದೆ' ಎಂದು ಆಕ್ಷೇಪಿಸಿ 'ಎಕ್ಸ್'ನ ಸ್ಥಳೀಯ ಅಧಿಕೃತ ಪ್ರತಿನಿಧಿ ಕರ್ನಾಟಕ ಹೈಕೋರ್ಟ್‌ನಲ್ಲಿ ಈ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯು ಏಪ್ರಿಲ್ 3ರಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

ನಿಧನ ವಾರ್ತೆ

ಎಂ.ಬಿ.ರಾಮಮೂರ್ತಿ

ಬೆಂಗಳೂರು: ಬೆಂಗಳೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ, ಸಾಹಿತಿ ಡಾ. ಎಂ.ಬಿ.ರಾಮಮೂರ್ತಿ (62) ಅಲ್ಪಕಾಲದ ಅನಾರೋಗ್ಯದಿಂದಾಗಿ ಶನಿವಾರ ಮಧ್ಯಾಹ್ನ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ನಗರದ ಮಾಗಡಿ ರಸ್ತೆಯಲ್ಲಿರುವ ಸುಮನಹಳ್ಳಿ ಚಿತಾಗಾರದಲ್ಲಿ ನೆರವೇರಲಿದೆ.

ದಾವಣಗೆರೆಯ ರಾಮಮೂರ್ತಿ ಅವರು ವೈದ್ಯಕೀಯ ಪ್ರಾಧ್ಯಾಪಕ ವೃತ್ತಿ ಜೊತೆಗೆ, ನೈಸರ್ಗಿಕ ಕೃಷಿ, ಪರಿಸರ, ಸಾಹಿತ್ಯ ಕ್ಷೇತ್ರದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು. ಉತ್ತಮ ಅನುವಾದಕರಾಗಿದ್ದ ಅವರು ಖುಶ್ವಂತ್ ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿಯನ್ನು, 'ನಾಟಿ ಹಸು' ಕುರಿತು ಮರಾಠಿ ಪುಸ್ತಕವನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. 'ರೈತರು ಮತ್ತು ಕಾರ್ಮಿಕರ ಆರೋಗ್ಯ ಸಮಸ್ಯೆಗಳು' ಮತ್ತು ಜೀವನ ಮತ್ತು ಆರೋಗ್ಯ' ಇವು ಅವರ ಪ್ರಮುಖ ಕೃತಿಗಳು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹16500-18000
ಅರಸೀಕೆರೆ	₹17500-17500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಹೆಚ್.ಎಂ.ಹುಚ್ಚೇಗೌಡರು
ನಿಧನ: 30-03-1999
ನೀವು ನಮ್ಮನ್ನು ಅಗಲಿ ಇಪ್ಪತ್ತಾರು ವರ್ಷವಾಯಿತು, ನಿಮ್ಮ ಸವಿನೆನಪು ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಧರ್ಮಪತ್ನಿ: ಕಮಲಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

12ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮೀದೇವಿ
ನಿಧನ : 30.03.2013
ನೀವು ನಮ್ಮನ್ನ ಅಗಲಿ ಇಂದಿಗೆ ಹನ್ನೆರಡು ವರ್ಷ ತುಂಬಿದೆ
ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ಪತಿ - ವಿ. ಕೃಷ್ಣಪ್ಪ
ಮಕ್ಕಳು ಹಾಗೂ ಮೊಮ್ಮಕ್ಕಳು
ಕುಟುಂಬವರ್ಗ ಹಾಗೂ ಬಂಧು-ಮಿತ್ರರು
ತ್ಯಾಗರಾಜನಗರ, ಬೆಂ-28.
9341373739, 9900444777
ದಿನಾಂಕ 30.03.2025

WEEKEND CORNER

ಸೆನ್ಸೆಕ್ಸ್ 3,763 ಅಂಶ ಏರಿಕೆ: ₹25.90 ಲಕ್ಷ ಕೋಟಿ ಸಂಪತ್ತು ವೃದ್ಧಿ

ಹೂಡಿಕೆದಾರರಿಗೆ ಲಾಭದ ವರ್ಷ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಷೇರುಪೇಟೆಯು ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿದೆ. ಒಟ್ಟು ₹25.90 ಲಕ್ಷ ಕೋಟಿ ಸಂಪತ್ತು ವೃದ್ಧಿಯಾಗಿದೆ.

2023–24ರಲ್ಲಿ ಷೇರುಪೇಟೆಯು ಇಳಿಕೆ ಕಂಡಿದ್ದರಿಂದ ಹೆಚ್ಚು ನಷ್ಟ ಅನುಭವಿಸಿದ್ದರು. ಆದರೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮಾರುಕಟ್ಟೆಯು ಏರಿಕೆ ದಾಖಲಿಸಿದೆ. ಒಟ್ಟಾರೆ ಹೂಡಿಕೆದಾರರ ಪಾಲಿಗೆ ಆಶಾದಾಯಕವಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 3,763 ಅಂಶ ಏರಿಕೆ (ಶೇ 5.10) ಕಂಡಿದ್ದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 1,192 ಅಂಶ ಹೆಚ್ಚಳ (ಶೇ 5.34) ಕಂಡಿದೆ. ಬಿಎಸ್‌ಇ ಗುಚ್ಛದಲ್ಲಿರುವ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹412 ಲಕ್ಷ ಕೋಟಿಗೆ ತಲುಪಿದೆ.

ಈ ಆರ್ಥಿಕ ವರ್ಷವು ಚಿಲ್ಲರೆ ಹೂಡಿಕೆದಾರರ ಪಾಲಿಗೆ ಉತ್ತಮವಾಗಿತ್ತು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಅತಿಹೆಚ್ಚು ಪ್ರಮಾಣದಲ್ಲಿ ಬಂಡವಾಳ ಹಿಂಪಡೆದಿದ್ದಾರೆ. ಆದರೆ, ದೇಶೀಯ ಸಾಂಸ್ಥಿಕ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಖರೀದಿಸಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್ 27ರಂದು ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 85,978ಕ್ಕೆ ತಲುಪಿತ್ತು.

ಮುಖ್ಯಾಂಶಗಳು
- ಷೇರುಪೇಟೆ ಏರಿಕೆಗೆ ಕೇಂದ್ರ ಸರ್ಕಾರದ ನೀತಿಗಳು ವರದಾನ
- ಜಾಗತಿಕ ಅನಿಶ್ಚಿತ ಸ್ಥಿತಿ ಮುಂದುವರಿಕೆ
- ಬಿಎಸ್‌ಇ ಗುಚ್ಛದಲ್ಲಿರುವ ಕಂಪನಿಗಳ ಎಂ–ಕ್ಯಾಪ್ ₹412 ಲಕ್ಷ ಕೋಟಿ

ಅಕ್ಟೋಬರ್ ಕಥೆ-ವ್ಯಥೆ: ಅಕ್ಟೋಬರ್ ನಂತರ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾದ ಅನಿಶ್ಚಿತ ಸ್ಥಿತಿಯು ಷೇರುಪೇಟೆಯಲ್ಲಿ ಏರಿಳಿತಕ್ಕೆ ಕಾರಣವಾಯಿತು. ಈ ತಿಂಗಳಿನಲ್ಲಿ ಸೆನ್ಸೆಕ್ಸ್ 4,910 ಅಂಶ (ಶೇ 5.82) ಇಳಿಕೆ ಕಂಡಿತ್ತು. ಇದರಿಂದ ಹೂಡಿಕೆದಾರರು ಹೆಚ್ಚು ನಷ್ಟ ಅನುಭವಿಸಿದರು.

ಆದರೆ, ಮಾರುಕಟ್ಟೆಯಲ್ಲಿ ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಿದ್ದರಿಂದ ಆ ನಂತರದ ಅವಧಿಯಲ್ಲಿ ಮಾರುಕಟ್ಟೆಯು ಗಳಿಕೆಯ ಹಾದಿಗೆ ಮರಳಿತು ಎಂದು ತಜ್ಞರು ಹೇಳಿದ್ದಾರೆ.

ಅಲ್ಲದೆ, ಹಲವು ಕಂಪನಿಗಳು ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಬಂಡವಾಳ ಸಂಗ್ರಹಕ್ಕೆ ಮುಂದಾದವು. ಇದು ಮಾರುಕಟ್ಟೆಯು ಸಕಾರಾತ್ಮಕ ವಹಿವಾಟಿಗೆ ನೆರವಾಯಿತು ಎಂದು ಹೇಳಿದ್ದಾರೆ.

‘ಲೋಕಸಭಾ ಚುನಾವಣಾ ಫಲಿತಾಂಶವು ದೇಶದಲ್ಲಿ ರಾಜಕೀಯ ಸ್ಥಿರತೆ ಬಗ್ಗೆ ಹೂಡಿಕೆದಾರರಲ್ಲಿ ವಿಶ್ವಾಸ ವೃದ್ಧಿಸಿತು. ಅಲ್ಲದೆ, ಸರ್ಕಾರದ ನೀತಿಗಳು ಮಾರುಕಟ್ಟೆಯು ಏರಿಕೆ ಕಾಣಲು ನೆರವಾಗಿವೆ’ ಎಂದು ಮಾಸ್ಟರ್ ಕ್ಯಾಪಿಟಲ್ ಸರ್ವಿಸ್ ಲಿಮಿಟೆಡ್‌ನ ನಿರ್ದೇಶಕಿ ಪಾಲ್ಕಾ ಅರೋರಾ ಚೋಪ್ರಾ ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹225-544
ದ್ವಿತಳಿ (ಬಿ.ವಿ)	₹226-666

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹197
ಗುಡ್ ಲಾಟ್	₹188

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹505
12 ಕ್ಕೆ	₹67
ಮೈಸೂರು	
100ಕ್ಕೆ	₹505

ಮುಂಬೈ ಧಾರಣೆ

ಶೇಂಗಾ 29-3-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಸಂಕ್ಷಿಪ್ತ ಸುದ್ದಿ

ಹಣ್ಣುಗಳ ರಫ್ತು ಪ್ರಮಾಣ ಏರಿಕೆ

ನವದೆಹಲಿ (ಪಿಟಿಐ): ಕಳೆದ ಐದು ವರ್ಷಗಳಲ್ಲಿ ದೇಶದಿಂದ ಹಣ್ಣುಗಳ ರಫ್ತು ಪ್ರಮಾಣವು ಶೇ 47.5ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಯುಎಇ ಮತ್ತು ಆಸ್ಟ್ರೇಲಿಯಾದ ಜೊತೆಗೆ ಭಾರತ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದವು ಹಣ್ಣುಗಳ ರಫ್ತು ಪ್ರಮಾಣದ ಹೆಚ್ಚಳಕ್ಕೆ ನೆರವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾನದಂಡಕ್ಕೆ ಅನುಗುಣವಾಗಿ ಹಣ್ಣುಗಳ ಗುಣಮಟ್ಟ ಕಾಯ್ದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ದೇಶದಿಂದ ಪ್ರಮುಖವಾಗಿ ಮಾವು, ದ್ರಾಕ್ಷಿ, ಬಾಳೆಹಣ್ಣು, ಸೇಬು, ಅನಾನಸ್, ದಾಳಿಂಬೆ ಮತ್ತು ಕಲ್ಲಂಗಡಿಯನ್ನು ರಫ್ತು ಮಾಡಲಾಗುತ್ತದೆ.

ಐಸಿಐಸಿಐ ವಿಮಾ ಕಂಪನಿಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): 2023–24ನೇ ಮೌಲ್ಯಮಾಪನ ವರ್ಷದಲ್ಲಿನ ₹328 ಕೋಟಿ ತೆರಿಗೆ ಬಾಕಿಗೆ ಸಂಬಂಧಿಸಿದಂತೆ ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿಗೆ ಆದಾಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

ಮಹಾರಾಷ್ಟ್ರದ ಸಹಾಯಕ ತೆರಿಗೆ ಆಯುಕ್ತರು ಈ ನೋಟಿಸ್ ನೀಡಿದ್ದಾರೆ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಇತರೆ ಮೂಲಗಳಿಂದ ಮಧ್ಯಸ್ಥಗಾರರು ಗಳಿಸಿದ ಆದಾಯ, ಮಾರುಕಟ್ಟೆ ಮತ್ತು ಜಾಹೀರಾತು ವೆಚ್ಚಕ್ಕೆ ಸಂಬಂಧಿಸಿದ ಆದಾಯ ಕುರಿತು ನೋಟಿಸ್ ನೀಡಲಾಗಿದೆ. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಹೇಳಿದೆ.

ಭಾನುವಾರ, ಸೋಮವಾರವೂ ಎಲ್‌ಐಸಿ ಕಚೇರಿ ಕಾರ್ಯ ನಿರ್ವಹಣೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಶಾಖೆಗಳು ಭಾನುವಾರ ಮತ್ತು ಸೋಮವಾರ ಕೂಡ ಕಾರ್ಯ ನಿರ್ವಹಿಸಲಿವೆ.

2024–25ನೇ ಆರ್ಥಿಕ ವರ್ಷವು ಮಾರ್ಚ್ 31ಕ್ಕೆ ಮುಕ್ತಾಯವಾಗಲಿದೆ. ವಿಮಾದಾರರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಎಲ್ಲಾ ವಲಯ ಮತ್ತು ವಿಭಾಗಗಳ ವ್ಯಾಪ್ತಿಯ ಶಾಖೆಗಳು ಈ ಎರಡು ದಿನಗಳಂದು ಎಂದಿನಂತೆ ಕಾರ್ಯ ನಿರ್ವಹಿಸಲಿವೆ ಎಂದು ಎಲ್‌ಐಸಿ ತಿಳಿಸಿದೆ.

ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ಈ ಕುರಿತು ಮಾರ್ಗಸೂಚಿ ಹೊರಡಿಸಿದೆ. ಇದರ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಗೂಗಲ್‌ಗೆ ವಿಧಿಸಿದ್ದ ದಂಡ ಇಳಿಕೆ

ನವದೆಹಲಿ (ಪಿಟಿಐ): ಪ್ಲೇ ಸ್ಟೋರ್ ನೀತಿಗೆ ಸಂಬಂಧಿಸಿದ ನಿಯಮಾವಳಿ ಉಲ್ಲಂಘಿಸಿರುವ ಗೂಗಲ್ ಕಂಪನಿ ವಿರುದ್ಧ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ಕೈಗೊಂಡಿರುವ ಕ್ರಮವನ್ನು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಎತ್ತಿ ಹಿಡಿದಿದೆ.

ಆದರೆ, ಗೂಗಲ್‌ಗೆ ಸಿಸಿಐ ವಿಧಿಸಿದ್ದ ₹936.44 ಕೋಟಿ ದಂಡದ ಪ್ರಮಾಣವನ್ನು ₹216 ಕೋಟಿಗೆ ಇಳಿಕೆ ಮಾಡಿದೆ.

ಗೂಗಲ್ ಕಂಪನಿಯು ತನ್ನ ಪ್ರಬಲ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದೆ. ಜೊತೆಗೆ, ಕೆಲವು ನಿಯಮಾವಳಿಗಳನ್ನು ಗಾಳಿಗೆ ತೂರಿದೆ ಎಂದು ನ್ಯಾಯಮೂರ್ತಿ ಅಶೋಕ್ ಭೂಷಣ್ ಮತ್ತು ತಾಂತ್ರಿಕ ಸದಸ್ಯ ಬರುನ್ ಮಿತ್ರ ಅವರಿದ್ದ ವಿಭಾಗೀಯ ನ್ಯಾಯಪೀಠವು ಹೇಳಿದೆ.

ಈಗಾಗಲೇ, ಕಂಪನಿಯು ದಂಡದ ಮೊತ್ತ ಪೈಕಿ ಶೇ 10ರಷ್ಟನ್ನು ಠೇವಣಿ ಇಟ್ಟಿದೆ. ಉಳಿದ ಮೊತ್ತವನ್ನು 30 ದಿನದೊಳಗೆ ನ್ಯಾಯಪೀಠದಲ್ಲಿ ಠೇವಣಿ ಇಡಬೇಕಿದೆ ಎಂದು ಆದೇಶಿಸಿದೆ.

ಪ್ಲೇ ಸ್ಟೋರ್ ನೀತಿಗಳ ಉಲ್ಲಂಘನೆಗೆ ಸಂಬಂಧಿಸಿದಂತೆ 2022ರ ಅಕ್ಟೋಬರ್ 25ರಂದು ಭಾರತೀಯ ಸ್ಪರ್ಧಾತ್ಮಕ ಆಯೋಗವು, ಗೂಗಲ್‌ಗೆ ದಂಡ ವಿಧಿಸಿತ್ತು.

ಒಂದು ತೆಂಗಿನಕಾಯಿಗೆ ₹70 ದರ

ಪ್ರಜಾವಾಣಿ ವಾರ್ತೆ

ತುಮಕೂರು: ಕ್ವಿಂಟಲ್ ಕೊಬ್ಬರಿ ಧಾರಣೆಯು ₹19 ಸಾವಿರ ದಾಟಿದ ಬೆನ್ನಲ್ಲೇ ಯುಗಾದಿ ಹಬ್ಬದ ಸಮಯದಲ್ಲಿ ತೆಂಗಿನಕಾಯಿ ಬೆಲೆ ಸಹ ದುಬಾರಿಯಾಗಿದೆ.

ಇಲ್ಲಿನ ಸಗಟು ಮಾರುಕಟ್ಟೆಯಲ್ಲಿ ದಪ್ಪ ಗಾತ್ರದ ಒಂದು ತೆಂಗಿನಕಾಯಿ ₹65ರಿಂದ ₹70ರವರೆಗೂ ಮಾರಾಟವಾಗಿದೆ. ಇದು ಈವರೆಗಿನ ದಾಖಲೆ ಬೆಲೆ ಎನ್ನಲಾಗಿದೆ. ಮಧ್ಯಮ ಗಾತ್ರದ ತೆಂಗಿನಕಾಯಿ ₹50ರಿಂದ ₹60, ಸಣ್ಣ ಗಾತ್ರದ ಕಾಯಿ ₹25ರಿಂದ ₹40ರ ವರೆಗೆ ಮಾರಾಟವಾಗಿದೆ.

ಬೇಸಿಗೆ ಸಮಯದಲ್ಲಿ ಇಳುವರಿ ಗಣನೀಯವಾಗಿ ಕಡಿಮೆಯಾಗಿರುವುದು, ಮಾರುಕಟ್ಟೆಯಲ್ಲಿ ಬೇಡಿಕೆಯಷ್ಟು ಆವಕ ಇಲ್ಲದಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ ಎನ್ನುತ್ತಾರೆ ವರ್ತಕರು.

ಬೇಸಿಗೆ ಸಮಯದಲ್ಲಿ ಎಳನೀರಿಗೂ ಉತ್ತಮ ಬೆಲೆ ಸಿಗುತ್ತಿದೆ. ವರ್ತಕರು ತೋಟಕ್ಕೆ ಬಂದು ಒಂದು ಎಳನೀರಿಗೆ ₹40ರಂತೆ ಸಗಟು ಬೆಲೆಯಲ್ಲಿ ಖರೀದಿಸುತ್ತಿದ್ದಾರೆ. ಎಳನೀರು ಚಿಲ್ಲರೆ ಬೆಲೆ ₹60 ದಾಟಿದೆ.

ಸೇವಾ ರಫ್ತು, ಆಮದು ಇಳಿಕೆ

ಮುಂಬೈ (ಪಿಟಿಐ): ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ದೇಶದ ಸೇವಾ ವಲಯದ ರಫ್ತು ಮತ್ತು ಆಮದು ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಒಟ್ಟು ₹2.70 ಲಕ್ಷ ಕೋಟಿ ಮೌಲ್ಯದ ರಫ್ತು ಮಾಡಿದ್ದರೆ, ಆಮದು ಪ್ರಮಾಣ ಒಟ್ಟು ₹1.24 ಲಕ್ಷ ಕೋಟಿ ಆಗಿದೆ. ಜನವರಿಯಲ್ಲಿ ಒಟ್ಟು ₹2.97 ಲಕ್ಷ ಕೋಟಿ ಮೌಲ್ಯದ ರಫ್ತು ಮತ್ತು ₹1.42 ಲಕ್ಷ ಕೋಟಿ ಮೌಲ್ಯದ ಆಮದು ವಹಿವಾಟು ನಡೆದಿತ್ತು.

ಆದರೆ, ವಾರ್ಷಿಕ ಲೆಕ್ಕಾಚಾರದಲ್ಲಿ ಫೆಬ್ರುವರಿಯಲ್ಲಿ ರಫ್ತು ಪ್ರಮಾಣವು ಶೇ 11.6ರಷ್ಟು ಹಾಗೂ ಆಮದು ಪ್ರಮಾಣದಲ್ಲಿ ಶೇ 4.8ರಷ್ಟು ಹೆಚ್ಚಳವಾಗಿದೆ ಎಂದು ಮಾಹಿತಿ ತಿಳಿಸಿದೆ.

ಸಾಗರದಲ್ಲಿ ಗಣಿಗಾರಿಕೆ: ಅಮೆರಿಕದ ಅನುಮತಿಗೆ ಕೆನಡಾ ಕಂಪನಿ ಮೊರೆ

ಸೇನ್‌ಹಾನ್ (ಎಪಿ): ‘ಯಾವ ದೇಶದ ಜಲಗಡಿ ವ್ಯಾಪ್ತಿಗೂ ಒಳಪಡದ ಅಂತರರಾಷ್ಟ್ರೀಯ ಸಾಗರ ಜಲಪ್ರದೇಶದಲ್ಲಿ ಗಣಿಗಾರಿಕೆ ನಡೆಸುವ ಬಗ್ಗೆ ಅನುಮತಿ ನೀಡಿ ಎಂದು ನಾವು ಅಮೆರಿಕವನ್ನು ಕೋರಿದ್ದೇವೆ’ ಎಂದು ಕೆನಡಾದ ‘ದಿ ಮೆಟಲ್ಸ್ ಕಂಪನಿ’ಯು ಹೇಳಿಕೆ ಬಿಡುಗಡೆ ಮಾಡಿದೆ. ಈ ಬಗ್ಗೆ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಾಗರ ಪ್ರಾಧಿಕಾರವು (ಐಎಸ್‌ಎ) ಸಿಟ್ಟಿಗೆದ್ದಿದೆ.

ಅಂತರರಾಷ್ಟ್ರೀಯ ಸಮುದ್ರದಾಳವನ್ನು ರಕ್ಷಿಸುವ ಸಲುವಾಗಿ ಸಾಗರ ಪ್ರಾಧಿಕಾರವನ್ನು ವಿಶ್ವಸಂಸ್ಥೆಯು 1994ರಲ್ಲಿ ಸ್ಥಾಪಿಸಿತ್ತು. ಈ ಪ್ರಾಧಿಕಾರದ ಕೇಂದ್ರ ಕಚೇರಿಯು ಜಮೈಕಾದಲ್ಲಿದೆ. ಅಂತರರಾಷ್ಟ್ರೀಯ ಸಾಗರ ಜಲದಲ್ಲಿ ಗಣಿಗಾರಿಕೆ ನಡೆಸುವುದಕ್ಕೆ ಅನುಮತಿ ಕೇಳಿ ಕಂಪನಿಯು ಪ್ರಾಧಿಕಾರಕ್ಕೂ ಮನವಿ ಸಲ್ಲಿಸಿದೆ. ಇದೇ ವೇಳೆ ಅಮೆರಿಕ ಸರ್ಕಾರದ ಬಳಿಯೂ ಅನುಮತಿ ಕೇಳಿದೆ.

ಶುಕ್ರವಾರ ಅಂತರರಾಷ್ಟ್ರೀಯ ಸಾಗರ ಪ್ರಾಧಿಕಾರದ ಸದಸ್ಯರ ಸಭೆ ನಡೆದಿತ್ತು. ಗಣಿಗಾರಿಕೆ ನಡೆಸಲು ಕಂಪನಿಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಯಬೇಕಿತ್ತು. ಆದರೆ, ಇದಕ್ಕೂ ಮೊದಲೇ ‘ಕಂಪನಿಯು ಅಮೆರಿಕದೊಂದಿಗೆ ಚರ್ಚೆ ನಡೆಸುತ್ತಿದ್ದೇವೆ’ ಎಂಬ ಹೇಳಿಕೆ ಬಿಡುಗಡೆ ಮಾಡಿದೆ.

ಇದು ಪ್ರಾಧಿಕಾರದ ಸದಸ್ಯರನ್ನು ಕೆರಳಿಸಿದೆ. ‘ಇದು ಪ್ರಾಧಿಕಾರಕ್ಕೆ ಎಸಗುತ್ತಿರುವ ಅಪಮಾನ’ ಎಂದು ಸದಸ್ಯರು ಕಿಡಿಕಾರಿದ್ದಾರೆ. ಪ್ರಾಧಿಕಾರಕ್ಕೆ 165 ರಾಷ್ಟ್ರಗಳು ಅನುಮೋದನೆ ನೀಡಿವೆ.‘ಅಮೆರಿಕವು ಸಾಗರ ಪ್ರಾಧಿಕಾರದ ಸದಸ್ಯ ರಾಷ್ಟ್ರವಲ್ಲ. ಈ ಪ್ರಾಧಿಕಾರವನ್ನು ಅಮೆರಿಕ ಅನುಮೋದಿಸಿಲ್ಲ. ಸಮುದ್ರದಲ್ಲಿ ಗಣಿಗಾರಿಕೆ ಮಾಡಬಾರದು ಎಂಬ ನಿಯಮ ಅಮೆರಿಕದಲ್ಲಿ ಇಲ್ಲ. ಆದ್ದರಿಂದ ಅಮೆರಿಕವು ನಮಗೆ ಅನುಮತಿ ನೀಡಲಿದೆ’ ಎಂದು ಕಂಪನಿ ವಾದಿಸಿದೆ.

ಪ್ರಧಾನಿ ಮೋದಿ ಗುಣಗಾನ

ಭಾರತ ಜೊತೆಗಿನ ಸುಂಕ ಚರ್ಚೆ ಆಶಾದಾಯಕ: ಟ್ರಂಪ್

ವಾಷಿಂಗ್ಟನ್/ ಟೊರೊಂಟೊ (ಪಿಟಿಐ/ಎ.ಪಿ): ಪ್ರಧಾನಿ ನರೇಂದ್ರ ಮೋದಿ ‘ಅತಿ ಬುದ್ಧಿವಂತ’ ಮತ್ತು ‘ನನ್ನ ಆತ್ಮೀಯ ಸ್ನೇಹಿತ’ ಎಂದು ಹೇಳಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಸುಂಕದ ಪ್ರಮಾಣ ಕುರಿತ ಭಾರತದ ಜೊತೆಗಿನ ಚರ್ಚೆಯು ಆಶಾದಾಯಕವಾಗಿದೆ’ ಎಂದು ಹೇಳಿದ್ದಾರೆ.

ಅಮೆರಿಕದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳಿಗೆ ಭಾರತದಲ್ಲಿ ದೊಡ್ಡ ಪ್ರಮಾಣದ ಸುಂಕವನ್ನು ವಿಧಿಸಲಾಗುತ್ತಿದೆ ಎಂಬ ಟ್ರಂಪ್ ಅವರ ಪುನರಾವರ್ತಿತ ಟೀಕೆಗಳ ಹಿನ್ನೆಲೆಯಲ್ಲಿ ಈ ಹೇಳಿಕೆಯು ಮಹತ್ವ ಪಡೆದುಕೊಂಡಿದೆ.

‘ಪ್ರಧಾನಿ ಮೋದಿ ಇತ್ತೀಚೆಗಷ್ಟೇ ಇಲ್ಲಿಗೆ ಭೇಟಿ ನೀಡಿದ್ದರು. ನಾವು ಎಂದಿಗೂ ಉತ್ತಮ ಗೆಳೆಯರು’ ಎಂದು ಶುಕ್ರವಾರ ಶ್ವೇತ ಭವನದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಟ್ರಂಪ್ ಹೇಳಿದರು.

‘ಜಗತ್ತಿನಲ್ಲೇ ಹೆಚ್ಚು ಸುಂಕ ವಿಧಿಸುವ ದೇಶ ಭಾರತ. ಇದು ಕ್ರೂರತನ’ ಎಂದು ಈ ಹಿಂದೆ ಹೇಳಿದ್ದರು. ಅಮೆರಿಕ ಕೂಡ ಭಾರತದಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳಿಗೆ ಸರಿಸಮಾನವಾಗಿ ಸುಂಕ ವಿಧಿಸಲಿದ್ದು, ಏ.2ರಿಂದ ಇವು ಜಾರಿಗೆ ಬರಲಿವೆ ಎಂದಿದ್ದರು.

‘ಕೆನಡಾ ಪಿ.ಎಂ ಜೊತೆಗೆ ಚರ್ಚೆ’: ‘ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿ ಅವರು ದೂರವಾಣಿ ಕರೆ ಮಾಡಿದ್ದು, ಉತ್ತಮ ಚರ್ಚೆ ನಡೆಯಿತು. ಚರ್ಚೆ ಫಲಪ್ರದವಾಗಿತ್ತು’ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ಉಭಯ ದೇಶಗಳು ಖಾಸಗಿ ಮತ್ತು ಸಾರ್ವಜನಿಕ ಸಾರ್ವಭೌಮತ್ವವನ್ನು ಪರಸ್ಪರ ಗೌರವಿಸಲಿವೆ. ಇದೇ ವೇಳೆ ರಾಷ್ಟ್ರಗಳ ನಡುವಿನ ಬಾಂಧವ್ಯವೂ ಬದಲಾಗಿದೆ ಎಂದು ಅವರು ಹೇಳಿದರು.

ಕೆನಡಾವನ್ನು ಅಮೆರಿಕದ 51ನೇ ರಾಜ್ಯವಾಗಿಸುವ ಗುರಿ ಸಾಧಿಸಲು ಆರ್ಥಿಕ ನಿರ್ಬಂಧವನ್ನು ಹೇರುವ ಬೆದರಿಕೆ ಮಾತುಗಳ ಹಿಂದೆಯೇ ಈ ಹೇಳಿಕೆಯು ಹೊರಬಿದ್ದಿದೆ.

ಶೇಖ್ ಹಸೀನಾ ವಿರುದ್ಧ ಪ್ರಕರಣ

ಢಾಕಾ (ಪಿಟಿಐ): ಬಾಂಗ್ಲಾದೇಶ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರವನ್ನು ಉರುಳಿಸಲು ಸಂಚು ರೂಪಿಸಿದ ಆರೋಪದ ಮೇಲೆ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಹಾಗೂ 72 ಮಂದಿ ವಿರುದ್ಧ ಇಲ್ಲಿನ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಹಾಗೂ ಮಾಧ್ಯಮಗಳು ವರದಿ ಮಾಡಿವೆ.

‘ಅಸ್ತಿತ್ವದಲ್ಲಿರುವ ಸರ್ಕಾರ ಉರುಳಿಸಲು ಸಂಚು ರೂಪಿಸಿದ ಆರೋಪದ ಮೇಲೆ ಸಿಐಡಿ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಪ್ರಕರಣವನ್ನು ಸ್ವಯಂಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡ ಢಾಕಾ ಮೆಟ್ರೊ ಪಾಲಿಟಿನ್ ಮ್ಯಾಜಿಸ್ಟ್ರೇಟ್, ಈ ಕುರಿತು ತನಿಖೆ ನಡೆಸುವಂತೆ ಸಿಐಡಿಗೆ ಸೂಚನೆ ನೀಡಿದೆ.

2024ರ ಡಿ.19ರಂದು ‘ಜೈ ಬಾಂಗ್ಲಾ ಬ್ರಿಗೇಡ್’ ಹೆಸರಿನಲ್ಲಿ ಆನ್‌ಲೈನ್‌ನಲ್ಲಿ ಸಭೆ ಸೇರಿದ್ದವರು ಅಂತರ್ಯುದ್ಧದ ಮೂಲಕ ಹಸೀನಾ ಅವರ ಸರ್ಕಾರವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದ ಕುರಿತು ಧ್ವನಿಮುದ್ರಣ ಆಧರಿಸಿ ಸಿಐಡಿ ಪ್ರಕರಣ ದಾಖಲಿಸಿದೆ.

ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ನಡೆದ ಪ್ರತಿಭಟನೆ ವೇಳೆ ರಾಜಮನೆತನದ ಬೆಂಬಲಿಗರ ಗುಂಪಿನ ಸದಸ್ಯರು ಪೊಲೀಸ್ ಅಧಿಕಾರಿಗಳ ಮೇಲೆ ಕಲ್ಲು ತೂರಾಟ ನಡೆಸಿದರು ಎಪಿ/ಪಿಟಿಐ ಚಿತ್ರ

ಕಠ್ಮಂಡುವಿನಲ್ಲಿ ಕರ್ಫ್ಯೂ ತೆರವು

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ರಾಜಪ್ರಭುತ್ವವನ್ನು ಮರು ಸ್ಥಾಪಿಸಿ, ಹಿಂದೂ ರಾಷ್ಟ್ರವಾಗಿ ಘೋಷಿಸಬೇಕು ಎಂದು ಒತ್ತಾಯಿಸಿ ಕಠ್ಮಂಡುವಿನಲ್ಲಿ ಶುಕ್ರವಾರ ನಡೆದ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿದ ಕಾರಣ ಹೇರಲಾಗಿದ್ದ ಕರ್ಫ್ಯೂವನ್ನು ಇಲ್ಲಿನ ಸರ್ಕಾರ ಶನಿವಾರ ಹಿಂಪಡೆದಿದೆ.

ಪ್ರತಿಭಟನೆಗಿಳಿದ ರಾಜಪ್ರಭುತ್ವದ ಬೆಂಬಲಿಗರು, ರಾಜಧಾನಿ ಕಠ್ಮಂಡು ವ್ಯಾಪ್ತಿಯ ಟಿಂಕುಣೆ ಎಂಬಲ್ಲಿರುವ ಸರ್ಕಾರಿ ಕಚೇರಿಗಳ ಮೇಲೆ ಕಲ್ಲು ತೂರಾಟ ನಡೆಸಿದರು. ರಾಜಕೀಯ ಕಚೇರಿಗಳ ಮೇಲೆ ದಾಳಿ ನಡೆಸಿ, ಅಂಗಡಿಗಳನ್ನು ಲೂಟಿ ಮಾಡಿದರು. ಈ ಹಿಂಸಾಚಾರದಲ್ಲಿ 14 ಕಟ್ಟಡಗಳು, ಸರ್ಕಾರದ 9 ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು. 6 ಖಾಸಗಿ ವಾಹನಗಳನ್ನು ಧ್ವಂಸ ಮಾಡಲಾಗಿತ್ತು.

ಈ ಘಟನೆಯಲ್ಲಿ ಟಿ.ವಿ ಕ್ಯಾಮೆರಾಮನ್ ಸೇರಿದಂತೆ ಇಬ್ಬರು ಮೃತಪಟ್ಟಿದ್ದರು. 110 ಮಂದಿ ಗಾಯಗೊಂಡಿದ್ದರು. ಈ ಪೈಕಿ 53 ಪೊಲೀಸ್ ಸಿಬ್ಬಂದಿ, 22 ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ಹಾಗೂ 35 ಪ್ರತಿಭಟನಕಾರರಾಗಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಸೇನೆಯನ್ನು ನಿಯೋಜಿಸಲಾಯಿತು ಎಂದು ಅಧಿಕಾರಿಯೊಬ್ಬರು ಹೇಳಿದರು.

ಹಿಂಸಾಚಾರ ಕೃತ್ಯಗಳಲ್ಲಿ ಭಾಗಿಯಾದ 105 ಪ್ರತಿಭಟನಕಾರರನ್ನು ಬಂಧಿಸಲಾಗಿದೆ. ಗಲಭೆ ನಿಯಂತ್ರಣಕ್ಕೆ ಶುಕ್ರವಾರ ಸಂಜೆ 4.25ಕ್ಕೆ ಹೇರಲಾಗಿದ್ದ ಕರ್ಫ್ಯೂ ಅನ್ನು ಪರಿಸ್ಥಿತಿ ಸುಧಾರಿಸಿದ ಕಾರಣ ಶನಿವಾರ ಬೆಳಿಗ್ಗೆ 7 ಗಂಟೆಗೆ ತೆರವು ಮಾಡಲಾಗಿದೆ ಎಂದು ಕಠ್ಮಂಡು ಜಿಲ್ಲಾ ಆಡಳಿತದ ಕಚೇರಿ ತಿಳಿಸಿದೆ.

2008ರಲ್ಲಿ ನೇಪಾಳದ ರಾಜಕೀಯ ಪಕ್ಷಗಳು ಸಂಸದೀಯ ವ್ಯವಸ್ಥೆಯನ್ನು ಘೋಷಿಸಿಕೊಂಡವು. ಆ ಮೂಲಕ 240 ವರ್ಷದಷ್ಟು ಹಳೆಯ ರಾಜಮನೆತನದ ವ್ಯವಸ್ಥೆಯನ್ನು ಕೊನೆಗೊಳಿಸಲಾಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Bidadi

KHB ALLOTTED 30x50 site for sale KHB-L&C Siliconcity Hampapura before Bidadi Rs4500/Sft negotiable mob 9620847033

ಉದ್ಯೋಗಾವಕಾಶ

Cook

ಅನುಭವ ಮತ್ತು ಪರಿಣಿತಿ ಹೊಂದಿರುವ ಇಂಡಿಯನ್, ಚೈನೀಸ್ ಮತ್ತು ತಂದೂರಿ ಮಾಸ್ಟರ್ ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ ನೆಲಮಂಗಲ: 9845684631

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಸುಸಜ್ಜಿತವಾದ ಊಟ,ತಿಂಡಿ ವಸತಿಯೊಂದಿಗೆ 14.6.2025 ರಿಂದ ರೈಲಿನಲ್ಲಿ 8ದಿನಗಳ ಕಾಶಿಯಾತ್ರೆ. ಪ್ರಯಾಗ್`ರಾಜ್ ಅಯೋಧ್ಯ,ಕಾಶಿ,ಇತ್ಯಾದಿ. ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್.9741024122, 9740311411.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಾಚೀನ ಗಾಂಧಾರಿ ಯೋಗ ವಿದ್ಯೆ
7 ರಿಂದ 20 ವರ್ಷ ಒಳಗಿನ ಮಕ್ಕಳಿಗೆ ಮಾತ್ರ ತರಬೇತಿ. ಕೇವಲ 10 ದಿನಗಳು. ಈ ವಿದ್ಯೆ ಕಲಿತ ಮಕ್ಕಳು ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಪುಸ್ತಕ ಓದುತ್ತಾರೆ, ಬಣ್ಣಗಳನ್ನು ಗುರುತಿಸುತ್ತಾರೆ, ಸೈಕಲ್ ತುಳಿಯುತ್ತಾರೆ, ಬೈಕ್ ಓಡಿಸುತ್ತಾರೆ, ಡ್ರಾಯಿಂಗ್ ಮತ್ತು ಶಾಲೆ ಹೋಂವರ್ಕ್ ಮಾಡುತ್ತಾರೆ, ಬಚ್ಚಿಟ್ಟ ವಸ್ತು-ವ್ಯಕ್ತಿಗಳನ್ನು ಪತ್ತೆ ಮಾಡುತ್ತಾರೆ. ವ್ಯಕ್ತಿಯ ಮನಸ್ಸನ್ನು ಅಧ್ಯಯನ ಮಾಡುತ್ತಾರೆ. ಹೀಗೆ ಅನೇಕ ಇವೆ. ಈ ವಿದ್ಯೆ ಕಲಿತವರ ಚಮತ್ಕಾರಗಳು ನೋಡುಗರನ್ನು ಮೂಕವಿಸ್ಮಿತರಾಗಿಸಿದರೂ ನಿಜ. ಈ ತರಬೇತಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಯೋಗ, ಪ್ರಾಣಾಯಾಮ, ಧ್ಯಾನ ಮತ್ತು ಇತರೆ ಚಟುವಟಿಕೆಗಳ ಮೂಲಕ ಮಕ್ಕಳ ಬೌದ್ಧಿಕ, ಮಾನಸಿಕ ಮತ್ತು ಜ್ಞಾಪಕ ಶಕ್ತಿ ವೃದ್ಧಿಗೆ ಈ ತರಬೇತಿ.
ಊಟ ಮತ್ತು ವಸತಿಯುತ ಕಾರ್ಯಕ್ರಮ
ಆಶ್ರಮದಲ್ಲಿ ಮಾತ್ರ- No Branches
ತರಬೇತಿ ಆರಂಭದ ದಿನಾಂಕ:
05/04/2025 ರಿಂದ 14/04/2025
26/04/2025 ರಿಂದ 05/05/2025
17/05/2025 ರಿಂದ 26/05/2025
ಗಾಂಧಾರಿ ಯೋಗ ವಿದ್ಯೆಯ ಮಕ್ಕಳ ಪ್ರಾತ್ಯಕ್ಷಿಕೆಗಾಗಿ Ananda Yoga Pranayama Trust ನ ಯೂಟ್ಯೂಬ್ ವೀಕ್ಷಿಸಿ
ಪೂಜ್ಯ ಶ್ರೀ ಮಂಜುನಾಥ ಗುರೂಜಿ
ಆನಂದ ಯೋಗಾಶ್ರಮ (ರಿ.) ಜೋಗಿಸರದ ಹತ್ತಿರ, ಉಜ್ಜಿನ ರಸ್ತೆ, ಕೊಟ್ಟೂರು ವಿಜಯನಗರ ಜಿಲ್ಲೆ 583134
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಪೂಜ್ಯ ಶ್ರೀ ಮಂಜುನಾಥ ಗುರೂಜಿ 9900603013/9663921094

★ಶ್ರೇಯಸ್ ಟೂರ್ಸ್★ 06.04.2025,27.04.2025 18.05.2024 12/15/21ದಿನ ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025.25.04.2025 25.5.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್ 14.05.2025 12ದಿನಗಳು ಆದಿಕೈಲಾಸಓಂಪರ್ವತ್ ನೈನಿತಾಲ್,ಭೀಮ್‌ತಾಲ್ ಜಾಗೇಶ್ವರ,ಪಾತಾಳೇಶ್ವರ. 9743351212 9206979202

7 ದಿನಗಳ ಅಷ್ಟ ಜ್ಯೋತಿರ್ಲಿಂಗ. 14 ದಿನಗಳ ಚಾರ್‌ಧಾಮ. ಕಾಶಿ ಯಾತ್ರೆ. ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು: 9448294477

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯಾ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

7ದಿನಗಳ ಕಾಶಿ ಅಯೋಧ್ಯಾ ಗಯಾ,ಬುದ್ಧಗಯಾ. 13 ದಿನಗಳ ಚಾರ್ಧಾಮಯಾತ್ರೆ. 7 ದಿನಗಳ ಅಮರನಾಥ್. 10 ದಿನಗಳ ನೇಪಾಳ ಮುಕ್ತಿನಾಥ,ಅಯೋಧ್ಯಾ. ಸಂಪರ್ಕಿಸಿ: ನಂದಿ ಹಾಲಿಡೇಸ್ ಗಾಂಧಿಬಜಾರ್ ಬಸವನಗುಡಿ ಬೆಂಗಳೂರು-04. 9740228186 9980270467

ವ್ಯಾಪಾರ

Business to Business

Agriculture

ಜೆನಿತ್ ಬಯೋಟೆಕ್, ಅಂಗಾಂಶ ಕೃಷಿ ಕೇಂದ್ರ. ನಾವು ಉತ್ತಮ ಗುಣಮಟ್ಟದ G9 ಮತ್ತು ಏಲಕ್ಕಿ ಟಿಶ್ಯೂ ಕಲ್ಚರ್ ಬಾಳೆ ಸಸಿಗಳನ್ನು ಒದಗಿಸುತ್ತೇವೆ. ನಮ್ಮ ಸಸಿಗಳು ರೋಗಮುಕ್ತ, ಹೆಚ್ಚು ಫಲದಾಯಕ ಮತ್ತು ಉತ್ತಮ ಬೆಳವಣಿಗೆಗೆ ಸಾಕ್ಷಿಯಾಗುವಂತೆ ಬೆಳೆಸಲಾಗಿದೆ. ಸ್ಥಳ: ಬೆಂಗಳೂರು ಸಂಪರ್ಕ: 9448218343

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಯುಗಾದಿ
SALE
ಕೊನೆಯ 2 ದಿನಗಳು
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ*
UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ*
Upto 70% ಕಡಿತ*
ಫೈನಾನ್ಸ್ ಬೊನಾಂಜಾ
Upto 10,000 ಕ್ಯಾಶ್ ಬ್ಯಾಕ್*
HDFC BANK
10% CASH BACK ON CC & DC EMI* MIN SWIPE ₹20,000 MAX CASH BACK UPTO ₹3,000
LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER INDUCTION COOKER STEAM IRON KETTLE DRY IRON
ಏರ್ ಕಂಡಿಷನರ್ ಮೇಲೆ ಉಚಿತ ಇನ್‌ಸ್ಟಾಲೇಷನ್*
24H SERVICE
STORE LOCATOR
ನಮ್ಮ ಮಳಿಗೆಗಳು 9.30AM - 10.30PM ತೆರೆದಿರುತ್ತವೆ
DAIKIN 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,366
BLUE STAR 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,249
LG 1.5 TON 3 STAR SPLIT AIR CONDITIONER US-Q18ENXE UPTO 5% CASH BACK ಇ.ಎಮ್.ಐ ₹3,583
SAMSUNG 2.0TON 3 STAR SPLIT AIR CONDITIONER AR60F24D13W UPTO 5% CASH BACK ಇ.ಎಮ್.ಐ ₹7,749
Panasonic 1.0 TON 5 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹5,486
Haier 1.5 TON 3STAR SPLIT AIR CONDITIONER UPTO 5% CASH BACK ಇ.ಎಮ್.ಐ ₹2,994
VOLTAS 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹3,589
Godrej 2.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹4,839
HITACHI 1.0 TON 3 STAR SPLIT AIR CONDITIONER UPTO 5% CASH BACK ಇ.ಎಮ್.ಐ ₹4,611
ಉಚಿತ: ₹20000 ಮೌಲ್ಯದ FIREBOLTT SMART CALLING WATCH
WIDEST RANGE OF AIRCOOLERS UPTO 5% CASH BACK EMI STARTS FROM ₹1,333
Symphony KENSTAR BAJAJ
TOSHIBA 587 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ 10% CASH BACK ಇ.ಎಮ್.ಐ ₹4,293
LG 650 ಲೀ ಸೈಡ್ ಬೈ ಸೈಡ್ REFRIGERATOR WITH HYGIENE FRESH+ GL-B257DBM3 20% CASH BACK ಇ.ಎಮ್.ಐ ₹4,999
SAMSUNG 653 ಲೀ ಸೈಡ್ ಬೈ ಸೈಡ್ RS76CG8103S9HL 20% CASH BACK ಇ.ಎಮ್.ಐ ₹4,990
NEW ARRIVAL Haier 520 LITRES BLACK GLASS 4 DOOR SIDE BY SIDE WI-FI REFRIGERATOR 10% CASH BACK ಇ.ಎಮ್.ಐ ₹2,994
Whirlpool 260 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR 10% CASH BACK ಇ.ಎಮ್.ಐ ₹2,499
Panasonic 235 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR 10% CASH BACK ಇ.ಎಮ್.ಐ ₹2,166
ಉಚಿತ: ₹20000 ಮೌಲ್ಯದ FIREBOLTT SMART CALLING WATCH
LAPTOP 10% CASH BACK EMI STARTS FROM ₹2,749 ₹32,990 Onwards ಉಚಿತ: GIFTS UPTO ₹8990*
OPPO F27 5G 8+128 ₹2,000* CASH BACK SPECIAL PRICE ₹19,690* ಇ.ಎಮ್.ಐ ₹1,641 ಉಚಿತ:10,000 MAH POWER BANK WORTH ₹1499*
vivo V50 EFFECTIVE PRICE ₹30,400* (PRICE AFTER CASH BACK) ಇ.ಎಮ್.ಐ ₹1,590 ಉಚಿತ:SMART WATCH WORTH ₹8499*
realme 14X 5G 6 + 128 10% CASH BACK EFFECTIVE PRICE ₹13,490* (PRICE AFTER CASH BACK) ಇ.ಎಮ್.ಐ ₹1,208 ಉಚಿತ: BT NECKBAND WORTH ₹1499*
iPhone 16 / 16E EFFECTIVE PRICE ₹54,890* (PRICE AFTER CASH BACK) ONWARDS EMI STARTS FROM ₹3,272 ಉಚಿತ: MAGSAFE POWERBANK 10000 MAH WORTH ₹7499
SAMSUNG S25 10% CASH BACK EFFECTIVE PRICE ₹73,999* (PRICE AFTER CASH BACK) EMI STARTS FROM ₹3,375
Panasonic 43 4K ULTRA HD SMART ಎಲ್ಇಡಿ GOOGLE TV 10% CASH BACK ಇ.ಎಮ್.ಐ ₹5,186
Haier 55 4K SMART GOOGLE ಎಲ್ಇಡಿ 10% CASH BACK ಇ.ಎಮ್.ಐ ₹1,994
SONY 55 4K ULTRA HD SMART ಎಲ್ಇಡಿ GOOGLE TV K-55XR70 10% CASH BACK ಇ.ಎಮ್.ಐ ₹5,500
BOSCH 8 ಕೆಜಿ ಫ್ರಂಟ್ ಲೋಡಿಂಗ್ 10% CASH BACK ಇ.ಎಮ್.ಐ ₹3,299
IFB DISHWASHER 16 PLACE SETTING 5% CASH BACK ಇ.ಎಮ್.ಐ ₹4,741
LG 32 L SCAN-TO-COOK CHARCOAL MICROWAVE OVEN WITH HEALTHY HEART™, CHARCOAL LIGHTING HEATER, MOTORISED ROTISSERIE, BLACK MJEN326SFW 10% CASH BACK ಇ.ಎಮ್.ಐ ₹2,833
ಉಚಿತ: ₹20000 ಮೌಲ್ಯದ FIREBOLTT SMART CALLING WATCH
LG SOUNDBAR S40T 2.1 CH, 300W, AI SOUND PRO, DOLBY DIGITAL ಇ.ಎಮ್.ಐ ₹971 SPECIAL PRICE: ₹11,650 MRP: ₹26,990
CHIMNEY UPTO 54% OFF KAFF FABER HÄFELE Crompton Prestige BOSCH
ELECTRIC WATER HEATER UPTO 60% OFF Racold Haier HAVELLS BAJAJ V-GUARD KENSTAR
WATER PURIFIERS EMI STARTS FROM ₹1,000 EUREKA FORBES HAVELLS LG Livpure
VACCUM CLEANERS EMI STARTS FROM ₹875 EUREKA FORBES LG Panasonic dyson
MIXER GRINDER EMI STARTS FROM ₹1,167 Preethi Panasonic Butterfly HAVELLS BAJAJ BOSCH V-GUARD Prestige
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS HITACHI VOLTAS beko Butterfly Preethi ULTRA EUREKA FORBES pureit Livpure FABER KENSTAR BAJAJ Crompton MAHARAJA V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.10000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. *Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
171 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಚಿತ್ರಮಂದಿರಗಳ ಅಂಗಳದಲ್ಲಿ ಪ್ರೇಕ್ಷಕರ ಕಡಲು

ತ್ರಿವೇಣಿ ಕೆಂಪೇಗೌಡ ಸರ್ಕಲ್ DOLBY DIGITAL 7.1 4K DIGITAL SCRABBLE 4ಆಟ

ವೀರೇಶ್ ಸಿನಿಮಾಸ್ (4ಆಟ)

PVR·INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD

cinépolis: ETA | MEENAKSHI | ORION EAST | LULU | SHANTINIKETAN | SJR

GOPALAN CINEMAS: ARCH | INNOVATION | GRAND | SIGNATURE | LEGACY

ROCKLINE cinemas JALAHALLI

MIRAJ SUNKADAKATTE

CINEPHILE HSR LAYOUT

INNOVATIVE MULTIPLEX MARATHHALLI

KINO CINEMAS SEEGEHALLI

new FangLeD M.G.ROAD

MOVIETIME CINEMAS R.R.NAGAR

VAISHNAVI VAIBHAVI UTHARAHALLI

Balaji Cinemas : Multiplex CHIKKALASANDRA

V CINEMAS RAMMURTHYNAGAR

ಕಮಲಾನಗರ(5ಆಟ) ವೀರಭದ್ರೇಶ್ವರ
ರಾಜಾಜಿನಗರ(4ಆಟ) ನವರಂಗ್
ಸಂಜಯನಗರ(4ಆಟ) ವೈಭವ್
ಜೆ.ಪಿ.ನಗರ(4ಆಟ) ಸಿದ್ಧೇಶ್ವರ
ಕತ್ರಿಗುಪ್ಪೆ(4ಆಟ) ಕಾಮಾಕ್ಯ
ಕೆಂಗೇರಿ(4ಆಟ) ರಾಬಿನ್
ಆವಲಹಳ್ಳಿ(4ಆಟ) ವೆಂಕಟೇಶ್ವರ
ಸುಂಕದಕಟ್ಟೆ(4ಆಟ) ಮೋಹನ್
ಪೀಣ್ಯ(4ಆಟ) ಭಾರತಿ
ಗೌಡನಪಾಳ್ಯ(4ಆಟ) ಶ್ರೀನಿವಾಸ
ಗೊಲ್ಲರಹಟ್ಟಿ(4ಆಟ) ವೆಂಕಟೇಶ್ವರ
ಕೊಡಿಗೇಹಳ್ಳಿ(4ಆಟ) ರಾಜ್‌ಮುರಳಿ
ತುಮಕೂರು(4ಆಟ) ಗಾಯತ್ರಿ PVR·INOX
ದೊಡ್ಡಬಳ್ಳಾಪುರ(4ಆಟ) ರಾಜ್‌ಕಮಲ್
ರಾಮನಗರ(4ಆಟ) ಶಾನ್
ನೆಲಮಂಗಲ(4ಆಟ) ರೂಪ
ಕನಕಪುರ(4ಆಟ) ಗೋಪಾಲಕೃಷ್ಣ
ತಿಪಟೂರು(4ಆಟ) ಲಕ್ಷ್ಮಿ
ಚನ್ನಪಟ್ಟಣ(4ಆಟ) ಶಿವಾನಂದ

ಕುಣಿಗಲ್(4ಆಟ) ಪದ್ಮ
ಮಾಗಡಿ(4ಆಟ) ಬಾಲಾಜಿ
ಶಿರಾ(4ಆಟ) ಭಾಗ್ಯಲಕ್ಷ್ಮಿ
ಮೈಸೂರು(4ಆಟ) ವುಡ್‌ಲ್ಯಾಂಡ್ಸ್ PVR·INOX GARUDA | FORUM | SATYAM DRC CINEMAS VISION CINEMAS
ಮಂಡ್ಯ(4ಆಟ) ಗುರುಶ್ರೀ
ಹಾಸನ(4ಆಟ) ಎಸ್.ಬಿ.ಜಿ
ಚಾಮರಾಜನಗರ(4ಆಟ) ಸಿಂಹ
ಕೊಳ್ಳೇಗಾಲ(4ಆಟ) ಶಾಂತಿ
ಚನ್ನರಾಯಪಟ್ಟಣ(4ಆಟ) ಗಾಯತ್ರಿ
ಗುಂಡ್ಲುಪೇಟೆ(4ಆಟ) ಸೂರ್ಯ
ಕೆ.ಆರ್.ನಗರ(4ಆಟ) ಗೌರಿಶಂಕರ
ಕೆ.ಆರ್.ಪೇಟೆ(4ಆಟ) ಬಸವೇಶ್ವರ
ಹೊಳೆನರಸೀಪುರ(4ಆಟ) ಚೆನ್ನಾಂಬಿಕಾ
ಮದ್ದೂರು(4ಆಟ) ಸಂಜಯ
ಪಿರಿಯಾಪಟ್ಟಣ(4ಆಟ) ಶಾರದ
ಮಳವಳ್ಳಿ(4ಆಟ) ಮಹಾಲಕ್ಷ್ಮಿ
ಟಿ.ನರಸೀಪುರ(4ಆಟ) ವಿಜಯಭಗವಾನ್

ಅರಸೀಕೆರೆ(4ಆಟ) ರತ್ನ
ಚಿತ್ರದುರ್ಗ(4ಆಟ) ವೆಂಕಟೇಶ್ವರ
ದಾವಣಗೆರೆ(4ಆಟ) ತ್ರಿನೇತ್ರ MOVIETIME
ಬಳ್ಳಾರಿ(4ಆಟ) ನಟರಾಜಕಾಂಪ್ಲೆಕ್ಸ್ MOVIETIME
ಹೊಸಪೇಟೆ(4ಆಟ) ಲಕ್ಷ್ಮಿ
ಹಿರಿಯೂರು(4ಆಟ) ನಂಜುಂಡೇಶ್ವರ
ಶಿವಮೊಗ್ಗ(4ಆಟ) ಮಲ್ಲಿಕಾರ್ಜುನ Bharath Cinemas
ಚಿಕ್ಕಮಗಳೂರು(4ಆಟ) ನಾಗಲಕ್ಷ್ಮಿ
ಭದ್ರಾವತಿ(4ಆಟ) ಸತ್ಯ
ಕಡೂರು(4ಆಟ) ವಿಜಯಲಕ್ಷ್ಮಿ
ಹುಬ್ಬಳ್ಳಿ(4ಆಟ) LAXMI CITY PRIDE MULTIPLEX cinépolis
ಧಾರವಾಡ(4ಆಟ) ಪದ್ಮ PVR·INOX
ಬೆಳಗಾವಿ(4ಆಟ) ಪ್ರಕಾಶ್ PVR·INOX KAPEEL
ಗದಗ(4ಆಟ) ಕೃಷ್ಣ
ಬಿಜಾಪುರ(4ಆಟ) ಡ್ರೀಮ್‌ಲ್ಯಾಂಡ್
ರಾಣೆಬೆನ್ನೂರು ಶಿವಶಕ್ತಿ

ಹಾವೇರಿ(4ಆಟ) ಮಾಘಾವಿ
ಬಾಗಲಕೋಟೆ(4ಆಟ) ವಾಸವಿ
ಗೋಕಾಕ್(4ಆಟ) ಲಕ್ಷ್ಮಿ
ನಿಪ್ಪಾಣಿ MAGNUM CINEMAS
ಗುಲ್ಬರ್ಗ(4ಆಟ) ಸಂಗಮ್ PVR·INOX MIRAJ SHETTY'S MULTIPLEX
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ(4ಆಟ) ಶಿವೆ
ಕೊಪ್ಪಳ(4ಆಟ) ಲಕ್ಷ್ಮಿ
ಮಂಗಳೂರು PVR·INOX cinépolis Bharath Cinemas
ಉಡುಪಿ Bharath Cinemas
ಮಣಿಪಾಲ PVR·INOX Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

ಸಾಯಿ ಸುದರ್ಶನ್ ಅರ್ಧಶತಕ • ಪ್ರಸಿದ್ಧ ಕೃಷ್ಣ, ಸಿರಾಜ್ ಮಿಂಚು • ಮುಂಬೈಗೆ 2ನೇ ಸೋಲು

ಟೈಟನ್ಸ್‌ಗೆ ಮಣಿದ ಇಂಡಿಯನ್ಸ್

ಅಹಮದಾಬಾದ್ (ಪಿಟಿಐ): ಆರಂಭ ಆಟಗಾರ ಸಾಯಿ ಸುದರ್ಶನ್ (63, 41ಎ, 4x2, 6x2) ಅವರ ಅರ್ಧಶತಕದ ಬಳಿಕ ಕನ್ನಡಿಗ ಪ್ರಸಿದ್ಧ ಕೃಷ್ಣ (18ಕ್ಕೆ 2) ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಗುಜರಾತ್ ಟೈಟನ್ಸ್ ತಂಡವು ಐಪಿಎಲ್‌ನಲ್ಲಿ ಮೊದಲ ಜಯ ದಾಖಲಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟೈಟನ್ಸ್ 36 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು. ಐದು ಬಾರಿಯ ಚಾಂಪಿಯನ್ ಮುಂಬೈ ತಂಡಕ್ಕೆ ಇದು ಸತತ ಎರಡನೇ ಸೋಲು. ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 11 ರನ್‌ಗಳಿಂದ ಸೋತಿದ್ದ ಶುಭಮನ್ ಗಿಲ್ ಬಳಗ ಈ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ವಿಕೆಟ್ ಪಡೆದ ಪ್ರಸಿದ್ಧ ಕೃಷ್ಣ ಅವರನ್ನು ಅಭಿನಂದಿಸಿದ ಮೊಹಮ್ಮದ್ ಸಿರಾಜ್ ಮತ್ತು ನಾಯಕ ಶುಭಮನ್ ಗಿಲ್ —ಎಎಫ್‌ಪಿ ಚಿತ್ರ

ಸಾಯಿ ಸುದರ್ಶನ್

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗುಜರಾತ್ 8 ವಿಕೆಟ್‌ಗೆ 196 ರನ್‌ಗಳ ಸವಾಲಿನ ಮೊತ್ತ ಗಳಿಸಿತ್ತು. ಗುರಿಯನ್ನು ಬೆನ್ನತ್ತಿದ ಮುಂಬೈ ತಂಡವು 6 ವಿಕೆಟ್‌ಗೆ 160 ರನ್ ಗಳಿಸಿ ನಿರೀಕ್ಷಿತ ಮಟ್ಟದಲ್ಲಿ ಹೋರಾಟ ನಡೆಸಲಾಗದೆ ಸವಾಲನ್ನು ಮುಗಿಸಿತು.

ಮುಂಬೈ ತಂಡವು 35 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರರಾದ ರೋಹಿತ್ ಶರ್ಮಾ (8) ಮತ್ತು ರಯಾನ್ ರಿಕಲ್ಟನ್ (6) ಅವರಿಗೆ ಮೊಹಮ್ಮದ್ ಸಿರಾಜ್ ಪೆವಿಲಿಯನ್ ದಾರಿ ತೋರಿಸಿದರು. ತಿಲಕ್ ವರ್ಮಾ (39; 36ಎ, 4x3, 6x1) ಮತ್ತು ಸೂರ್ಯಕುಮಾರ್ ಯಾದವ್ (48; 28ಎ, 4x1, 6x4) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿ ಗೆಲುವಿನ ಆಸೆ ಚಿಗುರಿಸಿದರು. ಆದರೆ, ಇನಿಂಗ್ಸ್‌ನ ಮಧ್ಯಮ ಹಂತದಲ್ಲಿ ದಾಳಿಗಿಳಿದ ಪ್ರಸಿದ್ಧ ಕೃಷ್ಣ ಅವರು ಈ ಅಪಾಯಕಾರಿ ಬ್ಯಾಟರ್‌ಗಳ ವಿಕೆಟ್ ಪಡೆದು ಗುಜರಾತ್ ತಂಡಕ್ಕೆ ನಿರ್ಣಾಯಕ ಮೇಲುಗೈ ಒದಗಿಸಿದರು.

ನಂತರ ಬಂದ ಇಂಪ್ಯಾಕ್ಟ್ ಆಟಗಾರ ರಾಬಿನ್ ಮಿಂಜ್ (3), ನಾಯಕ ಹಾರ್ದಿಕ್ ಪಾಂಡ್ಯ (11) ನಿರಾಸೆ ಮೂಡಿಸಿದರು. ಕೊನೆಯಲ್ಲಿ ನಮನ್ ಧೀರ್ (ಔಟಾಗದೇ 18) ಮತ್ತು ಮಿಚೆಲ್ ಸ್ಯಾಂಟನರ್ (ಔಟಾಗದೇ 18) ಹೋರಾಟ ತೋರಿದರೂ ಗೆಲುವಿನ ಗುರಿ ತುಂಬಾ ದೂರವಿತ್ತು.

ಸಾಯಿ ಅರ್ಧಶತಕ: ಇದಕ್ಕೂ ಮೊದಲು ಟೈಟನ್ಸ್ ತಂಡಕ್ಕೆ ಆರಂಭಿಕ ಆಟಗಾರರಾದ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ (38;27ಎ, 4x4, 6x1) ಅವರು 8.2 ಓವರುಗಳಲ್ಲಿ 78 ರನ್ ಸೇರಿಸಿ ಉತ್ತಮ ಬುನಾದಿ ಹಾಕಿಕೊಟ್ಟರು. ಸುದರ್ಶನ್, ಗಿಲ್ ಮತ್ತು ಜೋಸ್ ಬಟ್ಲರ್ (39;24ಎ, 4x5, 6x1) ಅವರ ಬಿರುಸಿನ ಆಟದಿಂದ ಒಂದು ಹಂತದಲ್ಲಿ 14 ಓವರುಗಳಲ್ಲಿ 2 ವಿಕೆಟ್‌ಗೆ 129 ರನ್ ಗಳಿಸಿದ್ದ ಟೈಟನ್ಸ್ ನಾಗಾಲೋಟಕ್ಕೆ ಮುಂಬೈ ಬೌಲರ್‌ಗಳು ನಂತರದಲ್ಲಿ ಕಡಿವಾಣ ಹಾಕಿದರು.

ಕೊನೆಯ 13 ಎಸೆತಗಳ ಅಂತರದಲ್ಲಿ ಸಾಯಿ ಸುದರ್ಶನ್ ಅವರನ್ನೂ ಒಳಗೊಂಡಂತೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಅಂತರದಲ್ಲಿ ಬಂದಿದ್ದು 17 ರನ್‌ಗಳು ಮಾತ್ರ. ಕೊನೆಯಲ್ಲಿ ರುದರ್‌ಫೋರ್ಡ್ (18, 11ಎ, 6x2) ಅವರ ಆಟದಿಂದ ತಂಡ 200ರ ಸಮೀಪ ತಲುಪಿತು. ಪಾಂಡ್ಯ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರುಗಳಲ್ಲಿ 8 ವಿಕೆಟ್‌ಗೆ 196 (ಸಾಯಿ ಸುದರ್ಶನ್ 63, ಶುಭಮನ್ ಗಿಲ್ 38, ಜೋಸ್ ಬಟ್ಲರ್ 39; ಹಾರ್ದಿಕ್ ಪಾಂಡ್ಯ 29ಕ್ಕೆ2). **ಮುಂಬೈ ಇಂಡಿಯನ್ಸ್:** 20 ಓವರ್‌ಗಳಲ್ಲಿ 6ಕ್ಕೆ 160 (ತಿಲಕ್ ವರ್ಮಾ 39, ಸೂರ್ಯಕುಮಾರ್ ಯಾದವ್ 48; ಮೊಹಮ್ಮದ್ ಸಿರಾಜ್ 34ಕ್ಕೆ 2, ಪ್ರಸಿದ್ಧ ಕೃಷ್ಣ 18ಕ್ಕೆ 2). **ಫಲಿತಾಂಶ:** ಗುಜರಾತ್ ಟೈಟನ್ಸ್‌ಗೆ 36 ರನ್‌ಗಳ ಜಯ. ಪಂದ್ಯದ ಆಟಗಾರ: ಪ್ರಸಿದ್ಧ ಕೃಷ್ಣ

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಆರ್‌ಸಿಬಿ	2	2	0	4	2.266
2	ಎಲ್‌ಎಸ್‌ಜಿ	2	1	1	2	0.963
3	ಜಿಟಿ	2	1	1	2	0.625
4	ಪಿಬಿಕೆಎಸ್	1	1	0	2	0.550
5	ಡಿಸಿ	1	1	0	2	0.371
6	ಕೆಕೆಆರ್	2	1	1	2	-0.308
7	ಎಸ್‌ಆರ್‌ಎಚ್	2	1	1	2	-0.128
8	ಸಿಎಸ್‌ಕೆ	2	1	1	2	-1.013
9	ಎಂಐ	2	0	2	0	-1.163
10	ಆರ್‌ಆರ್	2	0	2	0	-1.882

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 145 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 7 ವಿಕೆಟ್

ಎರಡನೇ ಗೆಲುವಿನ ಮೇಲೆ ಡೆಲ್ಲಿ ಕಣ್ಣು

ಹೈದರಾಬಾದ್ ವಿರುದ್ಧ ತಂಡಕ್ಕೆ ಮರಳಲಿರುವ ರಾಹುಲ್

ವಿಶಾಖಪಟ್ಟಣ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಹೋರಾಡಿ ಪಡೆದ ಗೆಲುವಿನಿಂದ ಮನೋಬಲ ಹೆಚ್ಚಿಸಿಕೊಂಡಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ, ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಹೆಚ್ಚಿನ ವಿಶ್ವಾಸದಿಂದ ಎದುರಿಸಲಿದೆ.

ಭಾರತ ತಂಡದ ವಿಕೆಟ್ ಕೀಪರ್ –ಬ್ಯಾಟರ್ ಕೆ.ಎಲ್.ರಾಹುಲ್ ಅವರು ತಂಡಕ್ಕೆ ಮರಳುತ್ತಿರುವುದು ಕ್ಯಾಪಿಟಲ್ಸ್ ತಂಡದ ಉತ್ಸಾಹ ಹೆಚ್ಚಿಸಿದೆ.

ದೊಡ್ಡ ಮೊತ್ತ ಪೇರಿಸಿ ಭಾರಿ ಗೆಲುವಿನೊಡನೆ ಅಭಿಯಾನ ಆರಂಭಿಸಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸಂಭ್ರಮ ಗುರುವಾರ ಲಖನೌ ಎದುರಿನ ಸೋಲಿನಿಂದ ಕರಗಿಹೋಗಿದೆ. ಬೌಂಡರಿ, ಸಿಕ್ಸರ್‌ಗಳ ಮಳೆಗರೆಯುವ ಅದರ ಘಟಾನುಘಟಿ ಬ್ಯಾಟರ್‌ಗಳು ಆ ಪಂದ್ಯದಲ್ಲಿ ವಿಫಲರಾಗಿದ್ದರು. ಹೀಗಾಗಿ ತಂಡದಲ್ಲಿ ಸ್ಫೂರ್ತಿ ಮರಳಿಸಬೇಕಾದ ಸವಾಲು ನಾಯಕ ಪ್ಯಾಟ್ ಕಮಿನ್ಸ್ ಮೇಲಿದೆ.

ರಾಹುಲ್



ಕಮಿನ್ಸ್

ಸೋಮವಾರದ ಪಂದ್ಯ
ಮುಂಬೈ ಇಂಡಿಯನ್ಸ್ Vs ಕೋಲ್ಕತ್ತ ನೈಟ್ ರೈಡರ್ಸ್
ಪಂದ್ಯ ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್ ಸ್ಟಾರ್

ಮೊದಲ ಮಗುವಿಗೆ ತಂದೆಯಾಗುವ ಸಂಭ್ರಮದಲ್ಲಿ ಹಿಂದಿನ ಪಂದ್ಯ ತಪ್ಪಿಸಿಕೊಂಡಿದ್ದ ರಾಹುಲ್ ತಂಡಕ್ಕೆ ಮರಳಿದ್ದಾರೆ. ಮೆಗಾ ಹರಾಜಿನಲ್ಲಿ ₹14 ಕೋಟಿ ಮೊತ್ತಕ್ಕೆ ರಾಹುಲ್ ಡೆಲ್ಲಿ ಪಾಲಾಗಿದ್ದರು. ಈ ಹಿಂದಿನ ಋತುವಿನಲ್ಲಿ ಲಖನೌ ತಂಡ ಮುನ್ನಡೆಸಿದ್ದ ಅವರು ಇಲ್ಲಿ ಅಕ್ಷರ್ ಪಟೇಲ್ ನಾಯಕತ್ವದಡಿ ಆಡುತ್ತಿದ್ದಾರೆ.

ರಾಹುಲ್ ಉಪಸ್ಥಿತಿಯು ಡೆಲ್ಲಿ ಮಧ್ಯಮ ಕ್ರಮಾಂಕಕ್ಕೆ ಅಗತ್ಯವಾಗಿರುವ ಸ್ಥಿರತೆ ಒದಗಿಸಲಿದೆ. ಈ ಹಿಂದಿನ ಪಂದ್ಯದಲ್ಲಿ ಲಖನೌ ಎದುರು 211 ರನ್‌ಗಳ ಮೊತ್ತ ಬೆನ್ನಟ್ಟುವಾಗ ಡೆಲ್ಲಿ ಮಧ್ಯಮ ಕ್ರಮಾಂಕ ಕುಸಿದು ಒಂದು ಹಂತದಲ್ಲಿ 5 ವಿಕೆಟ್‌ಗೆ 65 ರನ್ ಗಳಿಸಿತ್ತು. ಆದರೆ ಅಶುತೋಷ್ ಅಜೇಯ ಆಟ ತಂಡವನ್ನು ಕಾಪಾಡಿತ್ತು.

ಬೌಲಿಂಗ್ ವಿಭಾಗದಲ್ಲಿ ಮಿಚೆಲ್ ಸ್ಟಾರ್ಕ್ ಪರಿಣಾಮಕಾರಿ ಎನಿಸಿದ್ದಾರೆ. ಅವರಿಗೆ ಅಕ್ಷರ್, ಕುಲದೀಪ್ ಯಾದವ್ ಬೆಂಬಲವಿದೆ. ಸ್ವದೇಶದ ಟ್ರಾವಿಸ್ ಹೆಡ್ ಜೊತೆಗಿನ ಸ್ಟಾರ್ಕ್ ಮುಖಾಮುಖಿ ಕುತೂಹಲಕರ.

ಸನ್‌ರೈಸರ್ಸ್ ತಂಡ ಇಶಾನ್ ಕಿಶನ್, ಹೆಡ್, ಅಭಿಷೇಕ್ ಶರ್ಮಾ ಅವರನ್ನು ನೆಚ್ಚಿಕೊಂಡಿದೆ. ಬೌಲಿಂಗ್ ವಿಭಾಗದ ಯಶಸ್ಸು ಪ್ಯಾಟ್ ಕಮಿನ್ಸ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್ ಅವರ ನಿರ್ವಹಣೆಯನ್ನು ಅವಲಂಬಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಸಿಎಸ್‌ಕೆಗೆ ಇಂದು ರಾಯಲ್ಸ್ ಪರೀಕ್ಷೆ

ಗುವಾಹಟಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕೈಲಿ ಅನುಭವಿಸಿರುವ ಮುಖಭಂಗದಿಂದ ಗೊಂದಲಕ್ಕೆ ಒಳಗಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಆಡಿದ ಎರಡೂ ಪಂದ್ಯ ಸೋತಿರುವ ರಾಯಲ್ಸ್ ಲೀಗ್‌ನಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿದೆ.

ಋತುರಾಜ್

ರಿಯಾನ್

ಶುಕ್ರವಾರದ ಪಂದ್ಯದಲ್ಲಿ ಆರ್‌ಸಿಬಿ ಗೆಲುವು, ಸಿಎಸ್‌ಕೆ ತಂಡದ ದೌರ್ಬಲ್ಯಗಳನ್ನು ತೆರೆದಿಟ್ಟಿದೆ. ಇವುಗಳನ್ನು ತಿದ್ದಿಕೊಂಡು ಮುನ್ನಡೆಯಲು ಋತುರಾಜ್ ಗಾಯಕವಾಡ ಪಡೆಗೆ ಈ ಸೋಲು ಎಚ್ಚರಿಕೆಯಾಗಿದೆ.

ಚೆಪಾಕ್‌ನಲ್ಲಿ ಸಾಮಾನ್ಯ ಸಂದರ್ಭಗಳಲ್ಲಿ ಸಿಎಸ್‌ಕೆ ತಂಡ ಮೊದಲು ಆಡಿ 165 ರಿಂದ 170 ರನ್ ಹೊಡೆದು ಈ ಮೊತ್ತವನ್ನು ರಕ್ಷಿಸಿಕೊಳ್ಳುತ್ತಿತ್ತು. ಮೊದಲು ಬೌಲಿಂಗ್ ಮಾಡಿದಲ್ಲಿ, ಎದುರಾಳಿಯನ್ನು 155 ರಿಂದ 160 ರನ್‌ಗಳಿಗೆ ಸೀಮಿತಗೊಳಿಸಿ ಆ ಮೊತ್ತ ಚೇಸ್ ಮಾಡುತಿತ್ತು. ಆದರೆ ಬೆಂಗಳೂರು ತಂಡ 175ಕ್ಕಿಂತ ಹೆಚ್ಚಿನ ಮೊತ್ತ ದಾಟಿ ಒತ್ತಡ ಹೇರಿದ್ದರಿಂದ ಚೆನ್ನೈ ತಂಡದ ಲೆಕ್ಕಾಚಾರ ಕೈಕೊಟ್ಟಿತು.

ಅನುಭವಿ ಧೋನಿ 9ನೇ ಕ್ರಮಾಂಕದಲ್ಲಿ ಆಡಲು ಇಳಿದಿದ್ದು ಅಚ್ಚರಿಗೆ ಕಾರಣವಾಯಿತು. ಸೋಲು ಖಚಿತವಾದಾಗ ಅವರ ಬೀಸಾಟ (ಅಜೇಯ 30, 16ಎ) ಆಡಿದ್ದರಿಂದ ತಂಡಕ್ಕೇನೂ ಉಪಯೋಗ ಆಗಲಿಲ್ಲ ಆದರೆ ಬರಸಪಾರಾ ಪಿಚ್ ಚೆಪಾಕ್‌ನ ರೀತಿ ವರ್ತಿಸುತ್ತಿರುವುದು ಚೆನ್ನೈ ತಂಡಕ್ಕೆ 'ತವರಿನಲ್ಲಿರುವ ಭಾವನೆ' ಮೂಡಿಸಬಹುದು. ರಾಯಲ್ಸ್ ತಂಡವು ರಿಯಾನ್ ಪರಾಗ್ ನಾಯಕತ್ವದಲ್ಲಿ ಸವಾಲು ಎದುರಿಸುತ್ತಿದ್ದಾರೆ. ತಂಡದಲ್ಲಿ ಜೋಸ್ ಬಟ್ಲರ್ ಅವರ ಜಾಗಕ್ಕೆ ಅಷ್ಟೇ ಯೋಗ್ಯ ವಿದೇಶಿ ಬ್ಯಾಟರ್ ಇಲ್ಲದಿರುವುದು ಕೊರತೆ. ಇಲ್ಲಿನ ಪಿಚ್‌ನ ನೆರವು ಪಡೆಯಬಲ್ಲ ಗುಣಮಟ್ಟದ ಸ್ಪಿನ್ನರ್ ಕೂಡ ಈ ತಂಡದಲ್ಲಿಲ್ಲ.

ಪಂದ್ಯ ಆರಂಭ: ರಾತ್ರಿ 7.30

ಐಎಸ್‌ಎಲ್: ಮುಂಬೈ ಸಿಟಿ ವಿರುದ್ಧ 5–0 ಗೋಲುಗಳ ಭರ್ಜರಿ ಗೆಲುವು

ಸೆಮಿಫೈನಲ್‌ಗೆ ಲಗ್ಗೆ ಹಾಕಿದ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತವರಿನ ಪ್ರೇಕ್ಷಕರ ಮುಂದೆ ಗೋಲುಗಳ ಮಳೆಗರೆದ ಬೆಂಗಳೂರು ಫುಟ್‌ಬಾಲ್ ಕ್ಲಬ್ ಆಟಗಾರರು ಇಂಡಿಯನ್ ಸೂಪರ್ ಲೀಗ್‌ನ ಪ್ಲೇ ಆಫ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಶನಿವಾರ 5-0ಯಿಂದ ಮಣಿಸಿ ಸೆಮಿಫೈನಲ್‌ಗೆ ಲಗ್ಗೆಹಾಕಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗವು ಸಾಂಘಿಕ ಆಟವನ್ನು ಪ್ರದರ್ಶಿಸಿ ಅಧಿಕಾರಯುತ ಗೆಲುವು ಸಾಧಿಸಿತು. ಎರಡು ಬಾರಿಯ ಚಾಂಪಿಯನ್ ಮುಂಬೈ ತಂಡವು ಲೀಗ್ ಹಂತದ ಕೊನೆಯ ಪಂದ್ಯದಲ್ಲಿ 2-0ಯಿಂದ ಇದೇ ಕ್ರೀಡಾಂಗಣದಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿ ಪ್ಲೇ ಆಫ್‌ಗೆ ಅರ್ಹತೆ ಗಿಟ್ಟಿಸಿತ್ತು. ಆ ಸೋಲಿಗೆ ಬಿಎಫ್‌ಸಿ ತಂಡವು ಮುಯ್ಯಿ ತೀರಿಸಿಕೊಂಡಂತಾಗಿದೆ.

ಆರಂಭದಿಂದಲೇ ಚುರುಕಿನ ಆಟವಾಡಿದ ಆತಿಥೇಯ ತಂಡಕ್ಕೆ 9ನೇ ನಿಮಿಷದಲ್ಲಿ ಸುರೇಶ್ ಸಿಂಗ್ ವಾಂಗ್ಜಮ್ ಮುನ್ನಡೆ ಒದಗಿಸಿದರು. 42ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಎಡ್ಗರ್ ಮೆಂಡೇಜ್, ಬಿಎಫ್‌ಸಿ ತಂಡದ ಮುನ್ನಡೆಯನ್ನು 2-0ಗೆ ಹಿಗ್ಗಿಸಿದರು.

ಗೋಲು ದಾಖಲಿಸಿದ ಸುರೇಶ್ ಸಿಂಗ್ ವಾಂಗ್ಜಮ್ ಅವರನ್ನು ಅಭಿನಂದಿಸಿದ ಬೆಂಗಳೂರು ಎಫ್‌ಸಿ ತಂಡದ ಸಹ ಆಟಗಾರರು ಚಿತ್ರ: ಎಸ್‌.ಕೆ.ದಿನೇಶ್

ಉತ್ತರಾರ್ಧದಲ್ಲೂ ಪಾರಮ್ಯ ಮೆರೆದ ಬೆಂಗಳೂರು ಆಟಗಾರರು ಎದುರಾಳಿ ತಂಡದ ರಕ್ಷಣಾ ವ್ಯೂಹವನ್ನು ಭೇದಿಸಿ ಪಂದ್ಯದ ಮೇಲೆ ಮತ್ತಷ್ಟು ಹಿಡಿತ ಸಾಧಿಸಿದರು. 62ನೇ ನಿಮಿಷದಲ್ಲಿ ರೈಯಾನ್ ವಿಲಿಯಮ್ಸ್, 76ನೇ ನಿಮಿಷದಲ್ಲಿ ನಾಯಕ ಸುನಿಲ್ ಚೆಟ್ರಿ ಮತ್ತು 83ನೇ ನಿಮಿಷದಲ್ಲಿ ಜಾರ್ಜ್ ಪೆರೇರಾ ಡಯಾಜ್ ಅವರು ಚೆಂಡನ್ನು ಗುರಿ ಸೇರಿಸಿ ತಂಡದ ಗೆಲುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿದರು. ಮುಂಬೈ ತಂಡಕ್ಕೆ ಯಾವುದೇ ಹಂತದಲ್ಲಿ ಚೇತರಿಸಿಕೊಳ್ಳಲು ಆತಿಥೇಯ ತಂಡ ಅವಕಾಶ ನೀಡಲಿಲ್ಲ. ಮುಂಬೈನ ಮೂವರಿಗೆ ಮತ್ತು ಬಿಎಫ್‌ಸಿಯ ಇಬ್ಬರಿಗೆ ಹಳದಿ ಕಾರ್ಡ್‌ನ ದರ್ಶನವಾಯಿತು.

2018–19ರ ಚಾಂಪಿಯನ್ ಬಿಎಫ್‌ಸಿ ತಂಡವು ಸೆಮಿಫೈನಲ್ ಲೆಗ್‌ನ ಎರಡು ಪಂದ್ಯಗಳಲ್ಲಿ (ಏ.2 ಮತ್ತು ಏ.6ರಂದು) ಗೋವಾ ಎಫ್‌ಸಿ ತಂಡದೊಂದಿಗೆ ಸೆಣಸಲಿದೆ. ಉಭಯ ತಂಡಗಳ ತವರಿನಲ್ಲಿ ತಲಾ ಒಂದೊಂದು ಪಂದ್ಯಗಳು ನಿಗದಿಯಾಗಿವೆ. ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಮತ್ತು ಗೋವಾ ಎಫ್‌ಸಿ ತಂಡಗಳು ಲೀಗ್ ಹಂತದಲ್ಲಿ ಮೊದಲೆರಡು ಸ್ಥಾನ ಪಡೆದು ಸೆಮಿಫೈನಲ್‌ಗೆ ನೇರಪ್ರವೇಶ ಪಡೆದಿವೆ.

ಇನ್ನೊಂದು ಪ್ಲೇ ಆಫ್ ಇಂದು: ಮತ್ತೊಂದು ಪ್ಲೇ ಆಫ್ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಮತ್ತು ಜೆಮ್‌ಶೆಡ್‌ಪುರ ತಂಡಗಳು ಭಾನುವಾರ ಮುಖಾಮುಖಿಯಾಗಲಿವೆ. ಗೆದ್ದ ತಂಡವು ಸೆಮಿಫೈನಲ್ ಲೆಗ್‌ನಲ್ಲಿ ಮೋಹನ್ ಬಾಗನ್ ತಂಡವನ್ನು ಎದುರಿಸಲಿದೆ.

ಕೋಚ್ ಕೈಬಿಟ್ಟ ಬ್ರೆಜಿಲ್ ತಂಡ

ಸಾವೊ ಪೌಲೊ (ಎಪಿ): ಕೆಲವು ಪಂದ್ಯಗಳಲ್ಲಿ ಬ್ರೆಜಿಲ್ ಫುಟ್‌ಬಾಲ್ ತಂಡದ ನಿರಾಶಾದಾಯಕ ಫಲಿತಾಂಶಗಳ ಬೆನ್ನಲ್ಲೇ ಡೊರಿವಲ್ ಜೂನಿಯರ್ ಅವರನ್ನು ಕೋಚ್ ಸ್ಥಾನದಿಂದ ಶುಕ್ರವಾರ ಕಿತ್ತುಹಾಕಲಾಗಿದೆ.

ಎರಡು ದಿನಗಳ ಹಿಂದೆ ನಡೆದ ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ 4–1 ರಿಂದ ಸೋಲನುಭವಿಸಿತ್ತು. ಡೊರಿವಲ್ 14 ತಿಂಗಳಿಂದ ಕೋಚ್ ಆಗಿದ್ದರು.

ಕೊಡವ ಹಾಕಿ: ಪುಲಿಯಂಡ ಶುಭಾರಂಭ

ಮಡಿಕೇರಿ: ಪುಲಿಯಂಡ ತಂಡವು ಶನಿವಾರ ಇಲ್ಲಿ ಆರಂಭವಾದ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ 25ನೇ ಆವೃತ್ತಿ 'ಮುದ್ದಂಡ ಕಪ್' ಪಂದ್ಯದಲ್ಲಿ 5–0 ಗೋಲುಗಳಿಂದ ಬೊಳ್ಳೇರಪಂಡ ತಂಡವನ್ನು ಮಣಿಸಿ ಶುಭಾರಂಭ ಮಾಡಿತು. ಉದ್ದಿನಾಡಂಡ ತಂಡವು 5–1ರಿಂದ ಸರ್ಕಂಡ ತಂಡವನ್ನು ಸೋಲಿಸಿತು.

ಉಳಿದ ಪಂದ್ಯಗಳಲ್ಲಿ ಗಾಂಡಂಗಡ ತಂಡವು 3–0ಯಿಂದ ಬೊಳ್ಳಚೆಟ್ಟಿರ ತಂಡದ ವಿರುದ್ಧ; ಬೇರೇರಾ 2–0ಯಿಂದ ಬೊಳ್ಳಿಮಾಡ ವಿರುದ್ಧ; ಕುಂಡ್ಯೋಳಂಡ 4–0ಯಿಂದ ಗುಡ್ಡಂಡ ವಿರುದ್ಧ; ಮುಕ್ಕಾಟಿರ 4–0ಯಿಂದ ಚೆಟ್ಟಿರ ವಿರುದ್ಧ; ಕಾಂಗೀರ 2–0ಯಿಂದ ಪಾಲಚಂಡ ವಿರುದ್ಧ; ಮಾಚಂಗಡ 3–1ರಿಂದ ಹಂಚೆಟ್ಟಿರ ವಿರುದ್ಧ; ಓಡಿಯಂಡ 4–0ಯಿಂದ ಮೋರ್ಕಂಡ ವಿರುದ್ಧ; ಮೂಕಚಂಡ 2–0ಯಿಂದ ಚೋಕಂಡ ವಿರುದ್ಧ; ಚೆಯ್ಯಂಡಿರ 3–1ರಿಂದ ತಾಣಚ್ಚಿರ ತಂಡದ ವಿರುದ್ಧ ಗೆಲುವು ಸಾಧಿಸಿದವು. ಕನ್ನಿಕಂಡ 5–0ಯಿಂದ ತಡಿಯಂಗಡ ಎದುರು; ಕಳ್ಳೀರ 4–0ಯಿಂದ ಬೊಪ್ಪಡ್ತಂಡ ಎದುರು; ಮೂಡೇರಾ 4–0ಯಿಂದ ತಾತಪಂಡ ಎದುರು; ಕುಮ್ಮಂಡ 3–0ಯೊಂದ ನಂಬ್ಯಪಂಡ ಎದುರು ಗೆದ್ದವು.

ಚಾಪ್ಮನ್ ಶತಕ: ಕಿವೀಸ್‌ಗೆ ಜಯ

ನೇಪಿಯರ್ (ಎಎಫ್‌ಪಿ): ಮಾರ್ಕ್ ಚಾಪ್ಮನ್ ಅವರ ಜೀವನ ಶ್ರೇಷ್ಠ ಶತಕದ ನೆರವಿನಿಂದ (132, 111ಎ, 4x13, 6x6) ನ್ಯೂಜಿಲೆಂಡ್ ತಂಡ ಶನಿವಾರ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ 73 ರನ್‌ಗಳ ಸುಲಭ ಗೆಲುವನ್ನು ಪಡೆಯಿತು.

ಪಾಕಿಸ್ತಾನದಲ್ಲಿ ಜನಿಸಿದ್ದ ನ್ಯೂಜಿಲೆಂಡ್ ಆಟಗಾರ ಮುಹಮ್ಮದ್ ಅಬ್ಬಾಸ್ (52, 26ಎ, 4x3, 6x3) ಅವರು ಪದಾರ್ಪಣೆ ಪಂದ್ಯದಲ್ಲೇ ವೇಗದ (24 ಎಸೆತಗಳಲ್ಲಿ) ಅರ್ಧ ಶತಕ ಗಳಿಸಿದರು. ಈ ಹಿಂದಿನ ದಾಖಲೆ ಕೃಣಾಲ್ ಪಾಂಡ್ಯ (26 ಎಸೆತ, 2021ರ ಮಾರ್ಚ್, ಪುಣೆ) ಹೆಸರಿನಲ್ಲಿತ್ತು.

ಮಾರ್ಕ್ ಚಾಪ್ಮನ್ ಎಎಫ್‌ಪಿ ಚಿತ್ರ

ಸ್ಕೋರುಗಳು: ನ್ಯೂಜಿಲೆಂಡ್: 50 ಓವರುಗಳಲ್ಲಿ 9 ವಿಕೆಟ್‌ಗೆ 344 (ಮಾರ್ಕ್ ಚಾಪ್ಮನ್ 132, ಡೇರಿಲ್ ಮಿಚೆಲ್ 76, ಮುಹಮ್ಮದ್ ಅಬ್ಬಾಸ್ 52; ಅಕಿಫ್ ಜಾವೆದ್ 55ಕ್ಕೆ2, ಹ್ಯಾರಿಸ್ ರವೂಫ್ 38ಕ್ಕೆ2, ಇರ್ಫಾನ್ ಖಾನ್ 51ಕ್ಕೆ3); **ಪಾಕಿಸ್ತಾನ:** 44.1 ಓವರುಗಳಲ್ಲಿ 271 (ಅಬ್ದುಲ್ಲಾ ಶಫೀಕ್ 36, ಉಸ್ಮಾನ್ ಖಾನ್ 39, ಬಾಬರ್ ಆಜಂ 78, ಮೊಹಮ್ಮದ್ ರಿಜ್ವಾನ್ 30, ಸಲ್ಮಾನ್ ಆಘಾ 58; ಜಾಕೊಬ್ 57ಕ್ಕೆ2, ನೇಥನ್ ಸ್ಮಿತ್ 60ಕ್ಕೆ4). ಪಂದ್ಯದ ಆಟಗಾರ: ಮಾರ್ಕ್ ಚಾಪ್ಮನ್.

ಏಷ್ಯನ್ ಕುಸ್ತಿ: ಫ್ರೀಸ್ಟೈಲ್‌ನಲ್ಲಿ ನಿರಾಸೆ

ಅಮ್ಮಾನ್ (ಪಿಟಿಐ): ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಫ್ರೀಸ್ಟೈಲ್ ಸ್ಪರ್ಧೆ ಆರಂಭವಾಗಿದ್ದು, ಮೊದಲ ದಿನ ಭಾರತದ ಐದು ಪೈಲ್ವಾನರು ನಿರಾಸೆ ಮೂಡಿಸಿದರು.

ಸುಜಿತ್ ಕಲ್ಕಲ್ 65 ಕೆ.ಜಿ ವಿಭಾಗದಲ್ಲಿ ಮೊದಲ ಸುತ್ತಿನಲ್ಲಿ ಪ್ಯಾಲೆಸ್ಟೈನ್‌ನ ಅಬ್ದುಲ್ಲಾ ಅಸ್ಸಾಫ್ ಅವರನ್ನು ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು. ಆದರೆ, ಅಲ್ಲಿ ಜಪಾನಿನ ಕೈಸೆಯ್ ತನಬೆ ವಿರುದ್ಧ ಮುಗ್ಗರಿಸಿದರು.

ಜಪಾನ್‌ನ ಕುಸ್ತಿಪಟು ಪ್ರಶಸ್ತಿ ಸುತ್ತು ತಲುಪಿದ್ದರಿಂದ ಸುಜಿತ್ ಅವರಿಗೆ ರೆಪೆಷಾಜ್ ಅವಕಾಶ ದೊರೆಯಿತು. ಆದರೆ, ಭಾರತದ ಪೈಲ್ವಾನ್ ಗಾಯಾಳಾದ ಕಾರಣ ಸ್ಪರ್ಧೆಯಿಂದ ದೂರ ಉಳಿದರು.

65 ಕೆ.ಜಿ ವಿಭಾಗದಲ್ಲಿ ಭಾರತದ ಮತ್ತೊಬ್ಬ ಸ್ಪರ್ಧಿ ವಿಶಾಲ್ ಕಲಿರಾಮನ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ವಿಶಾಲ್ 0–8ರಿಂದ 2022ರ ಏಷ್ಯನ್ ಗೇಮ್ಸ್ ಚಾಂಪಿಯನ್ ಮಂಗೋಲಿಯದ ತುಲ್ಗಾ ತುಮುರ್ ಓಚಿರ್ ಅವರಿಗೆ ಸೋತರು.

57 ಕೆ.ಜಿ ವಿಭಾಗದಲ್ಲಿ ಚಿರಾಗ್ ಕೂಡಾ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು. ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಅಲ್ಮಾಜ್ ಸ್ಮಾನ್‌ಬೆಕೋವ್ (ಕಜಕಿಸ್ತಾನ) ವಿರುದ್ಧ ಸೋತರು. ಚಂದ್ರಮೋಹನ್ 79 ಕೆ.ಜಿ ವಿಭಾಗದಲ್ಲಿ ತಜಕಿಸ್ತಾನದ ಮ್ಯಾಗೊ ಮೆಟ್ ಎವ್ಲೋವ್ ವಿರುದ್ಧ ಸೋಲು ಅನುಭವಿಸಿದರು.

ಭಾರತ ಈತನಕ ಒಟ್ಟು 8 ಪದಕಗಳನ್ನು ಗೆದ್ದಿದೆ. ಗ್ರೀಕೊ ರೋಮನ್ ವಿಭಾಗದಲ್ಲಿ ಎರಡು ಕಂಚು, ಮಹಿಳೆಯರ ವಿಭಾಗದಲ್ಲಿ ಒಂದು ಚಿನ್ನ, ಒಂಚು ಬೆಳ್ಳಿ ಸೇರಿ ಆರು ಪದಕಗಳು ದೊರಕಿವೆ.

ಸಂಕ್ಷಿಪ್ತ ಸುದ್ದಿ

100ನೇ ಪ್ರಶಸ್ತಿಯತ್ತ ನೊವಾಕ್ ಜೊಕೊವಿಚ್

ಮಿಯಾಮಿ ಗಾರ್ಡನ್ಸ್ (ಎಎಫ್‌ಪಿ): ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಅವರು ವೃತ್ತಿಜೀವನದ 100ನೇ ಕಿರೀಟದ ಹೊಸ್ತಿಲಲ್ಲಿದ್ದಾರೆ.

ದಾಖಲೆಯ 24 ಗ್ರ್ಯಾನ್‌ಸ್ಲಾಮ್ ಸೇರಿದಂತೆ 99 ಪ್ರಶಸ್ತಿಗಳಿಗೆ ಒಡೆಯನಾಗಿರುವ 37 ವರ್ಷ ವಯಸ್ಸಿನ ಜೊಕೊವಿಚ್, ಮಿಯಾಮಿ ಓಪನ್‌ನಲ್ಲಿ ಫೈನಲ್ ಪ್ರವೇಶಿಸಿದ್ದಾರೆ. ಈ ಮೂಲಕ ಎಟಿಪಿ ಮಾಸ್ಟರ್ಸ್ 1000 ಫೈನಲ್ ತಲುಪಿದ ಅತ್ಯಂತ ಹಿರಿಯ ವಯಸ್ಸಿನ ಆಟಗಾರ ಎಂಬ ಹಿರಿಮೆಗೂ ಪಾತ್ರವಾಗಿದ್ದಾರೆ. ಜೊಕೊವಿಚ್ ಶನಿವಾರ ಸೆಮಿಫೈನಲ್ ನಲ್ಲಿ 6-2, 6-3ರಿಂದ ಗ್ರಿಗರ್ ಡಿಮಿಟ್ರೋವ್ (ಬಲ್ಗೇರಿಯಾ) ಅವರನ್ನು ಸೋಲಿಸಿದರು. ಪ್ರಶಸ್ತಿ ಸುತ್ತಿನಲ್ಲಿ ಅವರಿಗೆ ಜೆಕ್ ರಿಪಬ್ಲಿಕ್‌ನ ಜಾಕುಬ್ ಮೆನ್ಸಿಕ್ ಎದುರಾಳಿಯಾಗಿದ್ದಾರೆ.

ಎಐಎಫ್‌ಎಫ್ ನಿಯಮಾವಳಿ: ಬದಲಾವಣೆ?

ನವದೆಹಲಿ (ಪಿಟಿಐ): ಕನಿಷ್ಠ ಐವರು ಮಾಜಿ ರಾಷ್ಟ್ರೀಯ ಆಟಗಾರರಿಗೆ 14 ಮಂದಿಯ ಕಾರ್ಯಕಾರಿ ಮಂಡಳಿಯಲ್ಲಿ ಸ್ಥಾನ ನೀಡುವುದು, ಪದಾಧಿಕಾರಿಗಳನ್ನು ಅವಿಶ್ವಾಸ ನಿರ್ಣಯದ ಮೂಲಕ ಉಚ್ಚಾಟಿಸುವುದು ಸೇರಿದಂತೆ ಹಲವು ಕ್ರಾಂತಿಕಾರಿ ಬದಲಾವಣೆಗಳನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಉದ್ದೇಶಿತ ಕರಡು ನಿಯಮಾವಳಿಗಳಲ್ಲಿ ಪ್ರಸ್ತಾವಿಸಲಾಗಿದೆ.

ಈ ಕರಡು ನಿಯಮಾವಳಗಳನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಸಿದ್ಧಪಡಿಸಿದ್ದಾರೆ. ಪಿ.ಎಸ್.ನರಸಿಂಹ ಮತ್ತು ಜೊಯ್ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ಪೀಠವು ಎಐಎಫ್‌ಎಫ್ ನಿಯಮಾವಳಿಗಳನ್ನು ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಮಾರ್ಚ್ 25ರಂದು ಆರಂಭಿಸಿದೆ.

ಫುಟ್‌ಬಾಲ್: ದಿ ಸ್ಪೋರ್ಟ್ಸ್ ಸ್ಕೂಲ್‌ಗೆ ಭರ್ಜರಿ ಜಯ

ಬೆಂಗಳೂರು: ದಿ ಸ್ಪೋರ್ಟ್ಸ್ ಸ್ಕೂಲ್ ಎಫ್‌ಎ ತಂಡ ಯೂತ್ ಪ್ರೀಮಿಯರ್ ಲೀಗ್ 17 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 4–1 ಗೋಲುಗಳಿಂದ ಎಫ್‌ಸಿ ಮಂಗಳೂರು ತಂಡವನ್ನು ಶನಿವಾರ ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಿ ಸ್ಪೋರ್ಟ್ಸ್ ಸ್ಕೂಲ್ ತಂಡದ ಅರ್ನವ್ ಅಸ್ತ್ ಮೆಶ್‌ರಾಮ್ (10ನೇ, 45ನೇ ನಿ.), ಅರ್ನವ್ ರಾಘವನ್ (64 ನೇ ನಿ.), ದಕ್ಷ್ ಸಂಜಯ್ ಮಾನೆ (76ನೇ ನಿ.) ಗೋಲು ಗಳಿಸಿದರು. ಮಂಗಳೂರು ತಂಡದ ಪರ ರಾಯಿಫ್ ಮೊಹಮದ್ ರಹಮತ್‌ಹುಲ್ಲಾ (15ನೇ ನಿ.) ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಆಲ್ಕೆಮಿ ಐಎಫ್‌ಎ–ಐಜಿಎನ್‌ಐಎಸ್ ತಂಡ 7–1 ಗೋಲುಗಳಿಂದ ಬಿಬಿಎಫ್‌ಎಸ್ ಬೆಂಗಳೂರು ವಿರುದ್ಧ ಜಯ ಸಾಧಿಸಿತು. ಆಲ್ಕೆಮಿ ತಂಡದ ಪರ ಸಾಗೊಲೆಸೆಮ್ ಅನೀಶ್ ಸಿಂಗ್ (5ನೇ, 81ನೇ ನಿ.), ಅಕ್ಷಯ್ ಕುಮಾರ್ ವಿ. ಸಿನ್ಹಾ (12ನೇ ನಿ.), ತಂಗ್ಜಾಮ್ ದಿಗ್ಬಿಜೊಯ್ ಸಿಂಗ್ (63ನೇ ನಿ.), ಆರ್ಯನ್ ಎಫ್ ವೊಹ್ರಾ (64ನೇ ನಿ.), ಅದ್ವೈತ್ ಶ್ರೀನಿವಾಸ ಮೋಹನ್ ಐಯುನಿ (76ನೇ ನಿ.) ಗೋಲು ಬಾರಿಸಿದರು. ಬಾಯ್ಸ್ ತಂಡದ ಪರ ಎನ್. ಬಾರುನ್ (4ನೇ ನಿ.) ಗೋಲು ಬಾರಿಸಿದರು.

ಮೂರನೇ ಪಂದ್ಯದಲ್ಲಿ ಕಿಕ್ ಸ್ಟಾರ್ಟ್ ಎಫ್‌ಸಿ ತಂಡ 4–0 ಗೋಲುಗಳಿಂದ ಯಂಗ್ ಬ್ಲೂಸ್ ಎಲೀಟ್ ಎಫ್‌ಸಿ ತಂಡವನ್ನು ಸೋಲಿಸಿತು. ಕಿಕ್‌ಸ್ಟಾರ್ಟ್ ಎಫ್‌ಸಿಯ ಹೆನ್ರಿ ಬೈಯಾಕ್‌ಲಾಲಸಿಯಾಮ್ (8ನೇ ನಿ.), ಎ.ಆನಂದ್ ಆಸೀರ್ (45 + 2ನೇ ನಿ.), ವಿವೇಕ್ ಭಾಸ್ಕರ್ (63ನೇ ನಿ.) ಮತ್ತು ರಿತೇಶ್ ರೋಷನ್ ಹರಿಬಾಬು (81ನೇ ನಿ.) ಗೋಲು ಹೊಡೆದರು.

PROUDLY INDIAN
BPL Happy Little Things
BPL PRESENTS
TECH LOADED
AIR CONDITIONER
POWERED BY Ai
THE PERFECT COMBO OF SUPERIOR COOLING AND NEXT-GEN FEATURES
Wi-Fi
Direct Speak
DUAL INVERTER
EXPANDABLE 6-in-1
PM 0.1 Filter
IceWash
Gold Fin Coating
100% Copper
10 YEARS COMPRESSOR WARRANTY*
5 YEARS COMPREHENSIVE WARRANTY*
INSTALLATION @ 999*
0 DOWN PAYMENT*
Finance partners: BAJAJ FINSERV HDFC BANK IDFC FIRST Bank kotak HDB FINANCIAL SERVICES pine labs
*T&C Apply. Approval on Cashback/Down payment/EMI offers and loan sanction are subject to sole discretion of Finance/Bank/NBFC. 0 Down payment applicable on the select models with IDFC First Bank, HDFC & HDB. Features & offers may vary from product to product/ models. Valid on select partners/days/category/locations. Contact your nearest store for detailed condition before purchase. Creative visual representation.
ADISHWAR ELECTRO WORLD
devi INTERNATIONAL

ಕೆನರಾ ಬ್ಯಾಂಕ್
केनरा बैंक
Canara Bank
A Government of India Undertaking
Together We Can
ಬ್ಯಾಂಕಿಂಗ್‌ನಲ್ಲಿ ಐಷಾರಾಮಿ ಅನುಭವ ಪಡೆಯಿರಿ
ಪ್ರಸ್ತುತವಿದೆ
Canara Crest
WE VALUE YOUR PRESENCE
ಕೆನರಾ ಕ್ರೆಸ್ಟ್‌ನೊಂದಿಗೆ ಕೆನರಾ ಬ್ಯಾಂಕ್ ಖಾತೆದಾರರ ವಿಶಿಷ್ಟ ಕ್ಲಬ್‌ನ್ನು ಸೇರಿಕೊಳ್ಳಿ - ಇದು ನಿಮ್ಮ ಜೀವನಶೈಲಿಗೆ ಸರಿಹೊಂದುವ ಬ್ಯಾಂಕಿಂಗ್ ಸವಲತ್ತಾಗಿದೆ.
ನಿಮ್ಮ ಉಪಸ್ಥಿತಿಯು ನಮ್ಮನ್ನು ಅತ್ಯುತ್ತಮದತ್ತ ಸಾಗಲು ಪ್ರಚೋದಿಸುತ್ತದೆ.
ವಿಶೇಷ ಲಾಭಗಳನ್ನು ಆನಂದಿಸಿರಿ*
ಅಧಿಕ ಕ್ರೆಡಿಟ್ ಲಿಮಿಟ್‌ನೊಂದಿಗೆ ಪ್ರೀಮಿಯಮ್ ಡೆಬಿಟ್/ಕ್ರೆಡಿಟ್ ಕಾರ್ಡ್
ಏರ್‌ಪೋರ್ಟ್ ಲಾಂಜ್‌ಗೆ ಪ್ರವೇಶ (ಇಂಟರ್‌ನ್ಯಾಶನಲ್ ಹಾಗೂ ಡೊಮೆಸ್ಟಿಕ್)
ಉಚಿತ ಫಿಟ್‌ಪಾಸ್ ಪ್ರೋ ಮ್ಯಾಕ್ಸ್ ಸದಸ್ಯತ್ವ
ಏರ್‌ಪೋರ್ಟ್‌ನಲ್ಲಿ ಬ್ಯಾಗೇಜ್ ಸಹಾಯ ಹಸ್ತ
ಹೋಟೆಲ್ ಸ್ಟೇ ವೌಚರ್‌ಗಳು
ಈಸೀಡೈನರ್ ಉಚಿತ ವಾರ್ಷಿಕ ಸಬ್‌ಸ್ಕ್ರಿಪ್ಷನ್
ಅನನ್ಯ ಲೈಫ್‌ಸ್ಟೈಲ್ ಆಫರ್‌ಗಳು
ಪ್ರೀಮಿಯಮ್ ಹೋಟೆಲ್‌ಗಳಲ್ಲಿ ಯಾವುದೇ ಸಮಯ ಚೆಕ್ – ಇನ್
ಅನೇಕ ಸೌಲಭ್ಯಗಳು
ಪ್ರತಿಯೊಂದು ಶಾಖೆಯಲ್ಲೂ ಆದ್ಯತೆಯ ಸೇವೆ ಪಡೆಯಿರಿ
ಇವರಿಗಾಗಿ ಸದಸ್ಯತ್ವ ತೆರೆದಿದೆ : ಎಸ್‌ಬಿ ಬ್ಯಾಲೆನ್ಸ್ (₹10 ಲಕ್ಷ ಮತ್ತು ಅದಕ್ಕೂ ಹೆಚ್ಚು) ಹೊಂದಿರುವ ಈಗಾಗಲೇ ಇರುವ/ಹೊಸ ಗ್ರಾಹಕರು | ಕ್ರೆಸ್ಟ್ ಸೆಗ್ಮೆಂಟ್ (₹10 – 50 ಲಕ್ಷ) | ಕ್ರೆಸ್ಟ್ ಪ್ಲಸ್ ಸೆಗ್ಮೆಂಟ್ (₹50 ಲಕ್ಷ ಮತ್ತು ಅದಕ್ಕೂ ಹೆಚ್ಚು)
ನಿಯಮಗಳು ಮತ್ತು ಷರತ್ತುಗಳು ಅನ್ವಯ
*ಖಾತೆದಾರರ ವರ್ಗೀಕರಣದ ಆಧಾರದಲ್ಲಿ ಸವಲತ್ತುಗಳಲ್ಲಿ ವ್ಯತ್ಯಾಸವಾಗುತ್ತದೆ.
1 ಬ್ಯಾಂಕ್ ನಂಬರ್ 1800 1030 | www.canarabank.com
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

MARUTI SUZUKI ARENA
HAPPY UGADI
ಹೊಸ ಆರಂಭ ಹೊಸ ರೈಡ್!
ನಮ್ಮ ಅತ್ಯಾಕರ್ಷಕ ಕೊಡುಗೆಗಳನ್ನು ಈಗಲೇ ಪಡೆದುಕೊಳ್ಳಿ!
BUY BEFORE PRICE HIKE OF UP TO 4%
2 DAYS LEFT
FINANCE OFFERS
UP TO 100%^ ON-ROAD FUNDING AVAILABLE
3 years 100 000 km WARRANTY** EXTENDABLE UPTO 6 YEARS
ವಿಶೇಷ ಕೊಡುಗೆಗಳು
WAGONR ₹81 100* | ALTO K10 ₹76 100* | S-PRESSO ₹76 100*
BREZZA ₹38 000* | SWIFT ₹78 000* | CELERIO ₹76 100*| EECO ₹41 100*
SCAN TO CONNECT TO SHOWROOM NEAR YOU
E-BOOK TODAY AT WWW.MARUTISUZUKI.COM
Contact us at 1800-102-1800
T&C Apply Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. *Offer includes consumer offer, exchange bonus and institutional or rural offer (wherever applicable) on selected models/variants. Above mentioned savings amount is the value of maximum savings on selected models. Offer valid with selected financiers only. **3 years or 100 000 km whichever is earlier. Above offers are valid till 31st March, 2025. ^Available at selected financier and sole discretion of financier.